# ಕೇರಳ ಪಾಠಾವಳಿ
# KERALA READER

## ಕನ್ನಡ
## KANNADA

## ಮುಂದುವರಿದ ಪಠ್ಯ
## ADVANCED TEXT

ತರಗತಿ

IX

ಭಾಗ - 2

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ


ತಯಾರಿಸಿದವರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)
ವಿದ್ಯಾಭವನ ಪೂಜಪುರ, ತಿರುವನಂತಪುರ - 695 012

2024

ST-801-1-KANNADA (AT)-9-VOL-2

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆ ಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ. ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

Kannada - IX (Advanced Text) - Part II

---

Prepared by :
**State Council of Educational Research and Training (SCERT)**
Poojapura, Thiruvananthapuram - 695012 Kerala
website : scertkerala.gov.in. Email : scertkerala@gmail.com.
Phone : 0471-2341883. Fax : 0471-2341869
Typeset designed by : SCERT Kerala
First Edition : 2024
Printed at : KBPS Kakkanad, Kochi-30
© Department of General Education, Govt. of Kerala.

# ಮುನ್ನುಡಿ

ಪ್ರೀತಿಯ ವಿದ್ಯಾರ್ಥಿಗಳೇ,

ಭಾಷೆ ಕೇವಲ ಸಂವಹನದ ಸಾಧನವಲ್ಲ. ಅದು ನಮ್ಮ ಕಣ್ಣಿಗೆ ಸಮಾನವಾಗಿದೆ. ನಾವು ದಿನನಿತ್ಯ ಕಲಿಯುವ ಭಾಷೆಯಲ್ಲಿ, ಅದರಲ್ಲೂ ಮಾತೃಭಾಷೆಯಲ್ಲಿ ಮಾತನಾಡಲು, ಓದಲು ಮತ್ತು ಬರೆಯಲು ಕೇವಲ ಮೂಲಭೂತ ಭಾಷಾ ಕೌಶಲ್ಯಗಳಿದ್ದರೆ ಮಾತ್ರ ಸಾಕಾಗುವುದಿಲ್ಲ.

ಭಾಷೆಯ ಪ್ರಮುಖ ಶಕ್ತಿಯೆಂದರೆ ಅದು ನಮ್ಮನ್ನು ಕಲ್ಪನೆಯ ಕ್ಷೇತ್ರದಿಂದ ಆಚೆಗೆ ಕೊಂಡೊಯ್ಯಬಲ್ಲುದು. ಸೃಜನಶೀಲ ವಿದ್ಯಾರ್ಥಿಗಳಿಗೆ ಭಾಷಾ ಶಿಕ್ಷಣ ಪ್ರೇರಕ ಶಕ್ತಿಯಾಗುತ್ತದೆ. ಕೆಲವರ ಭಾಷಾ ಶೈಲಿಯೇ ಅವರನ್ನು ಪ್ರತ್ಯೇಕವಾಗಿ ಗುರುತಿಸುವಂತೆ ಮಾಡುತ್ತದೆ. ನಾವೂ ನಮ್ಮದೇ ಆದ ಭಾಷಾ ಶೈಲಿಯನ್ನು ಬೆಳೆಸಿಕೊಳ್ಳಲು ಭಾಷೆಯನ್ನು ಕಲಿಯಬೇಕು.

ಭಾಷಾ ಪಠ್ಯಪುಸ್ತಕವು ಮುದ್ರಿತ ಪತ್ರಿಕೆಗಳ ಸಂಗ್ರಹವಲ್ಲ; ಅದರಲ್ಲಿ ಉತ್ತಮ ಶಿಕ್ಷಕರು, ವಿಜ್ಞಾನಿಗಳು ಮತ್ತು ತತ್ವಜ್ಞಾನಿಗಳು ಅಡಗಿರುತ್ತಾರೆ. ಪಠ್ಯಪುಸ್ತಕವು ನಮ್ಮ ಬದುಕಿಗೆ ಮಾರ್ಗದರ್ಶಕವಾಗಿರುತ್ತದೆ, ಒಬ್ಬರಿಗೊಬ್ಬರು ಬೆರೆಯುವ ಗೆಳೆಯರಂತೆ ಇರುತ್ತದೆ, ಹಿತೈಷಿಗಳಂತೆ ಇರುತ್ತದೆ ಎನ್ನಬಹುದು. ಪಠ್ಯಪುಸ್ತಕವು ನಾವು ಸೇರಿರುವ ಸಮಾಜದ ಸುಖ-ದುಃಖಗಳಲ್ಲಿ ಭಾಗವಹಿಸುವಂತೆ ಮಾಡುತ್ತದೆ ಮತ್ತು ನಾವು ವಾಸಿಸುವ ದೇಶದ ಅಭಿವೃದ್ಧಿಯಲ್ಲಿ ಭಾಗವಹಿಸಲು ಪ್ರೋತ್ಸಾಹಿಸುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಉತ್ತಮ ಶಿಕ್ಷಕರ ಸಹಾಯದಿಂದ ನಮ್ಮ ಜ್ಞಾನವನ್ನು ಬೆಳೆಸಿಕೊಳ್ಳಲು ಸಹಾಯ ಮಾಡುತ್ತದೆ. ಸುದೃಢ, ಸ್ವಸ್ಥ ಸಮಾಜ ನಿರ್ಮಾಣಕ್ಕೆ ಪಠ್ಯಪುಸ್ತಕವು ಸಹಕಾರಿಯಾಗಬೇಕು. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಈ ಪಠ್ಯಪುಸ್ತಕವನ್ನು ರೂಪಿಸಲಾಗಿದೆ.

ಭಾಷಾ ಪಠ್ಯಪುಸ್ತಕವು ನಿಮ್ಮ ಚಿಂತನೆಯನ್ನು ಶ್ರೀಮಂತಗೊಳಿಸಲಿ.

ಅಭಿನಂದನೆಗಳು,

**ಡಾ. ಜಯಪ್ರಕಾಶ್ ಆರ್.ಕೆ.**
ನಿರ್ದೇಶಕರು,
ಎಸ್.ಸಿ.ಇ.ಆರ್.ಟಿ., ಕೇರಳ

ತಿರುವನಂತಪುರ

# TEXT BOOK DEVELOPMENT COMMITTEE
## KANNADA - IX AT - Part II

**Advisor**
**Shivashankara P.**
Asst. Professor, GPM College, Manjeshwar

**Chairperson**
**Dr. P. Shrikrishna Bhat**
Rtd. HOD, Government College, Kasaragod

**Experts**
**Dr. Subbanna Rai**
Professor, Kannada University, Hampi
**Dr. A. Mohana Kuntar**
Professor, Kannada University, Hampi
**Dr. Narendra Rai Derla**
Professor, GFW College, Puttur
**Dr. Vijaya Moleyar**
Professor, St. Philomina College, Puttur

**Artists**
**Divakar**
Rtd. Drawing Teacher, Kasaragod
**Prakash**
Drawing Teacher, BRC Manjeshwara
**Sathyanarayana Aila**
Drawing Teacher, GHSS Mangalpady

**Participants**
**Rajarama Rao T.**
HST, SVVHSS Meeyapadavu
**Sarvamangala P.**
HST, NHSS Peradala
**Rohithakshi K.B.**
HST, BEMHSS Kasaragod
**Shrilatha K.**
HST, SGKHS Kudlu
**Divyaganga P.**
HST, GHSS Belluru
**Kavitha K.**
HST, GVHSS Kunjathur
**Ravi B.**
HST, GHSS Adoor
**Saraswathi K.N.**
HST, GHSS Padre
**Kamalakshi**
HST, KVSMHS Kurudapadavu

**Academic Co-ordinator**
**Dr. Sahaya Dhas D.**
Research Officer, SCERT, Thiruvananthapuram

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)
ವಿದ್ಯಾಭವನ ಪೂಜಪುರ, ತಿರುವನಂತಪುರ - 695 012

# ಅನುಕ್ರಮಣಿಕೆ


| ಕ್ರಮಸಂಖ್ಯೆ | ಘಟಕ | ಪುಟ ಸಂಖ್ಯೆ |
|---|---|---|
| **ಘಟಕ – 4 : ಉಳುಮೆಯೆ ಉಸಿರು** | | **87- 108** |
| • ಕೂಡುಮನೆ | ಕಿರುಕಾದಂಬರಿ | ರಾಧಾಕೃಷ್ಣ ಕಲ್ಚಾರ್ |
| • ನಾವು ಗೆಲುವೆವು | ಕವನ | ಕಯ್ಯಾರ ಕಿಞ್ಞಣ್ಣ ರೈ |
| • ಹಸಿರೊಡಲ ಬೆಳಕು | ವ್ಯಕ್ತಿಚಿತ್ರ | ಎನ್.ಎಲ್. ಆನಂದ್, ಗುಂಡಪ್ಪ ದೇವಿಕೇರಿ |
| **ಘಟಕ - 5 : ಮಾನವೀಯತೆಯ ಸೆಲೆ** | | **109 - 137** |
| • ಅಂತರಂಗವ ಕಾಂಬರಾರು | ಸಾಂಗತ್ಯ | ರತ್ನಾಕರ ವರ್ಣಿ |
| • ದಾರಿ ಯಾವುದಯ್ಯಾ? | ಲಲಿತಪ್ರಬಂಧ | ಎಚ್. ಡುಂಡಿರಾಜ್ |
| • ಮುನ್ನಡೆಸು ಬೆಳಕಿನೆಡೆಗೆ | ನಾಟಕ | ಲೀಲಾ ಮಣ್ಣಾಲ |

# ಭಾರತದ ಸಂವಿಧಾನ

## ಪ್ರಸ್ತಾವನೆ

ಭಾರತದ ಜನತೆಯಾದ ನಾವು,
ಭಾರತವನ್ನು ಸಾರ್ವಭೌಮ, ಸಮಾಜವಾದಿ, ಧರ್ಮನಿರಪೇಕ್ಷ
ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ
ರೂಪಿಸುವುದಕ್ಕಾಗಿ;
ಭಾರತದ ಎಲ್ಲಾ ಪ್ರಜೆಗಳಿಗೆ
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು;
ವಿಚಾರ, ಅಭಿವ್ಯಕ್ತಿ, ನಂಬಿಕೆ, ಧರ್ಮ ಮತ್ತು
ಉಪಾಸನೆಯ ಸ್ವಾತಂತ್ರ್ಯವನ್ನು;
ಸ್ಥಾನಮಾನ ಮತ್ತು ಅವಕಾಶಗಳ ಸಮಾನತೆಯನ್ನು
ದೊರೆಯುವಂತೆ ಮಾಡುವುದಕ್ಕಾಗಿ;
ವ್ಯಕ್ತಿಗೌರವ, ದೇಶದ ಏಕತೆ ಮತ್ತು ಸಮಗ್ರತೆಗಾಗಿ ಎಲ್ಲರಲ್ಲಿ
ಭ್ರಾತೃತ್ವ ಭಾವನೆಯನ್ನು ಮೂಡಿಸುವುದಕ್ಕೆ
ದೃಢಸಂಕಲ್ಪ ಮಾಡಿ,
ನಮ್ಮ ಸಂವಿಧಾನ ಸಭೆಯಲ್ಲಿ
1949ನೆಯ ಇಸವಿಯ ನವೆಂಬರ್ ತಿಂಗಳ 26ನೇ ದಿನದಂದು
ಈ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡು
ಅಂಗೀಕರಿಸಿ,
ಶಾಸನವಾಗಿ ವಿಧಿಸಿಕೊಂಡಿದ್ದೇವೆ.

# 4. ಉಳುಮೆಯೆ ಉಸಿರು

ಭಾರತವು ಕೃಷಿ ಪ್ರಧಾನ ದೇಶ. 'ರೈತನೇ ದೇಶದ ಬೆನ್ನೆಲುಬು' ಎಂಬ ನುಡಿಯಂತೆ ಒಂದು ದೇಶದ ಬದುಕಿಗೆ ಕೃಷಿ ಅತ್ಯಗತ್ಯ. ತಂತ್ರಜ್ಞಾನ ಎಷ್ಟೇ ಮುಂದುವರಿದರೂ ಜೀವ ಸಂಕುಲದ ಉಳಿವಿಗೆ ಆಹಾರ ಭದ್ರತೆಯು ಅಗತ್ಯವಾಗಿದೆ. ದೇಶ ಎದುರಿಸುತ್ತಿರುವ ಆಹಾರ ಭದ್ರತೆಯ ಸವಾಲಿಗೆ ಕೃಷಿಯೊಂದೆ ಪರಿಹಾರ ಮಾರ್ಗವಾಗಿದೆ. ಯುವ ಪೀಳಿಗೆ ಕೃಷಿಯ ಕಡೆಗೆ ಹೆಜ್ಜೆ ಇಡಬೇಕಾಗಿದೆ. ಭೂಮಿತಾಯಿಯಲ್ಲಿ ದೈವತ್ವವನ್ನು ಕಂಡುಕೊಂಡು ಬೆಳೆದ ನಮ್ಮ ಹಿರಿಯರ ಮಾರ್ಗದರ್ಶನದಲ್ಲಿ ಮುಂದಡಿಯಿಟ್ಟು ಕೃಷಿ ಅಭಿವೃದ್ಧಿಗೆ ಕೈಜೋಡಿಸಬೇಕಾಗಿದೆ. ಪ್ರಕೃತಿಯ ಸೊಬಗನ್ನು ಆಸ್ವಾದಿಸುತ್ತಾ ಅದರೊಂದಿಗೆ ಬೆರೆತು, ಪ್ರಕೃತಿಯ ಸಹಜತೆಗೆ ಧಕ್ಕೆ ಬಾರದಂತೆ ಜೈವ ಕೃಷಿಯನ್ನು ಮಾಡಿ ಧನ್ಯತೆ ಪಡೆಯಬೇಕಾಗಿದೆ.

ಜನಪದ ತ್ರಿಪದಿಗಳೊಂದಿಗೆ 'ಉಳುಮೆಯೆ ಉಸಿರು' ಎಂಬ ಘಟಕಕ್ಕೆ ಪ್ರವೇಶವಾಗುತ್ತದೆ. ಭೂಮಿ ತಾಯಿಗೆ ನಮಸ್ಕರಿಸುವುದರಿಂದ ಜನಪದರ ದಿನಚರಿಗಳು ಆರಂಭವಾಗುತ್ತವೆ ಎನ್ನುವುದನ್ನು ಈ ತ್ರಿಪದಿಗಳು ತಿಳಿಸುತ್ತವೆ. ಕೃಷಿ ಕಾಲೇಜಿನಲ್ಲಿ ಪದವಿ ಪಡೆದ ಶ್ರೀಧರನು ಸಹಜ ಕೃಷಿಯತ್ತ ಒಲವು ತೋರಿ, ಊರಿಗೆ ಮರಳಿದ ಸಂದರ್ಭವು ರಾಧಾಕೃಷ್ಣ ಕಲ್ಚಾರರ 'ಕೂಡುಮನೆ' ಎಂಬ ಕಿರುಕಾದಂಬರಿಯ ಭಾಗದಲ್ಲಿ ಚಿತ್ರಿತವಾಗಿದೆ. ಕಯ್ಯಾರಕಿಞ್ಞಣ್ಣ ರೈಯವರ 'ನಾವು ಗೆಲುವೆವು' ಕವನವು ಧೈರ್ಯ, ಸಾಹಸ ಮೆರೆದು ಕೃಷಿ ಮಾಡಿ ತುಂಬು ಸಂಸಾರದೊಂದಿಗೆ ಬಾಳಿದ ಹಿರಿಯರ ಹಿರಿಮೆ ಹಾಗೂ ಛಲವನ್ನು ಸೂಚಿಸುತ್ತದೆ. ಎನ್.ಎಲ್ ಆನಂದ್ ಹಾಗೂ ಗುಂಡಪ್ಪ ದೇವಿಕೇರಿಯವರ 'ಹಸಿರೊಡಲ ಬೆಳಕು' ಎಂಬ ವ್ಯಕ್ತಿಚಿತ್ರವು ನೇಗಿಲಯೋಗಿ ನಾರಾಯಣ ರೆಡ್ಡಿಯವರ ಕೃಷಿ ಪ್ರೀತಿಯನ್ನು ಪ್ರಸ್ತುತಪಡಿಸುತ್ತದೆ.



## ಜನಪದ ತ್ರಿಪದಿ

ಬೆಳಗಾಗ ನಾನೆದ್ದು ಯಾರ್ಯಾರ ನೆನೆಯಾಲಿ
ಎಳ್ಳು ಜೀರಿಗೆ ಬೆಳೆಯೋಳ | ಭೂತಾಯ
ಎದ್ದೊಂದು ಘಳಿಗೆ ನೆನೆದೇನೋ ||

ಜನಪದ ತ್ರಿಪದಿಗಳು ಜಾನಪದ ಬದುಕಿನ ಜೀವಮಿಡಿತಗಳಾಗಿವೆ. ಅವರ ದೈನಂದಿನ ಬದುಕಿನ ಆಗುಹೋಗುಗಳೆಲ್ಲಾ ಈ ತ್ರಿಪದಿಗಳಲ್ಲಿ ಪಡಿಮೂಡಿವೆ. ಭೂಮಿ ತಾಯಿಯ ಜೊತೆಗಿನ ಜನಪದರ ಅವಿನಾಭಾವ ಸಂಬಂಧವನ್ನು ಈ ತ್ರಿಪದಿ ತಿಳಿಸುತ್ತದೆ. ಬೆಳಗ್ಗೆ ಎದ್ದ ಕೂಡಲೇ ಎಳ್ಳು ಜೀರಿಗೆ ಬೆಳೆವ, ಆ ಮೂಲಕ ಅನ್ನ ನೀಡುವ ಭೂಮಿ ತಾಯಿಯನ್ನು ನೆನೆಯುವ ಜನಪದ ಹೆಣ್ಣುಮಗಳು ಅವಳನ್ನಲ್ಲದೆ ಬೇರೆ ಯಾರನ್ನು ನೆನೆಯಲಿ ಎನ್ನುತ್ತಾ ಭೂಮಿ ತಾಯಿಯ ಬಗ್ಗೆ ತನಗಿರುವ ಪ್ರೀತಿ, ಭಕ್ತಿಯನ್ನು ಅಭಿವ್ಯಕ್ತಪಡಿಸುತ್ತಾಳೆ.

**ಕೆಳಗಿನ ತ್ರಿಪದಿಯನ್ನು ಓದಿ ಮೇಲಿನಂತೆಯೇ ಆಶಯವನ್ನು ಬರೆಯಿರಿ.**

ಹೂಡೋದು ಹೊಸೆತ್ತು ಹೂಡ್ಯಾನು ಹೊಸಮಗ
ಕೂಗು ಕೇಳಮ್ಮ ಭೂದೇವಿ | ನಿನಮಗ
ಸೆರಗು ಕಟ್ಟವನೆ ದುಡಿಯೋಕೆ ||

# ಕೂಡು ಮನೆ

- ರಾಧಾಕೃಷ್ಣ ಕಲ್ಚಾರ್

ರಾತ್ರಿ ಒಂಬತ್ತೂವರೆಗೆ ಹೊರಡುವ ಬೆಂಗಳೂರು ಮಂಗಳೂರು ಸೂಪರ್ ಡಿಲಕ್ಸ್ ಬಸ್ಸಿನಲ್ಲಿ ಕುಳಿತಿದ್ದ ಶ್ರೀಧರ. ಬಸ್ಸು ಹೊರಡಲು ಇನ್ನೂ ಅರ್ಧ ಗಂಟೆ ಇತ್ತು. ಆ ಅರ್ಧ ಗಂಟೆ ಕಳೆದರೆ ಬೆಂಗಳೂರಿಗೆ ವಿದಾಯ ಹೇಳಿದಂತೆಯೇ ಅಂದುಕೊಂಡನವ. ತನ್ನ ಬದುಕಿನ ಅಮೂಲ್ಯ ಮೂರು ವರ್ಷಗಳನ್ನು ಕಳೆದ ಕೃಷಿ ಕಾಲೇಜು, ಸಹಪಾಠಿಗಳು, ಅಧ್ಯಾಪಕರು, ತರಗತಿಗಳು, ಪ್ರಾಯೋಗಿಕ ಅಭ್ಯಾಸಗಳು, ಓದಿದ ಪುಸ್ತಕಗಳು, ಹಾಸ್ಟೆಲು ಎಲ್ಲ ಚಿತ್ರಗಳು ಕಣ್ಣೆದುರು ಸಿನಿಮಾದಂತೆ ನಲಿದವು. ಹೇಗೆ ಕಳೆದುಹೋದವು ಮೂರು ವರ್ಷಗಳು! 'ಕಾಲಪುರುಷನಿಗೆ ಗುಣವಿಲ್ಲ' ಎಂದು ಅಜ್ಜ ತನ್ನ ಎಳವೆಯಲ್ಲಿ ಮುದ್ದಣನ ಕಾವ್ಯ ಓದಿ ಬಣ್ಣಿಸಿದ್ದು ನೆನಪಾಯಿತವನಿಗೆ. ಹೆಬ್ಬಾಳದ ಕೃಷಿ ಕಾಲೇಜಿನಲ್ಲಿ ಅಗ್ರಿಕಲ್ಚರಲ್ ಬಿ.ಎಸ್ಸಿ. ಓದಲೆಂದು ಮನೆಬಿಟ್ಟು ಹೊರಟಾಗ ಎಂಥ ತಬ್ಬಲಿತನ ತನ್ನನ್ನು ಕಾಡಿತ್ತು! ಅಜ್ಜನ ಬಿಸುಪಾದ ಮಡಿಲು, ಅಪ್ಪನ ದುಃಖ ತುಂಬಿದ ನೋಟ, ತಲೆಯನ್ನು ಕೆದರಿಸಿ ನೇವರಿಸುತ್ತಿದ್ದ ಚಿಕ್ಕಮ್ಮ ಜಾನಕಿಯ ಕಣ್ಣೀರು, ಅಂಗಳದ ಅಂಚಿನಲ್ಲಿ ಸಾಲುಗಟ್ಟಿ ನಿಂತು ತನ್ನನ್ನು ಬೀಳ್ಕೊಟ್ಟ ಮನೆಮಂದಿ ಹಗ್ಗ ಹಾಕಿ ಹಿಂದೆ ಜಗ್ಗುತ್ತಿದ್ದಾರೇನೋ ಎಂಬ ಭಾವನೆ. ಮನೆಯಲ್ಲಿ ಇವರೆಲ್ಲರ ಪ್ರೀತಿಯನ್ನು ಸವಿಯುತ್ತ ಉಳಿದುಬಿಡಲೇ ಎಂದುಕೊಂಡ ಕ್ಷಣವದು. ಆ ಮೇಲಿನದೆಲ್ಲ ಸ್ವಪ್ನ ಚಿತ್ರಗಳು. ಬೆಂಗಳೂರಿಗೆ ಬಂದದ್ದು, ಕಾಲೇಜು ಸೇರಿಕೊಂಡದ್ದು ಇತ್ಯಾದಿ, ಚಿಕ್ಕಪ್ಪ ರಾಜಾರಾಮ ತನ್ನನ್ನು ಹಾಸ್ಟೆಲಿಗೆ ಸೇರಿಸಿ ಎಚ್ಚರದಿಂದಿರುವಂತೆ ನಾಲ್ಕಾರು ಬಾರಿ ಹೇಳಿ, ಕೈಗೊಂದಿಷ್ಟು ಹಣ ನೀಡಿ ಅದೇ ದಿನ ಮರಳಿ ಹೊರಟುಬಿಟ್ಟಿದ್ದ.

ದಟ್ಟ ಕತ್ತಲೆಯಿಂದ ಹಠಾತ್ತನೆ ಬೆಳಕಿಗೆ ಬಂದ ಅನುಭವ ತನ್ನದು. ಬದುಕಿನಲ್ಲಿ ಬರೀ ಸಿಹಿಯಲ್ಲ, ಕಹಿಯೂ ಅಲ್ಲಲ್ಲಿ ಸೇರಿದೆ ಎಂದು ಆ ಬಳಿಕದ ಅನುಭವ ತನಗೆ ಕಲಿಸಿತು. ಒಂದು ಬಣ್ಣಬಣ್ಣದ ಕಾಮನ ಬಿಲ್ಲು ಕಣ್ಣೆದುರು ಕುಣಿದಾಗಲೂ ತಾನು ಎಚ್ಚರ ತಪ್ಪಲಿಲ್ಲ. ತನಗೆ ಅಷ್ಟು ಕಾಲ ಶ್ರೀರಕ್ಷೆಯಾಗಿ ನಿಂತದ್ದು ಶಂಭಟ್ಟರು ಕಲಿಸಿದ ನೈತಿಕ ಜೀವನವ್ರತವೇ ಇರಬೇಕೇನೊ, ಹಗಲಿರುಳು ಎನ್ನುವಂತಿಲ್ಲವಾದರೂ ಸಾಕಷ್ಟು ಪರಿಶ್ರಮ ವಹಿಸಿ ಅಧ್ಯಯನ ಮಾಡಿದನವನು.

ಆ ವರ್ಷದ ತಂಡದಲ್ಲಿ ಶ್ರೀಧರನೇ ಮಾದರಿ ವಿದ್ಯಾರ್ಥಿಯಾದ, ಅಧ್ಯಾಪಕರಿಗೂ ಪ್ರಿಯನಾದ. ಸ್ವಭಾವತಃ ಅಂತರ್ಮುಖಿಯಾದ ಅವನ ಆ ಸ್ವಭಾವವೇ ಬಿಕ್ಕಟ್ಟಿನ ಪ್ರಸಂಗಗಳು ಎದುರಾದಾಗಲೂ ಅವನನ್ನು ರಕ್ಷಿಸಿತು. ಹೀಗೆ ಮೂರು ವರ್ಷಗಳನ್ನು ವಿಭಿನ್ನ ಪರಿಸರದಲ್ಲಿ ಕಳೆದ ಶ್ರೀಧರ. ಪದವಿ ಮುಗಿಯುವ ವೇಳೆಗೆ ಪಕ್ವ ಮನಸ್ಸಿನ, ಸಮಗ್ರವೆನ್ನಬಹುದಾದ ವ್ಯಕ್ತಿತ್ವವನ್ನು ಗಳಿಸಿಕೊಂಡಿದ್ದ.

ಬಸ್ಸಿನಲ್ಲಿ ಕುಳಿತು ಕಳೆದ ದಿನಗಳ ನೆನಪನ್ನು ಮೆಲುಕು ಹಾಕಿದ ಶ್ರೀಧರ, ಬಸ್ಸು ಹೊರಟಾಗ ಇಹ

ಪ್ರಪಂಚಕ್ಕೆ ಬಂದ. ಬಸ್ಸು, ನಿಲ್ದಾಣದ ಆವರಣ ದಾಟಿ ವೇಗ ಹೆಚ್ಚಿಸಿಕೊಂಡಿತು. ನೂರಾರು ದೀಪಗಳಿಂದ ಮಿನುಗುತ್ತಿದ್ದ ಬೆಂಗಳೂರು ನಗರದ ಗಗನ ಚುಂಬಿಗಳು ತಲೆಯೆತ್ತಿ, 'ಹೋಗಿ ಬಾ' ಎಂದು ಹೇಳಿದಂತಾಯಿತು ಅವನಿಗೆ. ತನ್ನ ಕಲ್ಪನೆಗೆ ತನ್ನೊಳಗೇ ನಕ್ಕ. ನಗರದ ವಲಯ ದಾಟುತ್ತಿದ್ದಂತೆ ನಿದ್ರೆ ಮಾಡಬೇಕು. ಇಲ್ಲವಾದರೆ ನಾಳೆ ಮನೆಮಂದಿಯೊಂದಿಗೆ ಪಟ್ಟಾಂಗ ಹೊಡೆಯಲಾಗುವುದಿಲ್ಲ ಎಂದುಕೊಂಡನಾದರೂ ಮನೆಯ ನೆನಪಾಗುತ್ತಿದ್ದಂತೆ ನಿದ್ರೆ ಎತ್ತಲೋ ಹಾರಿಹೋಯಿತು. ಹೇಗಿರಬಹುದೀಗ ಮನೆ? ಯೋಚಿಸುತ್ತಿದ್ದಂತೆ ಮನಸ್ಸು ಮುದಗೊಂಡು ತುಟಿಗಳಲ್ಲಿ ಮಂದಹಾಸ ಕಾಣಿಸಿಕೊಂಡಿತು. ವರ್ಷಕ್ಕೊಮ್ಮೆ ಮನೆಗೆ ಹೋಗುತ್ತಿದ್ದರೂ ಆಗೆಲ್ಲ ಬೆಂಗಳೂರಿಗೆ ಮರಳಬೇಕಲ್ಲ ಎಂಬ ಯೋಚನೆ ಕಾಡುತ್ತಿತ್ತು. ಈಗ ಹಾಗಲ್ಲ. ಶಾಶ್ವತವಾಗಿ ಮನೆಯಲ್ಲಿ ಉಳಿಯಲೆಂದೇ ಹೋಗುತ್ತಿದ್ದೇನೆಂಬ ಯೋಚನೆಯೇ ಅವನನ್ನು ಪುಳಕಗೊಳಿಸಿತು. 'ಈಗ ಬಂದೆಯ ಮಗು' ಎಂದು ಮುಗುಳ್ನಗುವ ಅಜ್ಜ, ಆಪ್ತವಾಗಿ ಹೆಗಲಿಗೆ ಕೈ ಹಾಕಿ ಮಾತನಾಡಿಸುವ ಚಿಕ್ಕಪ್ಪ ರಾಜಾರಾಮ, ಹಿಡಿದ ಕೆಲಸ ಹಾಗೇ ಬಿಟ್ಟು ಓಡಿ ಬರುವ ಜಾನಕಿ ಚಿಕ್ಕಮ್ಮ, ಪದವೀಧರ ಮಗನನ್ನು ಹೆಮ್ಮೆಯಿಂದ ನೋಡುವ ಅಪ್ಪ, ಶಂಕರ ಚಿಕ್ಕಪ್ಪ, ಚಿಕ್ಕಮ್ಮಂದಿರು, "ಓ ಶ್ರೀಧರಣ್ಣ ಬಂದಾ" ಎಂದು ಕುಣಿದಾಡುವ ತಮ್ಮ ತಂಗಿಯರು, 'ಅಣ್ಣನವರು ಯಾವಾಗ ಬಂದಿರಿ?' ಎಂದು ವಿಚಾರಿಸಿಕೊಳ್ಳುವ ಕೆಲಸದಾಳುಗಳು... ಶ್ರೀಧರ ಈಗಾಗಲೇ ಮನೆ ತಲುಪಿಬಿಟ್ಟಂತೆ ಹಿಗ್ಗಿದ. ಬಸ್ಸು ಮಾತ್ರ ಏಕಪ್ರಕಾರವಾಗಿ ಮೊರೆಯುತ್ತ ಸಾಗುತ್ತಿತ್ತು.

ಶ್ರೀಧರನ ಮನಸ್ಸು ಇನ್ನೊಂದು ಮಗ್ಗುಲಿಗೆ ಹೊರಳಿತು, ಎಷ್ಟು ದೊಡ್ಡ ಆಸ್ತಿ ನಮ್ಮದು! ಕೃಷಿ ಮಾಡಿದ ಭೂಮಿ ಕಡಿಮೆಯೇ ಆದರೂ, ಅದಕ್ಕೆ ವಿಪುಲ ಅವಕಾಶವಿತ್ತು. ಧಾರೆಯಾಗಿ ಹರಿದು ಬರುವ ಒರತೆ ನೀರು, ಪಂಪಿನ ಸಹಾಯವೇ ಬೇಡ, ಗುಡ್ಡ ಕಡಿದು ತೋಟ ಮಾಡಿದರೂ ಅದನ್ನು ಮುಳುಗಿಸುವಷ್ಟು ನೀರು. ಹೆಚ್ಚಿನದೆಲ್ಲ ಅಜ್ಜನ-ಸ್ವಾರ್ಜಿತವೇ, ಪಿತ್ರಾರ್ಜಿತವಾಗಿ ಬಂದದ್ದು ಕುಮೇರಿಯ ಹತ್ತಿರದ ಮೂಲಮನೆ ಮತ್ತು ತೋಟ ಮಾತ್ರ. ಅಜ್ಜ ಸ್ವತಃ ಬೆವರು ಹರಿಸಿ ದುಡಿದು ಆಸ್ತಿಯ ಗಾತ್ರ ಹೆಚ್ಚಿಸಿದ್ದರು. ಊರಿಗೆ ಉಪಕಾರಿಯಾಗಿ ಬಾಳಿದ ಅವರ ಏಳಿಗೆಯನ್ನು ಕಂಡು ಕರುಬುವವರಾರೂ ಇರಲಿಲ್ಲ. ಸಾಹಸಮಯ ಜೀವನಕ್ಕೆ ಅಜ್ಜ ಒಂದು ದೃಷ್ಟಾಂತವಾಗಿದ್ದರು. ಅವರ ಸಾಹಸದ ಫಲವಾಗಿ ಅಷ್ಟು ದೊಡ್ಡ ಕುಟುಂಬವಿಂದು ಸುಖವಾಗಿ ಉಂಡುಟ್ಟು ನಲಿಯುತ್ತಿತ್ತು. ಅಜ್ಜನಿಗೆ ಕೃಷಿಭೂಮಿಯನ್ನು ವಿಸ್ತರಿಸಿ ಸಮೃದ್ಧ ಫಸಲನ್ನು ಪಡೆಯಬೇಕೆಂಬ ಹಂಬಲವಿತ್ತಾದರೂ, ಇಷ್ಟು ಮಾಡುವ ಹೊತ್ತಿಗೆ ಅವರ ರಟ್ಟೆ ಸೋಲತೊಡಗಿತ್ತು, ಮಕ್ಕಳು ಸ್ವತಃ ಹೆಚ್ಚೇನೂ ಮಾಡದಿದ್ದರೂ, ಇರುವುದನ್ನು ಹಾಗೆಯೇ ಉಳಿಸಿ ಕಾಪಾಡಿಕೊಂಡು ಬಂದಿದ್ದರು.

ತಾನಾದರೂ ಅಜ್ಜನ ಹಂಬಲವನ್ನು

ಈಡೇರಿಸಬೇಕು ಎಂದುಕೊಂಡ ಶ್ರೀಧರ. ಅಜ್ಜನ ಭವ್ಯಾಕೃತಿ ಅವನ ಮನಸ್ಸಿನಲ್ಲಿ ಮೂಡಿತು. ತನ್ನಲ್ಲಿ ಜೀವನ ಪ್ರೇಮವನ್ನು, ಸಾಹಸಗುಣವನ್ನು ತುಂಬಿದವರೇ ಅವರು. ಎಳವೆಯಿಂದಲೇ ತನ್ನ ಮೇಲೆ ಅವರ ವ್ಯಕ್ತಿತ್ವದ ದಟ್ಟ ಪ್ರಭಾವ, "ನೋಡು ಮಗು, ಪ್ರಕೃತಿಯನ್ನು ತಾಯಿ ಎನ್ನುತ್ತಾರೆ, ಆದರೆ ಈ ತಾಯಿ ಎಲ್ಲ ತಾಯಂದಿರ ಹಾಗಲ್ಲ, ತಾಯಿ ಬಂದು ಹಾಲು ಕುಡಿಸಲಿ ಎಂದು ಕೈ ಕಾಲು ಚಾಚಿ ಮಲಗಿದ ಮಗುವನ್ನು ಅವಳು ಮೆಚ್ಚುವುದಿಲ್ಲ, ಮಗು ತಾನಾಗಿ ಏಳಬೇಕು. ಪರಿಶ್ರಮದಿಂದ ಈ ತಾಯಿ ಇದ್ದಲ್ಲಿಗೆ ಹೋಗಬೇಕು, ಆಡಿ, ಕುಣಿದು, ಹಾಡಿ ಅವಳನ್ನು ಒಲಿಸಿಕೊಳ್ಳಬೇಕು. ಆಗ ನೋಡು, ಸಮೃದ್ಧ ಹಾಲು ಆ ಮಗುವಿನ ಪಾಲಿಗೆ" ಶ್ರೀಧರನನ್ನು ಕೂರಿಸಿಕೊಂಡು ಎಷ್ಟು ಬಾರಿ ಇಂತಹ ಮಾತುಗಳನ್ನಾಡಿದ್ದರೋ.

ಅಜ್ಜನ ಮೇಲಿದ್ದ ಪೂಜ್ಯಭಾವವೇ ತನ್ನನ್ನು ಕೃಷಿಗೆ ಒಲಿಯುವಂತೆ ಪ್ರೇರೇಪಿಸಿತೇ ಎಂದು ಶ್ರೀಧರ ತನ್ನನ್ನು ಪ್ರಶ್ನಿಸಿಕೊಳ್ಳುವುದಿತ್ತು. ಅವರು ತನ್ನ ಕಣ್ಣಿಗೆ ಕಟ್ಟುವಂತೆ ಬದುಕಿನ ಚಿತ್ರಗಳನ್ನು ಬರೆಯುತ್ತಿದ್ದರು. ಅದೆಲ್ಲ ಒಂದು ಆದರ್ಶವೇ ಆಗಿ ತನ್ನ ಮನದಲ್ಲಿ ಬೇರೂರಿಬಿಟ್ಟಿತ್ತು. ಅದೆಷ್ಟು ಬಲವಾಗಿ ಇತ್ತೆಂದರೆ ಈ ಪ್ರಬುದ್ಧ ಮನಸ್ಸಿನಿಂದಲೂ ಅದನ್ನು ಕೀಳುವುದು ಸಾಧ್ಯವಾಗಲಿಲ್ಲ. ಬಹುಶಃ ಅಜ್ಜನ ಪ್ರಾಮಾಣಿಕತೆಯೂ ಇದಕ್ಕೆ ಕಾರಣವಿರಬೇಕು. ಒಬ್ಬ ಸಾಮಾನ್ಯ ಸರಕಾರಿ ನೌಕರನಾಗಿ ಅದೇ ತನ್ನ ವಿದ್ಯಾಭ್ಯಾಸದ ಸಾರ್ಥಕತೆ ಎಂದು ತಿಳಿಯಬಹುದಾಗಿದ್ದ ತಾನು, ಹಾಗಾಗದೆ ನನಗೆ ಒಬ್ಬ ಕೃಷಿಕನಾಗಿ ಮಣ್ಣಿನಲ್ಲಿ ಹೊಸ ಚಿಗುರು ಮೂಡಿಸಬೇಕೆಂಬ ಹಂಬಲ ತನ್ನಲ್ಲಿ ಹುಟ್ಟಿಕೊಳ್ಳುವುದಕ್ಕೆ ಪರೋಕ್ಷವಾಗಿಯೂ ಪ್ರತ್ಯಕ್ಷ ವಾಗಿಯೂ ಅಜ್ಜನೇ ಕಾರಣ. ಹಾಗೊಂದು ಒಳದನಿ ತನ್ನಲ್ಲಿ ಬಲವಾಗಿ ಉಂಟಾಗದಿದ್ದರೆ ನಗರದ ಬೆಡಗಿನ ಸೆಳೆತ ತನ್ನನ್ನು ನುಂಗಿಯೇ ಬಿಡುತ್ತಿತ್ತೇನೋ ಅಂದುಕೊಂಡನವ. ತನ್ನ ಅಧ್ಯಾಪಕರೇ ಹೇಳಿದ್ದರು, "ನೀವ್ಯಾಕೆ ಮತ್ತೆ ಹಳ್ಳಿಗೆ ಹೋಗಬೇಕೋ ಅರ್ಥವಾಗುತ್ತಿಲ್ಲ, ಶ್ರೀಧರ್. ಅಲ್ಲಿ ನಿಮ್ಮ ತಂದೆ, ಚಿಕ್ಕಪ್ಪಂದಿರಲ್ಲಿ ಪಾಲಾದಾಗ ನಿಮಗೆಷ್ಟು ಭೂಮಿ ಬಂದೀತು? ಅದರಲ್ಲಿ ಏನು ಕೃಷಿ ಮಾಡಲಿಕ್ಕೆ ಸಾಧ್ಯ? ಅದು ಬಿಟ್ಟು ಇಲ್ಲೇ ಕೃಷಿ ಇಲಾಖೆಯಲ್ಲಿ ನಿಮಗೆ ಆಫೀಸರ್ ಪೋಸ್ಟ್ ನಾನು ಮಾಡಿಸಿಕೊಡುತ್ತೇನೆ". ಅವರು ಕಲಿಸುವ ಪಾಠಕ್ಕೂ, ತನಗೆ ಹೇಳಿದ ಮಾತಿಗೂ ಅಜಗಜಾಂತರ ಕಂಡಿತ್ತು ಶ್ರೀಧರನಿಗೆ. ಅವರು ತನ್ನ ನೆಚ್ಚಿನ ಅಧ್ಯಾಪಕರೇ ಆದರೂ ಅವರ ಈ ಮಾತಿನ ಮಟ್ಟಿಗೆ ಅವನ ಮನಸ್ಸು ಕಹಿಯೇ ಆಯಿತು. ಆದರೂ ಅದನ್ನು ತೋರಿಸಿಕೊಡದೆ ಹೇಳಿದ್ದ, "ಇಲ್ಲ ಸರ್, ನಮ್ಮ ಕೂಡುಮನೆ, ಎಲ್ಲ ಮನೆಗಳ ಹಾಗಲ್ಲ. ನಮ್ಮ ಮನೆಯಲ್ಲಿ ಅಂಥ ಮಾತು ತಪ್ಪಿಯೂ ಬರಲಾರದು. ನಾವೆಲ್ಲ ಕೊನೆಯವರೆಗೂ ಜತೆಯಾಗಿ ಇರುವವರು. ಅಷ್ಟು ಭರವಸೆ ಇಲ್ಲದಿದ್ದರೆ ನಾನು ಕೃಷಿ ಕಾಲೇಜು ಸೇರುತ್ತಿರಲಿಲ್ಲ." ಅವರು ನಕ್ಕು ತಲೆಯಾಡಿಸಿದ್ದರು, ನಂಬಲಾರೆ ಎಂಬಂತೆ.

ಶ್ರೀಧರನಿಗೆ ಆ ಬಗ್ಗೆ ಚಿಂತೆಯಿರಲಿಲ್ಲ. ಓಡುತ್ತಿದ್ದ ಬಸ್ಸಿನೊಂದಿಗೆ, ಕೆಲವು ಬಾರಿ

ಅದನ್ನೂ ಮೀರಿ ಅವನ ಮನಸ್ಸು ಓಡತೊಡಗಿತು. ಕೂಡುಮನೆಯ ಭೂಮಿ ಸಮೃದ್ಧವಾಗಬೇಕು, ಅಂಗುಲ ಅಂಗುಲ ನೆಲವೂ ಹಸುರಿನಿಂದ ನಳನಳಿಸಬೇಕು. ಅದಕ್ಕಾಗಿ ತಾನು ಕಲಿತ ವಿದ್ಯೆಯನ್ನು ಧಾರೆಯೆರೆಯಬೇಕೆಂದು ಶ್ರೀಧರನ ಆಸೆ. ಅಪ್ಪನ ಕಾಲದ ರಾಸಾಯನಿಕ ಗೊಬ್ಬರ, ಕೀಟನಾಶಕಗಳಿಗಿಂತ ಅಜ್ಜನ ಕಾಲದ ಹಟ್ಟಿಗೊಬ್ಬರ, ಕಾಡುಸೊಪ್ಪು ಉತ್ತಮವೆಂದು, ಶಿಕ್ಷಣ ಪಡೆದ ಅವನೊಳಗಿನ ಕೃಷಿಕ ಮನಸ್ಸು ಹೇಳತೊಡಗಿತ್ತು. ಸಹಜ ಕೃಷಿಯತ್ತ ಅವನ ಒಲವು, ಆ ಬಗ್ಗೆ ಬಂದ ಕೆಲವು ಪುಸ್ತಕಗಳನ್ನು ಅವನು ಓದಿಕೊಂಡಿದ್ದ, ಅಧ್ಯಾಪಕರ ಜತೆ ಚರ್ಚಿಸಿದ್ದ. ಅಪ್ಪ, ಚಿಕ್ಕಪ್ಪಂದಿರನ್ನು ಒಲಿಸಿ ಸಹಜ ಕೃಷಿಯನ್ನು ಅಳವಡಿಸಬೇಕು, ಆಧುನಿಕ ಪದ್ಧತಿಗಳನ್ನು ಒಂದೊಂದಾಗಿ ಕೈ ಬಿಟ್ಟು ಹಳೆಯ ಕ್ರಮಗಳನ್ನೇ ಮತ್ತೆ ಅಳವಡಿಸಿಕೊಳ್ಳಬೇಕು. ಹೀಗೆ ಕನಸು ಕಾಣುತ್ತಾ ಶ್ರೀಧರ ಯಾವಾಗಲೋ ನಿದ್ರೆಗೆ ಜಾರಿದ. ಅವನಿಗೆ ಎಚ್ಚರವಾದಾಗ ಘಟ್ಟದ ಇಳಿಜಾರಿನ ಯಾವುದೋ ಒಂದು ತಿರುವಿನಲ್ಲಿ ಬಸ್ಸು ನಿಂತಿತ್ತು. ಪ್ರಯಾಣಿಕರೆಲ್ಲ ಮುರುಕು ಚಹದಂಗಡಿಗೆ ಮುಕುರಿದ್ದರು. ಶ್ರೀಧರ ಪುನಃ ಸವಿಗನಸುಗಳ ಲೋಕದಲ್ಲಿ ತೇಲಿದ. ಬಸ್ಸು ಮಂಗಳೂರು ತಲುಪಿದಾಗ ಬೆಳಗಿನ ಆರೂವರೆ. ತನ್ನ ಲಗೇಜು ಇಳಿಸಿಕೊಂಡ ಶ್ರೀಧರ ಪುತ್ತೂರಿನ ಬಸ್ಸು ಎಲ್ಲಿದೆ ಎಂದು ಹುಡುಕಿದ. ಆರೂಮುಕ್ಕಾಲಿಗೆ ಹೊರಡುವ ಬಸ್ಸು ಸಿದ್ಧವಾಗಿತ್ತು. ಅದು ಪಂಜ ಮಾರ್ಗವಾಗಿ ಸುಬ್ರಹ್ಮಣ್ಯದವರೆಗೆ ಹೋಗುತ್ತದೆ. ಪುತ್ತೂರಲ್ಲಿ ಬಸ್ಸು ಬದಲಾಯಿಸುವ ಕೆಲಸವಿಲ್ಲ ಎಂದುಕೊಂಡು ಕಾಫಿಯನ್ನು ಕುಡಿಯದೆ ಬಸ್ಸೇರಿದನವ.

ಏರಿಳಿತದ ದಾರಿಯಲ್ಲಿ ಗುರುಗುಡುತ್ತ ಬಸ್ಸು ಹತ್ತುಗಂಟೆಯ ಹೊತ್ತಿಗೆ ಪಂಜ ತಲುಪಿತು. ತನ್ನೆಲ್ಲಾ ಸರಂಜಾಮುಗಳನ್ನು ಪರಿಚಿತ ಪದ್ಮನಾಭನ



ಅಂಗಡಿಯಲ್ಲಿಟ್ಟು, ಅವನು "ಒಂದು ಗ್ಲಾಸು ಶರಬತ್ತು ಕುಡಿದು ಹೋಗಿ ಮಾರಾಯರೇ" ಎಂದು ಒತ್ತಾಯಿಸಿದರೂ "ಬೇಡ ಬೇಡ, ಮುಖ ತೊಳೆಯದೆ ಎಂಥ ಶರಬತ್ತು ಕುಡಿಯುವುದು" ಎಂದು ಒಂದು ಸೂಟ್‌ಕೇಸು ಮಾತ್ರ ಕೈಯಲ್ಲಿ ಹಿಡಿದು ಹೊರಟುಬಿಟ್ಟ. ಅವನ ಆತುರ ಮಿತಿಮೀರಿತ್ತು. ಯಾವಾಗ ಮನೆ ಸೇರುತ್ತೇನೋ, ಯಾವಾಗ ತಮ್ಮ, ತಂಗಿಯರ ಉಲ್ಲಾಸದ ಕೇಕೆ ಕಿವಿಗೆ ಬಿದ್ದೀತೋ, ಯಾವಾಗ ಮನೆಯ ಊಟ ಉಂಡೇನೋ ಎಂದು ತವಕಿಸುತ್ತಿದ್ದ, ಅವನ ಹೆಜ್ಜೆಗಳು ಓಡುಹೆಜ್ಜೆಗಳಾದವು. ಹಾರು ಹೆಜ್ಜೆಗಳೂ ಆಗುತ್ತಿದ್ದವೇನೋ, ಹತ್ತೂವರೆ ಗಂಟೆಯ ಉಗ್ರ ಬಿಸಿಲು ಅವನ ಮನಸ್ಸಿನ ಆತುರ ಕಾಲಿಗಿಳಿಯದಂತೆ ತಡೆ ಒಡ್ಡಿತ್ತು. ಮುಖ ಮೈಗಳಿಂದ ಧಾರಾಕಾರ ಬೆವರು ಸುರಿಸುತ್ತ ದೇವಸ್ಥಾನದೆದುರಿನ ಗುಡ್ಡ ಹತ್ತುತ್ತಿದ್ದ. ಅಜ್ಜ ನೋಡಿದ್ದರೆ ಹೇಳುತ್ತಿದ್ದರು, "ಮನೆ ಏನು ಓಡಿ ಹೋಗುತ್ತದೆಯೆ ಮಗು? ನೀನೇಕೆ ಈ ಬಿಸಿಲಿಗೆ ಹೀಗೆ ಓಡುತ್ತಿ? ಸ್ವಲ್ಪ ನಿಧಾನವಾದರೂ ತೊಂದರೆಯಿಲ್ಲ, ಅಲ್ಲಲ್ಲಿ ನಿಂತು ಸುಧಾರಿಸಿಕೊಂಡು ಮೆಲ್ಲಗೆ ನಡೆ"

ತನ್ನ ಬದುಕಿನ ವೇಗಕ್ಕೂ ಸಾವಧಾನದ ತಡೆ ಹಾಕಿ ಸಮರ್ಪಕಗೊಳಿಸಿದವರು ಅವರೇ ಅಲ್ಲವೆ? ಶ್ರೀಧರ ನೆನೆದ. ತಾನು ಕೃಷಿ ಕಾಲೇಜಿಗೆ ಸೇರುತ್ತೇನೆಂದಾಗ ಅಪ್ಪ ಹೇಳಿದ್ದರು, "ಕೃಷಿ, ಕೃಷಿ ಎಂದು ಹಾರಾಡುತ್ತೀಯಲ್ಲ? ಏನಿದೆ ಕೃಷಿಯಲ್ಲಿ? ಅದನ್ನು ನಂಬಿ ನಾವು ಮಣ್ಣು ತಿಂದದ್ದು ಸಾಲದೆ? ಇನ್ನು ನೀನೊಬ್ಬ ಉದ್ಧಾರ ಆಗಲಿಕ್ಕಿದೆಯೇ? ನಿನಗೆ ಒಳ್ಳೆಯ ಮಾರ್ಕು ಸಿಕ್ಕಿದೆ ಎನ್ನುತ್ತಿ, ಡಾಕ್ಟರಿಕೆ ಮಾಡಬಾರದೆ? ಈಶ್ವರ ಭಾವನಿಗೊಂದು ಮಾತು ಹೇಳಿದರೆ ಎಲ್ಲಾದರೊಂದು ಸೀಟು ಖಂಡಿತ ಮಾಡಿಸಿಕೊಡುತ್ತಾನೆ. ಅಥವಾ ಅದು ಇಷ್ಟವಿಲ್ಲವಾದರೆ ವಿವೇಕಾನಂದ ಕಾಲೇಜಿಗೆ ಸೇರು, ಎಂ.ಎಸ್ಸಿ, ಮಾಡಿದರೆ ಲೆಕ್ಚರರ್ ಆದರೂ ಆಗಬಹುದು. ಅದೆಲ್ಲ ಬಿಟ್ಟು ಇದೆಂಥ ಹೊಸ ಮರುಳು ನಿನಗೆ?"

ಆಗ ಅಜ್ಜನೇ ತನ್ನ ಸಹಾಯಕ್ಕೆ ಬಂದಿದ್ದರು. "ಏನು ಮಾತೆಂದು ಹೀಗೆ ಹೇಳುತ್ತಿ ನಾರಾಯಣ? ಅವನಿಗೆ ಯಾವುದರಲ್ಲಿ ಆಸಕ್ತಿಯೋ ಅದನ್ನು ಓದಲಿ,ನಿನ್ನ ಬಲಾತ್ಕಾರಕ್ಕೆ ಅವನಿಗಿಷ್ಟವಿಲ್ಲದ್ದನ್ನು ಓದಿ ಪ್ರಯೋಜನವಿಲ್ಲ. ಕೃಷಿಯನ್ನು ಬಯ್ಯುತ್ತೀಯಲ್ಲ, ಸ್ವಾವಲಂಬಿಯಾಗಿ ಬದುಕುವವನಿಗೆ ಹೇಳಿ ಮಾಡಿಸಿದ ಉದ್ಯೋಗವದು. ನಾನು ಕೃಷಿಯನ್ನೇ ನಂಬಿದವ, ಏನಾಗಿದೆ ನನಗೆ? ಅವನಿಗೆ ಯಾವುದಿಷ್ಟವೋ ಅದಕ್ಕೆ ಹೋಗಲಿ, ನಾಳೆ ಇದೇ ಆಸ್ತಿಯನ್ನು ಬಂಗಾರ ಮಾಡಿಯಾನು. ನಿಮ್ಮಿಂದಂತೂ ಆಗಲಿಲ್ಲ. ಅವನಾದರೂ ಮಾಡಲಿ", ಅಜ್ಜನ ದಾಕ್ಷಿಣ್ಯಕ್ಕೆ ಅಪ್ಪನೂ ಹೆಚ್ಚಿಗೆ ಮಾತನಾಡಲಿಲ್ಲ. ತಾನು ತನ್ನ ಇಷ್ಟದಂತೆ ಕೃಷಿ ಕಾಲೇಜಿಗೆ ಸೇರಿದೆ. ಪದವಿಯೂ ಮುಗಿಯಿತು. ಮುಂದೆ ಕನಸುಗಳನ್ನು ನನಸಾಗಿಸುವ ಪರ್ವ ಕಾಲ.

ಆಚೆಕರೆ ಗುಡ್ಡವನ್ನೇರುತ್ತಿದ್ದ ಶ್ರೀಧರ. ಸುತ್ತಲಿನ ಮರಗಳಿಂದ ಕೇಳಿಬಂದ ನಾನಾ ಬಗೆಯ ಹಕ್ಕಿಗಳ ಕೂಗು ಆಯಾಸವನ್ನು ಹೋಗಲಾಡಿಸಿ ಉತ್ಸಾಹ ತುಂಬಿತು. ಮರಗಳ ನೆರಳ ತಂಪಿನಲ್ಲಿ ಒಂದು ಕ್ಷಣ ನಿಂತನವ. ಗುಡ್ಡದ ನೆತ್ತಿಗೆ ಬಂದಾಗ ದೂರದಲ್ಲಿ ಕಾಣಿಸಿತು ಕೂಡುಮನೆ.

## ಲೇಖಕರ ಪರಿಚಯ



ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪಂಜ ಗ್ರಾಮದಲ್ಲಿ ಕೇಶವಭಟ್ಟ, ಕನಕಲಕ್ಷ್ಮಿ ದಂಪತಿಗಳ ಸುಪುತ್ರರಾಗಿ ರಾಧಾಕೃಷ್ಣ ಕಲ್ಚಾರರು ೨-೯-೧೯೬೫ ರಂದು ಜನಿಸಿದರು. ಕಳೆದ ಮೂರೂವರೆ ದಶಕಗಳಿಂದ ತಾಳಮದ್ದಳೆಯ ಅರ್ಥಧಾರಿಯಾಗಿ ಸಕ್ರಿಯರಾಗಿರುವ ಶ್ರೀಯುತರು ಪತ್ರಕರ್ತರಾಗಿ, ಉಪನ್ಯಾಸಕರಾಗಿ ದುಡಿದು ಸ್ವಯಂನಿವೃತ್ತರಾಗಿ ಈಗ ಪೂರ್ಣಾವಧಿ ತಾಳಮದ್ದಳೆ ಅರ್ಥಧಾರಿಯಾಗಿ ಗುರುತಿಸಿಕೊಂಡಿದ್ದಾರೆ.

ಕರ್ನಾಟಕ ಯಕ್ಷಗಾನ ಅಕಾಡೆಮಿಯ ಮಾಜಿ ಸದಸ್ಯರಾಗಿ, ಯಕ್ಷಗಾನ ಪಠ್ಯಪುಸ್ತಕ ಸಮಿತಿಯ ಸದಸ್ಯರಾಗಿ, 'ಸಿರಿಬಾಗಿಲು ಪ್ರತಿಷ್ಠಾನದ 'ಅರ್ಥಾಂತರಂಗ' ಸರಣಿ ಪ್ರಾತ್ಯಕ್ಷಿಕೆಗಳ ನಿರ್ದೇಶಕರಾಗಿ ಸೇವೆ ಸಲ್ಲಿಸಿರುವ ಶ್ರೀಯುತರು ಅಂಕಣಬರಹಗಾರರಾಗಿಯೂ ಪ್ರಸಿದ್ಧರು. 'ಕೂಡುಮನೆ' (ಕಿರು ಕಾದಂಬರಿ), 'ಪರಕಾಯ ಪ್ರವೇಶ' ಭಾಗ 1 ಮತ್ತು 2 (ಅಂಕಣಬರಹಗಳ ಸಂಕಲನ), ಅವರವರ ದಾರಿ (ಕಥಾಸಂಕಲನ), ಮೂಡಂಬೈಲು ಶಾಸ್ತ್ರಿ (ವ್ಯಕ್ತಿ ಚಿತ್ರ), 'ಉಲಿಯ ಉಯ್ಯಾಲೆ' (ಅನುಭವ ಕಥನ) 'ಪೀಠಿಕಾ ಪ್ರಕರಣ' (ಪುರಾಣ ಪಾತ್ರಗಳ ಆತ್ಮ ನಿವೇದನೆಗಳು) 'ತಲ್ಲಣಿಸದಿರು ಮನವೆ' (ಲೇಖನ ಸಂಚಯ) ಇವರ ಕೃತಿಗಳಾಗಿವೆ. ತರಂಗ, ತುಷಾರ, ಹೊಸದಿಗಂತ, ಉತ್ಥಾನ ಮೊದಲಾದವುಗಳಲ್ಲಿ ಇವರ ಅಂಕಣಬರಹಗಳು ಪ್ರಕಟವಾಗಿವೆ.

ಪ್ರಸ್ತುತ ಪಾಠಭಾಗವನ್ನು ಶ್ರೀಯುತರ 'ಕೂಡುಮನೆ' ಎಂಬ ಕಿರುಕಾದಂಬರಿಯಿಂದ ಆರಿಸಿಕೊಳ್ಳಲಾಗಿದೆ.

### ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಹೆಬ್ಬಾಳಿನ ಕಾಲೇಜಿಗೆ ಉನ್ನತ ವ್ಯಾಸಂಗಕ್ಕೆ ಸೇರಿದ ಶ್ರೀಧರನಿಗೆ ತಬ್ಬಲಿತನ ಕಾಡಲು ಕಾರಣವೇನು?
2. ಶ್ರೀಧರನು ವಿದ್ಯಾಭ್ಯಾಸ ಮುಗಿಸಿ ಊರಿಗೆ ಮರಳುವ ನಿರ್ಧಾರಕ್ಕೆ ಬಂದಾಗ ಅಧ್ಯಾಪಕರ ಪ್ರತಿಕ್ರಿಯೆ ಹೇಗಿತ್ತು?
3. ಪ್ರಕೃತಿಯ ಕುರಿತು ಅಜ್ಜನ ಮನೋಭಾವವೇನು?
4. ಶ್ರೀಧರನಿಗೆ ಸಹಜ ಕೃಷಿಯತ್ತ ಒಲವು ಮೂಡಲು ಕಾರಣವೇನು?
5. ಮನೆಯವರನ್ನು ಕಾಣುವ ಶ್ರೀಧರನ ತವಕ ಪಾಠದಲ್ಲಿ ಹೇಗೆ ಚಿತ್ರಿತವಾಗಿದೆ?

## ಪಾತ್ರ ಚಿತ್ರಣ ಮಾಡಿರಿ

"ಕೂಡುಮನೆ" ಕಿರುಕಾದಂಬರಿಯ ಭಾಗದಲ್ಲಿ ನಿಮಗೆ ಇಷ್ಟವಾದ ಪಾತ್ರದ ಪಾತ್ರ ಚಿತ್ರಣ ಮಾಡಿರಿ.

## ಕರಪತ್ರ ತಯಾರಿಸಿರಿ

ಸಾವಯವ ಕೃಷಿಯ ಮಹತ್ವವನ್ನು ತಿಳಿಯಪಡಿಸುವ ಒಂದು ಕರಪತ್ರವನ್ನು ತಯಾರಿಸಿರಿ.

## ವಿಶ್ಲೇಷಣ ಟಿಪ್ಪಣಿ ಬರೆಯಿರಿ

"ಕೃಷಿ, ಕೃಷಿ ಎಂದು ಹಾರಾಡುತ್ತಿಯಲ್ಲ?, ಏನಿದೆ ಕೃಷಿಯಲ್ಲಿ?, ಅದನ್ನು ನಂಬಿ ನಾವು ಮಣ್ಣು ತಿಂದದ್ದು ಸಾಲದೆ?"

"ಸ್ವಾವಲಂಬಿಯಾಗಿ ಬದುಕುವವನಿಗೆ ಹೇಳಿ ಮಾಡಿಸಿದ ಉದ್ಯೋಗವದು,"

..... ಅಪ್ಪ ಹಾಗೂ ಅಜ್ಜನ ಈ ಮಾತುಗಳ ಆಧಾರದಲ್ಲಿ ಕೃಷಿಯ ಕುರಿತಾಗಿ ಬದಲಾಗುತ್ತಿರುವ ಮನೋಧರ್ಮದ ಕುರಿತು ವಿಶ್ಲೇಷಿಸಿ ಟಿಪ್ಪಣಿ ಬರೆಯಿರಿ.

## ಚಿತ್ರಕಥೆ ತಯಾರಿಸಿರಿ

'ಕೂಡುಮನೆ' ಪಾಠದಲ್ಲಿ ಬಂದಿರುವ ವಿವಿಧ ಸನ್ನಿವೇಶಗಳಲ್ಲಿ ನಿಮಗಿಷ್ಟವಾದ ಯಾವುದಾದರೊಂದು ಸನ್ನಿವೇಶದ ಚಿತ್ರಕಥೆಯನ್ನು ತಯಾರಿಸಿರಿ.

## ವಿರೋಧಾರ್ಥ ಪದಗಳನ್ನು ತಿಳಿಯಿರಿ

ಒಬ್ಬ ಕೃಷಿಕನಾಗಿ ಮಣ್ಣಿನಲ್ಲಿ ಹೊಸಚಿಗುರು ಮೂಡಿಸಬೇಕೆಂಬ ಹಂಬಲ ತನ್ನಲ್ಲಿ ಹುಟ್ಟಿಕೊಳ್ಳುವುದಕ್ಕೆ <u>ಪರೋಕ್ಷ</u>ವಾಗಿಯೂ <u>ಪ್ರತ್ಯಕ್ಷ</u>ವಾಗಿಯೂ ಅಜ್ಜನೇ ಕಾರಣ.

- ಮೇಲಿನ ವಾಕ್ಯದಲ್ಲಿ ಪರೋಕ್ಷ ಮತ್ತು ಪ್ರತ್ಯಕ್ಷ ಎಂಬಿವು ಪರಸ್ಪರ ವಿರೋಧಾರ್ಥವನ್ನು ಹೊಂದಿರುವ ಪದಗಳು, ಜೊತೆಯಾಗಿ ಬಂದಿವೆ. ಇದೇ ರೀತಿಯ ವಿರೋಧಾರ್ಥ ಪದಗಳನ್ನು ಪಾಠಭಾಗದಿಂದ ಗುರುತಿಸಿ ಬರೆಯಿರಿ.

## ಸಂಧಿಯನ್ನು ತಿಳಿಯಿರಿ

ಕೆಳಗಿನ ಕೋಷ್ಟಕವನ್ನು ಗಮನಿಸಿರಿ.

ಮಧ್ಯಾಹ್ನ, ವಾತಾವರಣ, ಕವೀಂದ್ರ, ಗಿರೀಶ, ಕಟೂಕ್ತಿ ಈ ಪದಗಳಲ್ಲಿ ನಡೆಯುವ ಸಂಧಿಕಾರ್ಯವನ್ನು ತಿಳಿಯಿರಿ.

| ಸಂಧಿ ವಿಂಗಡಣೆ | ಸಂಧಿಯಾಗುವ ಅಕ್ಷರಗಳು | ಸಂಧಿಯಾದ ರೂಪ | ಬದಲಾವಣೆ |
|---|---|---|---|
| ಮಧ್ಯ + ಅಹ್ನ | ಅ + ಅ | ಮಧ್ಯಾಹ್ನ | ಅ + ಅ ಗಳ ಜಾಗದಲ್ಲಿ ಆ ಬರುವುದು |
| ವಾತ + ಆವರಣ | ಅ + ಆ | ವಾತಾವರಣ | ಅ + ಆ ಗಳ ಜಾಗದಲ್ಲಿ ಆ ಬರುವುದು |
| ಕವಿ + ಇಂದ್ರ | ಇ + ಇ | ಕವೀಂದ್ರ | ಇ + ಇ ಗಳ ಜಾಗದಲ್ಲಿ ಈ ಬರುವುದು |
| ಗಿರಿ + ಈಶ | ಇ + ಈ | ಗಿರೀಶ | ಇ + ಈ ಗಳ ಜಾಗದಲ್ಲಿ ಈ ಬರುವುದು |
| ಕಟು + ಉಕ್ತಿ | ಉ + ಉ | ಕಟೂಕ್ತಿ | ಉ + ಉ ಗಳ ಜಾಗದಲ್ಲಿ ಊ ಬರುವುದು |

ಆಆ, ಇಈ, ಉಊ ಎಂಬಿವು ಸವರ್ಣ ಸ್ವರಗಳು. ಸಂಧಿಯಾಗುವಾಗ ಇವು ಒಂದರ ಮುಂದೆ ಒಂದು ಬಂದಾಗ ಅವೆರಡರ ಜಾಗದಲ್ಲಿ ಅವುಗಳ ದೀರ್ಘರೂಪ ಬರುವ ಸಂಧಿಗೆ ಸವರ್ಣದೀರ್ಘ ಸಂಧಿ ಎಂದು ಹೆಸರು.

ಇದೇ ರೀತಿ ಕೆಳಗೆ ನೀಡಲಾದ ಪದಗಳನ್ನು ವಿಂಗಡಿಸಿ ಸಂಧಿ ಪ್ರಕ್ರಿಯೆಯನ್ನು ಬರೆಯಿರಿ.

ದೇವಾಲಯ

ಗುರೂಪದೇಶ

ರವೀಂದ್ರ

ಶಾಸಕಾಂಗ

ಲಕ್ಷ್ಮೀಶ

ಸವರ್ಣದೀರ್ಘ ಸಂಧಿಯಾಗುವ ಪದಗಳನ್ನು ಪಾಠಭಾಗದಿಂದ ಆರಿಸಿ ಬರೆಯಿರಿ.

# ನಾವು ಗೆಲುವೆವು

- ಕಯ್ಯಾರ ಕಿಞ್ಞಣ್ಣ ರೈ

ಸೊಲ್ಲು ಸಲ್ಲದು ಸೋಲು ನಮ್ಮ ಮುಂದೆ
ಗೆಲ್ಲ-ಬಾಳ್ವೆಯ ಬೆಳಕು-ಗೆಲುವೆವೆಂದೆ||
ಬಲವೊಂದೆ ಗೆಲವೆಂದೆ ನಂಬಲಿಲ್ಲ,
ಬಲ ದೇಹಬಲವಲ್ಲ, ಧೈರ್ಯವೆಲ್ಲ;
ಒಬ್ಬನಿದ್ದರು ನಿಂತ ನೆಲ ನೆರವಿದೆ,
ನಾವು ಗೆಲುವವರೆಂಬೆದೆಯ ಸ್ವರವಿದೆ.
ಕಜ್ಜ ಕೈಗೂಡಿದರೆ ಕುಗ್ಗದಿಹುದು,
ಮುಂದಿದೆ ಮಹೋನ್ನತಿಯು-ನುಗ್ಗಬಹುದು;
ಕಯ್ಪೆರಸ ಕುಡಿಕುಡಿದರೆದೆಗುಂದೆವು,
ಸಪ್ಪೆಬಾಳ್ವೆಯು ಬೇಡ-ಸೋಲೊಪ್ಪೆವು.
ಮಲೆವ ಮಲೆಗಳ ಮಧ್ಯೆ ಮನೆಯ ಕಟ್ಟಿ,
ಕಾಡಾನೆಗಳ ಹಿಡಿದು ಬೆನ್ನು ತಟ್ಟಿ,
ಹೆಬ್ಬಾವು ಹುಲಿ ಹೊಟ್ಟೆ ಸೀಳಿದವರು.
ನಮ್ಮ ಹಿರಿಯರು-ಬಲಿತು ಬಾಳಿದವರು.



ನೇಗಿಲೋಳಿಯ ಸಮಕೆ ಸಾಗಿ ನಡೆದು,
ಗದ್ದೆಕೆಸರಲಿ ಮಿಂದು ಮಿಂದು ದುಡಿದು;
ಕಳಮೆ ಕಂಪನ್ನದಲಿ ತೇಗಿದವರು.
ನಮ್ಮ ಹಿರಿಯರು- ವಜ್ರದೇಹದವರು
ತುಂಬುಮನ ತುಂಬುಮನೆ ತುಂಬಿದವರು,
ತುಂಬು ಸಂಸಾರದಲಿ ನಂಬಿದವರು;
ತಿಳಿವೊಂದೆ ಬೆಳಕೆಂದೆ ಬೆಳಗಿಸಿದರು,
ನಮ್ಮ ಹಿರಿಯರು ಬದುಕ ಬೆಳಗಿಸಿದರು.
ಸರಿದಾರಿ ತೊಲಗದೆಯೆ ಹಾದಿ ಹಿಡಿದ,
ತಲೆಯನ್ನು ತಗ್ಗಿಸದೆ ನುಗ್ಗಿ ನಡೆದ,
ಅದೆ ಪರಂಪರೆ ನಮಗೆ-ಸಾಕ್ಷಿಯವರು,
ನಾವು ಗೆಲುವೆವು-ಸೋಲವರಿಯದವರು.
ನಾವು ಗೆಲುವೆವು ಗರ್ವದುರ್ಗಗಳನು,
ನಾವು ಹಿಡಿವೆವು ದರ್ಪಸರ್ಪಗಳನು.
ನಾವು ಮುರಿವೆವು ಮದದ ದಾಡೆಗಳನು,
ನಾವು ಗೆಲುವೆವು ಜನರ ಹೃದಯಗಳನು.
ನಾವು ಗೆಲುವುದು ಜಗದ ಗೆಲುವೆಂಬೆವು,
ಎಲ್ಲರೂ ಗೆಲಬೇಕು ಸೋಲೊಲ್ಲೆವು,
ನಾವು ಬದುಕುತ ಲೋಕ ಬದುಕಬೇಕು,
ಇದು ನಮ್ಮ ಗುರಿ-ನಾವು ಗೆಲಲೆಬೇಕು,
ಪಶ್ಚಿಮಾದ್ರಿಯ ಶಿಖರವೇರಿ ನಡೆದು,
ಪಡುಗಡಲ ನೊರೆತೆರೆಯ ಮೇಲೆ ಕುಣಿದು;
ಬಯಲಿನ ವಿಶಾಲದಲಿ ಆಡುತಿಹೆವು,
ನಾವು ಗೆಲುವೆವು-ಹಿಗ್ಗಿ ಹಾಡುತಿಹೆವು.
ನಾವು ಗೆಲ್ಲುವುದು ತಾಯಿನಾಡ ಗೆಲವು,
ನಾವು ಸೋತರೆ ತಾಯಿಗಶ್ರುಜಲವು !
ಜಯತು-ಭುವನೇಶ್ವರೀ, ನಾವ್ ಸೋಲೆವು,
ಜಯ ನಮಗೆ ಜಯ ನಿನಗೆ ಜಯವೆಂಬೆವು.

## ಕವಿಪರಿಚಯ



ನಾಡೋಜ ಕಯ್ಯಾರ ಕಿಞ್ಞಣ್ಣ ರೈಯವರು ಕನ್ನಡದ ಹೆಮ್ಮೆಯ ಕವಿ. ಅವರದ್ದು ಪ್ರೌಢ ಗಂಭೀರ ವ್ಯಕ್ತಿತ್ವ. ಕವಿಯಾಗಿ, ಆದರ್ಶ ಶಿಕ್ಷಕರಾಗಿ, ಉತ್ತಮ ಕೃಷಿಕರಾಗಿ, ಸ್ವಾತಂತ್ರ್ಯ ಹೋರಾಟಗಾರರಾಗಿ ಬಹುಮುಖ ವ್ಯಕ್ತಿತ್ವವನ್ನು ಹೊಂದಿದ್ದ ಕಯ್ಯಾರ ಕಿಞ್ಞಣ್ಣರೈಯವರು ಕಾಸರಗೋಡು ಜಿಲ್ಲೆಯ ಕಯ್ಯಾರ ಗ್ರಾಮದಲ್ಲಿ ದುಗ್ಗಪ್ಪ ರೈ, ದೈಯ್ಯಕ್ಕ ದಂಪತಿಗಳ ಸುಪುತ್ರರಾಗಿ ೧೯೧೫ ಜೂನ್ ೮ ರಂದು ಜನಿಸಿದರು. ಬದಿಯಡ್ಕದಲ್ಲಿ ಪ್ರಾಥಮಿಕ ಶಿಕ್ಷಣ ಪೂರೈಸಿ ನೀರ್ಚಾಲಿನ ಮಹಾಜನ ಸಂಸ್ಕೃತ ಕಾಲೇಜಿನಲ್ಲಿ ವ್ಯಾಸಂಗವನ್ನು ಮುಂದುವರಿಸಿದರು. ೧೯೩೫ರಲ್ಲಿ ಕನ್ನಡ - ಸಂಸ್ಕೃತ ಉಭಯ ಭಾಷೆಗಳಲ್ಲಿ ವಿದ್ವಾನ್ ಪದವಿಯನ್ನು ಪಡೆದರು. ಮಂಗಳೂರಿನ ಬಾಸೆಲ್ ಮಿಷನ್ ಹೈಸ್ಕೂಲಿನಲ್ಲಿ ಎಸ್.ಎಸ್.ಎಲ್.ಸಿ. ವಿದ್ಯಾಭ್ಯಾಸವನ್ನು ಪೂರೈಸಿದರು. ಖಾಸಗಿಯಾಗಿ ಬಿ.ಎ., ಎಂ.ಎ. ಪದವಿ ಪಡೆದರು. ೧೯೪೪ರಲ್ಲಿ ಪೆರಡಾಲ ನವಜೀವನ ಪ್ರೌಢಶಾಲೆಯಲ್ಲಿ ಕನ್ನಡ ಅಧ್ಯಾಪಕರಾಗಿ ವೃತ್ತಿಜೀವನವನ್ನು ಆರಂಭಿಸಿದರು. 'ದುರ್ಗಾದಾಸ' ಎನ್ನುವುದು ಅವರ ಕಾವ್ಯನಾಮವಾಗಿತ್ತು. ಶ್ರೀಮುಖ, ಐಕ್ಯಗಾನ, ಪುನರ್ನವ, ಚೇತನ, ಪಂಚಮಿ, ಕೊರಗ ಮತ್ತು ಕೆಲವು ಕವನಗಳು, ಗಂಧವತಿ, ಶತಮಾನದ ಗಾನ (ಕವನಸಂಕಲನಗಳು), ವಿರಾಗಿಣಿ (ನಾಟಕ), ಮಲೆಯಾಳದ ಮಹಾಕವಿ ಕುಮಾರನಾಶಾನರ ಮೂರು ಖಂಡಕಾವ್ಯಗಳ ಗದ್ಯಾನುವಾದ ಮಾತ್ರವಲ್ಲದೆ ಇತರ ೮ ಗದ್ಯಕೃತಿಗಳು ಮತ್ತು ಸಾಹಿತ್ಯ ವಿಮರ್ಶೆಯ ಕೃತಿಗಳನ್ನು ರಚಿಸಿದ್ದಾರೆ. 'ದುಡಿತವೇ ನನ್ನ ದೇವರು' ಎಂಬುದು ಇವರ ಆತ್ಮಕಥನ. ೧೯೬೯ರಲ್ಲಿ ಭಾರತ ಸರಕಾರದಿಂದ 'ಶ್ರೇಷ್ಠ ಅಧ್ಯಾಪಕ' ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ೧೯೮೫ರಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಮಂಗಳೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್, ಹಂಪಿಯ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಗೌರವ, ಪಂಪ ಪ್ರಶಸ್ತಿ ಮೊದಲಾದವುಗಳು ಇವರಿಗೆ ಸಂದ ಗೌರವಗಳು. ಶತಮಾನದ ಕವಿ, ಶತಾಯುಷಿ ಕಯ್ಯಾರ ಕಿಞ್ಞಣ್ಣರೈಯವರು ೦೯-೦೮-೨೦೧೫ರಂದು ನಿಧನರಾದರು.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಕವಿಗಳು ಯಾವುದನ್ನು ಬಲವೆಂದು ಹೇಳುತ್ತಾರೆ?
2. ನಮ್ಮ ಹಿರಿಯರು ಬಲಿತು ಬಾಳಿದವರು ಎಂಬುದನ್ನು ಕವನದಲ್ಲಿ ಹೇಗೆ ಸಮರ್ಥಿಸಲಾಗಿದೆ?
3. ನಮ್ಮ ಹಿರಿಯರು ವಜ್ರದೇಹಿಗಳಾದದ್ದು ಹೇಗೆ?
4. ಜನರ ಹೃದಯಗಳನ್ನು ನಾವು ಹೇಗೆ ಗೆಲ್ಲಬಹುದು?
5. ನಮ್ಮ ಗುರಿ ಯಾವುದು ಎಂದು ಕವಿಗಳು ಹೇಳುತ್ತಾರೆ?

## ಪದವಿಂಗಡಿಸಿ ಬರೆಯಿರಿ

ಮಾದರಿಯಂತೆ ಕೆಳಗೆ ಕೊಟ್ಟಿರುವ ಪದಗಳನ್ನು ವಿಂಗಡಿಸಿ ಬರೆಯಿರಿ.

ಗೆಲುವವರೆಂಬೆದೆಯ – ಗೆಲುವವರು + ಎಂಬ + ಎದೆಯ

ಕುಡಿದರೆದೆಗುಂದೆವು - ಕುಡಿದರು + ಎದೆ +ಕುಂದೆವು

ಕೈಗೂಡಿದರೆ -

ಮಹೋನ್ನತಿ -

ನೇಗಿಲೋಳಿ -

ಸೋಲವರಿಯದವರು -

## ಆಶಯ ಬರೆಯಿರಿ

'ನಾವು ಗೆಲುವೆವು' ಕವನದ ಆಶಯವನ್ನು ಬರೆಯಿರಿ.

## ಸ್ವಾರಸ್ಯ ಬರೆಯಿರಿ

ಕೆಳಗೆ ಕೊಟ್ಟಿರುವ ಸಾಲುಗಳ ಸ್ವಾರಸ್ಯವನ್ನು ಬರೆಯಿರಿ.

ನಾವು ಗೆಲುವುದು ಜಗದ ಗೆಲುವೆಂಬೆವು,
ಎಲ್ಲರೂ ಗೆಲಬೇಕು ಸೋಲೊಲ್ಲೆವು,
ನಾವು ಬದುಕುತ ಲೋಕ ಬದುಕಬೇಕು,
ಇದು ನಮ್ಮ ಗುರಿ-ನಾವು ಗೆಲಲೆಬೇಕು,

## ಸಾಲು ಗುರುತಿಸಿರಿ

ಕೆಳಗೆ ನೀಡಿರುವ ವಾಕ್ಯಗಳ ಆಶಯವನ್ನು ನೀಡುವ ಪದ್ಯದ ಸಾಲುಗಳನ್ನು ಬರೆಯಿರಿ.

1. ನಮ್ಮ ಹಿರಿಯರು ಪರಸ್ಪರ ಪ್ರೀತಿ ವಿಶ್ವಾಸದಿಂದ ಒಂದೇ ಮನೆಯಲ್ಲಿ ಬದುಕಿದವರು.
2. ನಾವು ಅಹಂಕಾರದ ದಂತಗಳನ್ನು ಮುರಿದು, ಜನರ ಮನಸ್ಸನ್ನು ಗೆಲ್ಲುತ್ತೇವೆ.
3. ಸತ್ಯ ಧರ್ಮದ ನೇರ ಹಾದಿಯಲ್ಲಿ ಮುಂದೆ ಸಾಗಿ ಯಾರಿಗೂ ತಲೆತಗ್ಗಿಸದೆ ಮುನ್ನಡೆದವರು ನಮ್ಮ ಹಿರಿಯರು.

## ಕಿರುಲೇಖನ ಬರೆಯಿರಿ

ನಾವು ಗೆಲ್ಲುವುದು ತಾಯಿನಾಡ ಗೆಲವು,
ನಾವು ಸೋತರೆ ತಾಯಿಗಶ್ರುಜಲವು !

ಈ ಸಾಲುಗಳು ನೀಡುವ ಸಂದೇಶವನ್ನು ವಿವರಿಸಿ ಕಿರುಲೇಖನವನ್ನು ಬರೆಯಿರಿ.

## ಲಿಖಿತ ಭಾಷಣ ಬರೆಯಿರಿ

ಕವನದ ಆಧಾರದಲ್ಲಿ ಗ್ರಾಮೀಣ ಜನರ ಬದುಕು, ಸುಖ-ದುಃಖ, ಸೋಲು-ಗೆಲುವು, ದುಡಿಮೆ, ಕಾಯಕನಿಷ್ಠೆ, ಪ್ರಕೃತಿ ಸೌಂದರ್ಯಗಳನ್ನು ವಿವರಿಸಿ 'ಗ್ರಾಮೀಣ ಜನಜೀವನದ ಸೊಬಗು' ಎನ್ನುವ ವಿಚಾರದ ಕುರಿತು ಒಂದು ಲಿಖಿತ ಭಾಷಣ ತಯಾರಿಸಿರಿ.

## ಪ್ರಾಸ ಪದಗಳನ್ನು ಗುರುತಿಸಿರಿ

ಮಾದರಿ : ಬಲವೊಂದೆ ಗೆಲವೆಂದೆ ನಂಬಲಿಲ್ಲ

ಬಲ ದೇಹಬಲವಲ್ಲ ಧೈರ್ಯವೆಲ್ಲ

- ಹೀಗೆ ಕವನದ ಸಾಲುಗಳ ಕೊನೆಯಲ್ಲಿ ಒಂದೇ ಅಕ್ಷರವು ಪುನರಾವರ್ತನೆಯಾಗಿ ಬರುವುದನ್ನು ಅಂತ್ಯಪ್ರಾಸವೆನ್ನುವರು. ಇದೇ ರೀತಿಯ ಪ್ರಾಸ ಪದಗಳುಳ್ಳ ಸಾಲುಗಳನ್ನು ಗುರುತಿಸಿ ಬರೆಯಿರಿ.

## ದ್ವಿರುಕ್ತಿ ಪದಗಳನ್ನು ಗುರುತಿಸಿರಿ

ಗದ್ದೆ ಕೆಸರಲಿ ಮಿಂದು ಮಿಂದು ದುಡಿದು

ಕಳಮೆ ಕಂಪನ್ನದಲಿ ತೇಗಿದವರು

ಈ ಪದ್ಯದ ಸಾಲಿನಲ್ಲಿ 'ಮಿಂದು' ಎಂಬ ಪದವು ಎರಡು ಸಲ ಪ್ರಯೋಗವಾಗಿದೆ. ಹೀಗೆ ಪದವು ಎರಡೆರಡು ಸಲ ಜೊತೆಯಾಗಿ ಬರುವುದನ್ನು 'ದ್ವಿರುಕ್ತಿ ಪದ' ಗಳು ಎನ್ನುವರು. ಈ ಘಟಕದ ಪಾಠಭಾಗಗಳಲ್ಲಿ ಬಂದಿರುವ ದ್ವಿರುಕ್ತಿ ಪದಗಳನ್ನು ಗುರುತಿಸಿ ಬರೆಯಿರಿ.

## ಕವನವನ್ನು ಮುಂದುವರಿಸಿ ಬರೆಯಿರಿ

ಕೆಳಗೆ ಕೊಟ್ಟಿರುವ ಕವನದ ಸಾಲುಗಳನ್ನು ಮುಂದುವರಿಸಿ ಕವನವೊಂದನ್ನು ರಚಿಸಿರಿ. ಸೂಕ್ತ ಶೀರ್ಷಿಕೆಯನ್ನು ನೀಡಿರಿ.

ಗದ್ದೆ ಬಯಲಲಿ ದುಡಿವ ಕೈಗಳು
ಬೆವರ ಹಾಡನು ಹಾಡಿವೆ
ಬಟ್ಟಲನ್ನವ ತುಂಬಿ ನಮ್ಮಯ
ಒಡಲ ಹಸಿವನು ತಣಿಸಿವೆ.

..........................................
..........................................
..........................................
..........................................

# ಹಸಿರೊಡಲ ಬೆಳಕು

- ಎನ್.ಎಲ್. ಆನಂದ್, ಗುಂಡಪ್ಪ ದೇವಿಕೇರಿ

ಪ್ರತಿಯೊಬ್ಬ ಸಾಧಕನ ಜೀವನದಲ್ಲೂ ಹಲವು ಆದರ್ಶಗಳು ನೀಡಿದ ಉತ್ಸಾಹ, ಜ್ಞಾನ, ತಾಳ್ಮೆ, ಸಹನೆ ಇವೇ ಮೊದಲಾದ ಗುಣಗಳು ಅವರನ್ನು ಉನ್ನತಮಟ್ಟಕ್ಕೇರಿಸಿರುತ್ತವೆ. ಸಾಮಾನ್ಯವಾಗಿ, ಆ ಆದರ್ಶಗಳು ಚಿರಪರಿಚಿತ ವ್ಯಕ್ತಿಗಳಾಗಿರುವುದನ್ನು ಕಾಣಬಹುದು. ಮಹಾತ್ಮ ಗಾಂಧಿ, ಲಾಲ್ ಬಹದ್ದೂರ್ ಶಾಸ್ತ್ರಿ, ಸುಭಾಷ್ ಚಂದ್ರ ಬೋಸ್, ಕಿರಣ್ ಬೇಡಿ, ಕಸ್ತೂರಿ ಬಾ... ಹೀಗೆ ಪಟ್ಟಿ ಬೆಳೆಯುತ್ತದೆ. ಇವರೆಲ್ಲಾ ಒಂದು ಗುಂಪಿನವರಾದರೆ, ಇವರಾರ ಬಗ್ಗೆಯೂ ಪರಿಚಯವಿಲ್ಲದ, ತನ್ನ ಸುತ್ತಲೂ ನಿಶ್ಯಬ್ದವಾಗಿ ಮೌನಕ್ರಾಂತಿ ಮಾಡುತ್ತಾ, ಯಾವ ಪ್ರಚಾರಕ್ಕೂ ಒಳಗೊಳ್ಳದೇ ಹಲವರ ಜೀವನದಲ್ಲಿ ಬದಲಾವಣೆಗೆ ಕಾರಣವಾಗುತ್ತಿರುವ ನಮ್ಮದೇ ಗ್ರಾಮದ ಶಿಕ್ಷಕರು, ತಂದೆ, ತಾಯಿ, ತಾತ, ಅಜ್ಜಿ, ಊರಿನ ಹಿರೀಕರನ್ನು ಆದರ್ಶವಾಗಿ ಹೊಂದಿ, ಅವರು ನಡೆದ ಜಾಡಿನಲ್ಲಿ ನಡೆದು ಉದ್ಧಾರವಾದವರು ಕೆಲವರಿರುತ್ತಾರೆ. ಆ ಎರಡನೆಯ ಪಂಗಡಕ್ಕೆ ಸೇರಿದವರೇ ಶ್ರೀಯುತ ನಾರಾಯಣ ರೆಡ್ಡಿಯವರು. ಯಾರಾದರೂ 'ಏನ್ ರೆಡ್ಡಿಯವರೇ, ನೀವು ಗಾಂಧೀಜಿ ತರಹ ಸರಳವಾಗಿ ಬದುಕಿದ್ದೀರಲ್ಲಾ' ಎಂದರೆ, 'ಏನೋ ಸ್ವಾಮಿ, ನಾನು ಅಷ್ಟೊಂದು ಓದಿಕೊಂಡವನಲ್ಲ. ನನಗೆ ಅವರ್ಯಾರ ಪರಿಚಯವೂ ಅಷ್ಟಿಲ್ಲ. ನನಗೆ ನ್ಯಾಯವೆನಿಸಿದ ರೀತಿ ಬದುಕಿದ್ದೀನಿ' ಎಂದು ಕೆಲಸದಲ್ಲಿ ತಲ್ಲೀನರಾಗುತ್ತಾರೆ. ಅವರ ಜೀವನದ ಮೇಲೆ ಅಚ್ಚಳಿಯದ ಪ್ರಭಾವ ಬೀರಿದ ಆದರ್ಶಗಳ ಕಡೆ ಕಣ್ಣಾಡಿಸೋಣ :

ರೆಡ್ಡಿಯವರಿಗೆ ಹಳ್ಳಿ, ಸಮಾಜದೆಡೆ ನೈಜ ಕಾಳಜಿಗೆ ಕಾರಣರಾದವರು ಸೋರಹುಣಸೆ ಗ್ರಾಮದ ಹಿರಿಯ ಗೌಡರಾದ 'ಬಾಲ ರೆಡ್ಡಿ'ಯವರು. ವಯಸ್ಸು ೧೦೦ ದಾಟಿದರೂ, ಊರಿನ ಬಗ್ಗೆ ಅವರಿಗಿದ್ದ ಕಾಳಜಿ ಅನನ್ಯ. ಬೆಳಗ್ಗೆ ೫ ಗಂಟೆಯಷ್ಟೊತ್ತಿಗೆ ದೊಡ್ಡ ತಂಬಾಕಿನ ಚೀಲ, ಕುಟಾಣಿ ಹಿಡಿದು ಊರ ಮುಂದಿನ ಕಟ್ಟೆಯ ಮೇಲೆ ಕುಳಿತುಕೊಳ್ಳುತ್ತಿದ್ದರು. ಅದೇ ರಸ್ತೆಯಲ್ಲೇ ಊರಿನ ಎಲ್ಲರೂ ತಮ್ಮ ಹೊಲಗಳಿಗೆ ಹೋಗಬೇಕಿತ್ತು. ದನ, ಕರು, ನೇಗಿಲನ್ನು ಕಟ್ಟಿಕೊಂಡು, ಬುತ್ತಿ ಹೊತ್ತು ಹೊಲಗಳಿಗೆ ಹೋದವರು, ಮರಳಿ ಬರುತ್ತಿದ್ದುದು ಸಂಜೆಯೇ. ಈ ಅಜ್ಜ ಹೋಗಿ ಬರುವವರನ್ನು ಪರಿವೀಕ್ಷಿಸುತ್ತ ಕುಳಿತಿರುತ್ತಿದ್ದರು. ಯಾರಾದರೂ ಹೊತ್ತು ಹುಟ್ಟಿದ ಮೇಲೆ ನೇಗಿಲು ಕಟ್ಟಿ ಹೊಲದ ಕಡೆ ಹೋಗಲು ಆ ದಾರಿಯಲ್ಲಿ ಬಂದರೆ, ತೀಕ್ಷ್ಣವಾಗಿ ಅವರನ್ನು ನೋಡುತ್ತಿದ್ದರು. ಆ ನೋಟ ಸೂರ್ಯನ ಕಿರಣದಷ್ಟೇ ತೀಕ್ಷ್ಣವಾಗಿರುತ್ತಿತ್ತು. ಅನಂತರ ಪ್ರೀತಿಯಿಂದ ಅಜ್ಜ ಹತ್ತಿರಕ್ಕೆ ಕರೆದು, "ಯಾರ ಮಗನೋ ನೀನು? ಹೊತ್ತು ನೆತ್ತಿಗೆ ಬರ್ತಿದೆ. ಈಗ ಹೊಲಕ್ಕೋಗಿ ಏನು ವ್ಯವಸಾಯ ಮಾಡ್ತೀಯಪ್ಪ? ರೈತರು ಹೊತ್ತುಹುಟ್ಟೋ ಮುಂಚೆ ಹೊಲ ಸೇರ್ಕೋಬೇಕಪ್ಪ.

ಆಗ ಭೂಮಿತಾಯಿ ಸಂತೋಷದಿಂದ ಕೈತುಂಬಾ ಬೆಳೆ ಕೊಡ್ತಾಳೆ. ನಾಳೆ, ಹೊತ್ತು ಹುಟ್ಟಿದ ಮೇಲೆ ನನ್ನ ಕಣ್ಣಿಗೆ ಕಾಣಿಸ್ಕೋಬಾರ್ದು ಹೋಗು..." ಎಂದು ಮಮತೆಯಿಂದ ಬೆನ್ತಟ್ಟಿ ಕಳಿಸ್ತಿದ್ದರು.

ಆ ಪಿತೃವಾತ್ಸಲ್ಯ, ಜನರಲ್ಲಿ ಜೀವನ ಪ್ರೀತಿ, ಶಿಸ್ತು, ಸಂಯಮವೆಲ್ಲಾ ಮೇಳಯಿಸಿ, ಹಳ್ಳಿಯು ಸಮೃದ್ಧವಾಗಿ, ಶಾಂತಿ ನೆಮ್ಮದಿಯಿಂದಿರಲು ಸಾಧ್ಯವಾಗಿತ್ತು. ಅವರ ಸಾಮುದಾಯಿಕ ಕಾಳಜಿ, ಸಹಾನುಭೂತಿ, ಪರೋಪಕಾರಗಳು ರೆಡ್ಡಿಯವರ ಮನಸ್ಸಿನಲ್ಲಿ ಶಾಶ್ವತವಾಗಿ ಮನೆಮಾಡಿವೆ. ಈ ಇಳಿವಯಸ್ಸಿನಲ್ಲೂ ಸಮಾಜದ, ಅದರಲ್ಲೂ ಮುಖ್ಯವಾಗಿ ಕೃಷಿಕರ ನೆಮ್ಮದಿಗೋಸ್ಕರ ನಿರಂತರವಾಗಿ ಹೋರಾಡುತ್ತಿರಲು ಆ ಹಿರಿಯರ ಆದರ್ಶವೇ ಕಾರಣ.

ರೆಡ್ಡಿಯವರಿಗೋರ್ವ ಅಜ್ಜಿ ಇದ್ದರು. ವಿವೇಕಾನಂದರು ಒಮ್ಮೆ ಹೇಳಿದಂತೆ : 'ನೋಟವಿಲ್ಲದವನು ಕುರುಡನಲ್ಲ; ದೃಷ್ಟಿಯಿಲ್ಲದವನು ಕುರುಡ' ಎಂಬ ಮಾತು ಆಕೆಗೆ ಅಕ್ಷರಶಃ ಅನ್ವಯವಾಗುತ್ತದೆ. ಆಕೆಗೆ ನೋಟವಿಲ್ಲದಿದ್ದರೂ, ಮಕ್ಕಳಿಗೆ ಕನಸುಗಳನ್ನು ಕಟ್ಟಿಕೊಡುವ ಶಕ್ತಿಯಿತ್ತು. ಚಿಕ್ಕಪುಟ್ಟ ಮಕ್ಕಳನ್ನೆಲ್ಲಾ ರಾತ್ರಿಯ ಸಮಯ, ಬೆಳದಿಂಗಳ ಅಂಗಳದಲ್ಲಿ ಕೂರಿಸಿಕೊಂಡು ಮಾತನಾಡಿಸುವುದು ಆಕೆಯ ದಿನ ನಿತ್ಯದ ಕಾಯಕ. 'ಹಿಂದೊಬ್ಬ ರಾಜನಿದ್ದ, ಅವನು ಪರಾಕ್ರಮಿ' ಎಂದು ಊಹಾಲೋಕದ ಕಥೆಗಳನ್ನು ಆಕೆ ಹೇಳುತ್ತಿರಲಿಲ್ಲ. ತನ್ನದೇ ಕುಟುಂಬದ ಹಿರಿಯರ ಜೀವನ, ಶೌರ್ಯ, ಪರೋಪಕಾರ, ಗೌರವ ಇವೇ ಮೊದಲಾದ ವಿಶಿಷ್ಟ ಅಂಶಗಳನ್ನು ಮಕ್ಕಳಲ್ಲಿ ಮೈಗೂಡಿಸುವ ಕೆಲಸ ಮಾಡುತ್ತಿದ್ದರು. ಆ ಪ್ರಯೋಗದ ಒಂದು ತುಣುಕು ಈ ರೀತಿಯಿದೆ. "ಮಗು ನಾರಾಯಣ, ನಿಮ್ಮ ತಾತ, ದಾನದಲ್ಲಿ ಎತ್ತಿದ ಕೈ. ತುಂಬಾ ಚೆನ್ನಾಗಿ ಬದುಕಿ ಬಾಳಿದವರು. ಅದೊಂದು ಬಾರಿ, ಊರಿಗೆ ಬರ ಬಡಿದಿತ್ತು. ಊರಿನ ಎಲ್ಲಾ ಮನೆಗಳಲ್ಲಿನ ಶೇಖರಿಸಿದ್ದ ಕಾಳು ಮುಗಿದಿತ್ತು. ಆಗ ತಾತ ಗ್ರಾಮದಲ್ಲಿರುವ ೧೫೦೦ ಜನರಿಗೆ ಒಂದು ತಿಂಗಳಕಾಲ ಮೂರು ಹೊತ್ತು ಊಟ ಕೊಟ್ಟು ಪ್ರಾಣ ಉಳಿಸಿದರು. ಅಂತಹ ಕುಟುಂಬದ ಕೂಸಾಗಿ ನೀನು ಹುಟ್ಟಿದ್ದೀಯ. ಅವರ ಮರ್ಯಾದೆ ಘನತೆ ಕಾಪಾಡಬೇಕು ಕಣಪ್ಪ" ಎಂದು ಹೆಮ್ಮೆಯಿಂದ ಮಡಿಲಲ್ಲಿ ಕೂರಿಸಿಕೊಂಡು ಅಜ್ಜಿ ಹೇಳುತ್ತಿದ್ದರೆ, ಮೊಮ್ಮಗ ನಾರಾಯಣನಿಗೆ ಎದೆ

**ಕೃಷಿ ಸಂಬಂಧಿತ ಗಾದೆಗಳು**

- ಬಿತ್ತಿದಂತೆ ಬೆಳೆ
- ಅಶ್ವಿನಿ ಮಳೆಗೆ ಆರು ಕಟ್ಟು, ಭರಣಿ ಮಳೆಗೆ ಬೀಜ ಬಿತ್ತು
- ತೆಂಗು ತೇಲಿಸಿ ಹಾಕು, ಬಾಳೆ ಬಗದು ಹಾಕು
- ಉತ್ತರೆ ಮಳೆಗೆ ಉತ್ತೆತ್ತು ನೀರಿಗೆ ಬಿತ್ತು
- ಉಳುತ್ತ ಉಳುತ್ತ ಭೂಮಿ, ಓದ್ತಾ ಓದ್ತಾ ಇದ್ಯಾ
- ಅನ್ನ ಹಾಕಿದ ಮನೆ, ಗೊಬ್ಬರ ಹಾಕಿದ ಭೂಮಿ ಕೆಡಲ್ಲ
- ಬೇಸಾಯಗಾರ ಬೇಗ ಸಾಯ
- ಆಳಾಗಿ ದುಡಿ, ಅರಸಾಗಿ ಉಣ್ಣು
- ತಗ್ಗಿನ ಗದ್ದೆಗೆ ಮೂರು ಬೆಳೆ

ಉಕ್ಕಿಬರುತ್ತಿತ್ತು. 'ಬದುಕಿದರೆ ಹಾಗೆ ಬದುಕಬೇಕು' ಎಂದು ಅಂದೇ ನಿರ್ಧರಿಸಿದ್ದು. ಇಂದಿಗೂ ರೆಡ್ಡಿಯವರ ಮನೆಗೆ ನೂರರ ಸಂಖ್ಯೆಯಲ್ಲಿ ಜನರು ಯಾವುದೇ ಸಮಯದಲ್ಲಿ ಹೋದರೂ, ಖಾಲಿ ಹೊಟ್ಟೆಯಲ್ಲಿ ವಾಪಸ್ಸು ಬರುವುದಿಲ್ಲ. ತನ್ನಲ್ಲಿರುವುದನ್ನು ಹಂಚಿ ತಿನ್ನುವ ಮನೋಭಾವ ಅವರ ಕುಟುಂಬದಲ್ಲೇ ರಕ್ತಗತವಾಗಿದೆ.

ಇನ್ನು ಮೂರನೆಯ ಆದರ್ಶ, ಶಾಲೆಯ ಶಿಕ್ಷಕರುಗಳು. ಅದರಲ್ಲೂ ಮುಖ್ಯವಾಗಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಯ ಶಿಕ್ಷಕರುಗಳು. ಅವರು ಮಕ್ಕಳ ಮೇಲೆ ಇಟ್ಟಿದ್ದ ಮಮತೆ, ಪ್ರೀತಿ, ವಿಶ್ವಾಸಕ್ಕೆ ರೆಡ್ಡಿ ಚಿರಋಣಿ. ಶಾಲೆಯ ನಾಲ್ಕು ಗೋಡೆಯ ಒಳಗೆ ಶಿಕ್ಷಣ ಕಲಿಸದೆ ಪಕ್ಕದಲ್ಲಿದ್ದ ಹಳ್ಳ, ಗಿಡ, ಮರಗಳ ಹತ್ತಿರ ಕರೆದೊಯ್ದು ಆಪ್ಯಾಯಮಾನವಾಗಿ ಕೈಹಿಡಿದು ಅಕ್ಷರಾಭ್ಯಾಸ ಮಾಡಿಸುತ್ತಾ ಪರಿಸರದ ಪಾಠ ಹೇಳಿಕೊಡ್ತಿದ್ರು, ಈ ಅಂಶಗಳು ರೆಡ್ಡಿಯವರು ಪರಿಸರದೆಡೆಗೆ ಬಾಗಲು ಕಾರಣವಾಯ್ತು. ಮರಗಿಡಗಳ ಬಗ್ಗೆ ಕಾಳಜಿಗೂ ಅವರು ಬೀಜ ನೆಟ್ಟರು. ಅವರ ನಿಸ್ವಾರ್ಥ ಸೇವೆ ರೆಡ್ಡಿಯವರಲ್ಲಿ ಮೈಗೂಡಿ ತನ್ನತ್ತ ಬರುವವರಿಗೆ ರೆಡ್ಡಿಯವರು ಶಿಕ್ಷಕರಾಗುತ್ತಾರೆ.



ಗಿಡ ಮರಗಳೆಂದರೆ ರೆಡ್ಡಿಯವರಿಗೆ ಅದಮ್ಯ ಪ್ರೀತಿ, ಅವರಿಗೆ ಅತ್ಯಂತ ಪ್ರಿಯವಾದ ಕೆಲಸವೆಂದರೆ ಗಿಡ ನೆಡುವುದು. ದಿನಕ್ಕೊಂದು ಗಿಡ ನೆಡುವ ಪರಿಪಾಠ ರೂಢಿಸಿಕೊಂಡಿರುವ ಅವರು, ಇಂದಿಗೆ ಸುಮಾರು ೧೫,೦೦೦ ಮರಗಳಿಗೆ ಕಾರಣೀಭೂತರಾಗಿದ್ದಾರೆ. ರೆಡ್ಡಿಯವರಿಗೆ ಗಿಡ ಮರಗಳ ಮಹತ್ವ ತಿಳಿದದ್ದಾದರೂ ಹೇಗೆ? ಈ ವೃಕ್ಷ ಆಂದೋಲನ ಪ್ರಾರಂಭವಾದದ್ದು ಹೇಗೆ? ಎಂಬುದನ್ನು ಕೆದಕುತ್ತಾ ಹೋದರೆ, ಒಂದು ರೋಚಕ ಕಥೆ ಅನಾವರಣಗೊಳ್ಳುತ್ತದೆ.

ನಾರಾಯಣ ರೆಡ್ಡಿಯವರು ಸಂಚಾರಿ ಬದುಕು ಮುಗಿಸಿ ಮನೆಗೆ ವಾಪಸ್ಸು ಬಂದಾಗ, ಅವರ ಪಾಲಿಗೆ ಬಂದಿದ್ದ ಜಮೀನಿನಲ್ಲಿ ಒಂದು 'ಚಳ್ಳೆ ಮರ' ಬೆಳೆದಿತ್ತು. ಅದಕ್ಕೆ ಸುಮಾರು ೯೦ ರ ಪ್ರಾಯ. ತಂದೆ

ಒಂದು ಅಂದಾಜಿನ ಪ್ರಕಾರ ಮೂರು ಜನರಿರುವ ಒಂದು ಕುಟುಂಬದಲ್ಲಿ ಶೇಕಡಾ 20 ರಷ್ಟು ಆಹಾರ ವ್ಯರ್ಥ ಮಾಡುತ್ತಾರೆ. ಕಲ್ಯಾಣ ಮಂಟಪದಲ್ಲಿ ಶೇಕಡಾ 70, ದೊಡ್ಡ ಹೊಟೇಲ್ ಗಳಲ್ಲಿ ಶೇಕಡಾ 50, ಚಿಕ್ಕ ಹೊಟೇಲ್ ಗಳಲ್ಲಿ ಶೇಕಡಾ 20 ರಷ್ಟು ಆಹಾರವನ್ನು ವ್ಯರ್ಥವಾಗಿ ಚರಂಡಿಗಳಿಗೆ ಚೆಲ್ಲುತ್ತಾರೆ. ಇನ್ನು ಭಾರತದ ಜನರಿಗೆ ಆಹಾರ ಭದ್ರತೆಯನ್ನು ಒದಗಿಸಲು ಪ್ರಾರಂಭವಾದ 'ಭಾರತೀಯ ಆಹಾರನಿಗಮ' ದ ಕಡೆ ಒಂದಷ್ಟು ಕಣ್ಣು ಹಾಯಿಸಿದರೆ ಅಲ್ಲಿನ ಉಗ್ರಾಣದಲ್ಲಿ ಸಂಗ್ರಹವಾಗುವ ಆಹಾರ ಪದಾರ್ಥಗಳಲ್ಲಿ ಕನಿಷ್ಠ ಶೇಕಡಾ 11.5 ರಷ್ಟು ಪದಾರ್ಥಗಳು ಇಲಿ ಹೆಗ್ಗಣಗಳ ಪಾಲಾಗುತ್ತಿವೆ. ಇದು ಭಾರತದ ಅತಿ ದೊಡ್ಡ ದುರಂತ.

**- ಡಾ. ಎಲ್. ನಾರಾಯಣ ರೆಡ್ಡಿ**

ಲಕ್ಷ್ಮಯ್ಯ ರೆಡ್ಡಿಯವರು ಪ್ರೀತಿಯಿಂದ ಬೆಳೆಸಿದ ಮರ ಅದು. ತನ್ನದೇ ವಯಸ್ಸಾದ್ದರಿಂದ ಅವರಿಗೆ ಆ ಮರ ಸ್ನೇಹಿತನಂತೆ ಇತ್ತು. ಎಷ್ಟೋ ಬಾರಿ, ಅದರ ಅಡಿ ಕುಳಿತು, ಮಲಗಿ ತನ್ನ ದುಃಖದುಮ್ಮಾನ ಹೇಳಿಕೊಂಡಿದ್ದರು. ತನ್ನ ಜೀವನ ಪಯಣಕ್ಕೆ ಮೂಕ ಸಾಕ್ಷಿಯಾಗಿ ಮುಗಿಲೆತ್ತರಕ್ಕೆ ನಿಂತಿತ್ತು. ಆ ಮರದಲ್ಲಿ ಹಲವು ವಿಷಜಂತುಗಳು, ಪ್ರಾಣಿ, ಪಕ್ಷಿಗಳು ನೆಲೆಯನ್ನು ಕಂಡುಕೊಂಡಿದ್ದವು. ನಾರಾಯಣ ರೆಡ್ಡಿಯವರಿಗೆ ಅದರಿಂದ ಒಂದಷ್ಟು ನಷ್ಟವಾಗಿತ್ತು. ಕಾರಣ, ೧೦೦ ಅಡಿಗಳ ವ್ಯಾಸ ಹೊಂದಿದ್ದ ಆ ಮರದ ನೆರಳಿನಲ್ಲಿ ಯಾವುದೇ ಫಸಲು ಬೆಳೆಯುತ್ತಿರಲಿಲ್ಲ. ಆದ್ದರಿಂದ ಅದು ಅವರ ಕೆಂಗಣ್ಣಿಗೆ ಗುರಿಯಾಗಿತ್ತು. ಅದನ್ನು ಕಡಿದು ಒಂದಷ್ಟು ಕಾಸು ಮಾಡಿಕೊಳ್ಳೋಣವೆಂಬ ವ್ಯಾಪಾರಿ ಮನೋಭಾವ ಅವರಲ್ಲಿ ಚಿಗುರೊಡೆಯಿತು.

ಇದರ ಬಗ್ಗೆ ಸುಳಿವು ಸಿಕ್ಕ ತಂದೆಯವರು, ಮಗನನ್ನು ಕರೆಸಿ 'ಮಗಾ, ಆ ಮರವನ್ನು ಯಾವುದೇ ಕಾರಣಕ್ಕೂ ಕಡಿಯಬೇಡ. ಅದು ನಮ್ಮ ಪೂರ್ವಿಕರು ನಮಗೆ ಕೊಟ್ಟ ಬಳುವಳಿ. ಅದರಿಂದ ನಿನಗೆ ಆದಾಯದಲ್ಲಿ ಒಂದಷ್ಟು ಕಡಿಮೆಯಾಗಬಹುದು. ಆದರೆ, ಅದರಿಂದ ಸಿಗುವ ತರಗು, ಪ್ರಾಣಿ ಪಕ್ಷಿಗಳಿಂದ ನಿಜವಾದ ಲಾಭ ಹೆಚ್ಚಿದೆ.' ಎಂದು ಬುದ್ಧಿ ಹೇಳಿದರು. ಆದರೆ ಮೊದಲಿನಿಂದ ರೂಢಿಸಿಕೊಂಡಿದ್ದ ರೆಡ್ಡಿಯವರ 'ವ್ಯಾಪಾರಿ ಬುದ್ಧಿಗೆ' ಈ 'ಸುಸ್ಥಿರ ಬುದ್ಧಿ' ಹಿಡಿಸಲಿಲ್ಲ. 'ಇವರಿಗೇನು ವಯಸ್ಸಾಗಿದೆ. ಬುದ್ಧಿಯಿಲ್ಲ' ಎಂಬ ಬಾಲಿಶತನ ಹೆಚ್ಚಿ, ಅದೊಂದು ದಿನ ಮರ ಕಡಿಯುವವನನ್ನು ಕರೆಸಿ, ವ್ಯಾಪಾರವನ್ನು ಕುದುರಿಸಿದರು. ಆತ ಕೆಲಸಗಾರರನ್ನು ಕರೆತಂದು ಮರಕ್ಕೆ ಕೊಡಲಿಯೇಟು ಇಟ್ಟ. ಮುಗಿಲೆತ್ತರಕ್ಕಿದ್ದ ಬೃಹದಾಕಾರದ ಮರ ಕೆಲವೇ ಗಂಟೆಗಳಲ್ಲಿ, ಧರೆಗುರುಳಿತು.

ಅಗಾಧ ಶಬ್ದವನ್ನು ಕೇಳಿ ತಂದೆಯವರು ಓಡೋಡಿ ಬಂದರು. ತನ್ನ ಪ್ರೀತಿಯ ಮರದ ದುಃಸ್ಥಿತಿಯನ್ನು ಕಂಡು ಅವರಿಗೆ ಮಾತೇ ಹೊರಡಲಿಲ್ಲ. ಕಣ್ಣಲ್ಲಿ ನೀರು ಚಿಮ್ಮಿತು. ಮರದಲ್ಲಿ ಆಶ್ರಯ ಪಡೆದಿದ್ದ ಪ್ರಾಣಿ ಪಕ್ಷಿಗಳು ದಿಕ್ಕು ಕಾಣದೆ ಕಂಗಾಲಾದವು, ಅವುಗಳ ಅನಾಥ ಸ್ಥಿತಿಯನ್ನು ಕಂಡ ತಂದೆಯವರು ಅಂದಿನಿಂದಲೇ ಎಲ್ಲರೊಂದಿಗೆ ಮಾತು ಬಿಟ್ಟರು. ನಿರಾಹಾರ ದೀಕ್ಷೆ ಕೈಗೊಂಡರು. ಯಾರಿಗೂ ಅವರನ್ನು ಮಾತನಾಡಿಸುವ ಧೈರ್ಯ ಬರಲಿಲ್ಲ. ಮೊದಮೊದಲು ಲಘುವಾಗಿ ಪರಿಗಣಿಸಿದ ರೆಡ್ಡಿಯವರಿಗಂತೂ ತಂದೆಯವರಿಗೆ ಮುಖ ತೋರಿಸಲು ನಾಚಿಕೆಯಾಯಿತು. ಮನೆ ಮಂದಿಯೆಲ್ಲಾ ಪರಿಪರಿಯಾಗಿ ಬೇಡಿಕೊಂಡರೂ ತಂದೆಯವರು ದೀಕ್ಷೆ ಹಿಂಪಡೆಯಲಿಲ್ಲ. ಒಬ್ಬರೇ ಕೂತು ಬಿಕ್ಕಳಿಸಿ ಅಳುತ್ತಿದ್ದರು. ಒಂದುವಾರ ಆಹಾರವಿಲ್ಲದೆ ಅವರ ದೇಹ ಕೃಶವಾಗುತ್ತಾ ಬಂದಿತು. ಕೊನೆಗೆ ರೆಡ್ಡಿಯವರಿಗೆ ಒಂದು ಉಪಾಯ ಹೊಳೆಯಿತು. ತಂದೆಯವರ ಬಾಲ್ಯ ಸ್ನೇಹಿತರಲ್ಲಿ ೪ ಜನರು ಆತ್ಮೀಯರಿದ್ದರು. ಅವರನ್ನು ಕರೆತಂದು ತಂದೆಯವರನ್ನು ಬಹು ಕಷ್ಟದಿಂದ ಶಾಂತಪಡಿಸಲಾಯಿತು. ಆ ಶಾಂತತೆಗೆ ರೆಡ್ಡಿಯವರು ಮಾಡಿದ ಶಪಥ ಕಾರಣವಾಯಿತು. ತನ್ನ ತಪ್ಪನ್ನು ಅರಿತ ನಾರಾಯಣ ರೆಡ್ಡಿ, 'ಅಪ್ಪಾ

... ನಾನು ಮಾಡಿದ್ದು ತಪ್ಪಾಯಿತು. ಹಣದ ಆಸೆಗೆ ಬಲಿಯಾಗಿ ಮರವನ್ನು ಕಡಿಸಿದೆ, ಇನ್ನೆಂದೂ ಈ ರೀತಿಯ ತಪ್ಪು ಮಾಡುವುದಿಲ್ಲ. ಇಂದು ಒಂದು ಮರ ಕಡಿದಿದ್ದೇನೆ. ಮುಂದೆ ೧೦೦೦೦ ಗಿಡಗಳನ್ನು ನೆಟ್ಟು ಆರೈಕೆ ಮಾಡುತ್ತೇನೆ. ಬೃಹತ್ ಮರಗಳನ್ನಾಗಿಸುತ್ತೇನೆ' ಎಂದು ತಂದೆಯವರೊಂದಿಗೆ ಮಾಡಿದ ಶಪಥ, ಇಂದು ೧೫,೦೦೦ ಮರಗಳನ್ನು ಪ್ರಕೃತಿಗೆ ವೃಕ್ಷ ಕೊಡುಗೆ ನೀಡುವಂತೆ ಮಾಡಿದೆ.

ಇವುಗಳೆಲ್ಲದರ ಜೊತೆಗೆ ರೆಡ್ಡಿಯವರು ಪ್ರವರ್ಧಮಾನಕ್ಕೆ ಬಂದ ನಂತರ ಗಾಂಧೀ-ವಿನೋಬಾರ ಪ್ರಭಾವ ಸ್ವಲ್ಪಮಟ್ಟಿಗೆ ಆಯ್ತು. ಅದರಲ್ಲೂ, ಗಾಂಧೀಜಿಯವರ ಸತ್ಯ, ಅಹಿಂಸೆ, ಪರೋಪಕಾರ, ಗುಡಿ ಮತ್ತು ಸಣ್ಣ ಕೈಗಾರಿಕೆಗಳೆಡೆಗಿನ ಒಲವು ಇವರನ್ನು ಹಲವು ಪ್ರಯೋಗಗಳಿಗೆ ಒಡ್ಡಲು ಪ್ರೇರೇಪಣೆಯಾಯಿತು. ಅವರ ಖಾದಿ ಪ್ರೇಮ ರೆಡ್ಡಿಯವರಲ್ಲಿ ಮನೆ ಮಾಡಿತು. ಸದಾ ಖಾದಿಯ ಬಟ್ಟೆಗಳನ್ನು ಧರಿಸುವಂತಾಯಿತು. 'ಸ್ವದೇಶಿತನ ಉಳಿಯಲಿಲ್ಲವೆಂದರೆ, ದೇಶದ ನಾಶ ನಿಶ್ಚಿತ'ವೆಂಬ ಗಾಂಧಿ ಧ್ವನಿಯನ್ನು ಇವರು ಮಾರ್ದನಿಸುವಂತಾಯಿತು. ರೆಡ್ಡಿಯವರು ಇಂದಿನ ಮಕ್ಕಳಿಗೆ, ಯುವ ಪೀಳಿಗೆಗೆ ಹೇಳುವುದಿಷ್ಟೇ: 'ಆದರ್ಶಗಳು ನಮ್ಮ ಹಳ್ಳಿ, ಕುಟುಂಬದ ಸುತ್ತುಮುತ್ತಲೇ ಇವೆ. ಅವುಗಳನ್ನು ಹುಡುಕುವ ಮನಸ್ಸು ಬೇಕು. ಪ್ರತಿಯೊಬ್ಬರಲ್ಲೂ ಒಂದೊಂದು ಆದರ್ಶವಿರುತ್ತದೆ. ಅವುಗಳನ್ನು ಜೀವನದಲ್ಲಿ ಶಾಂತಿಯನ್ನು ಮೈಗೂಡಿಸಿಕೊಂಡರೆ ಕಾಣಬಹುದು. ಸಮಾಜಕ್ಕೂ ಕೊಡುಗೆಯನ್ನು ನೀಡಬಹುದು. ಎಲ್ಲಕ್ಕೂ ದೃಷ್ಟಿ ಮತ್ತು ಸಂಕಲ್ಪಗಳು ಬೇಕಷ್ಟೇ.'

## ಲೇಖಕರ ಪರಿಚಯ



ನಾಡೋಜ ಡಾ ಎಲ್ ನಾರಾಯಣ ರೆಡ್ಡಿ ಅವರ ಬದುಕು, ಚಿಂತನೆಯ ಕುರಿತಾಗಿ ವಿವರಿಸಿರುವ 'ನೆಲದೊಡಲ ಚಿಗುರು' ಎಂಬ ಕೃತಿಯನ್ನು ಬರೆದವರು ಎನ್ ಎಲ್ ಆನಂದ್ ಮತ್ತು ಗುಂಡಪ್ಪ ದೇವಿಕೇರಿ ಎಂಬವರು. ಎನ್.ಎಲ್. ಆನಂದ್ ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರಿನವರು, ಅವರು ಬೆಂಗಳೂರು ವಿಶ್ವವಿದ್ಯಾಲಯದಿಂದ ಸಮಾಜಕಾರ್ಯದಲ್ಲಿ ಸ್ನಾತಕೋತ್ತರ ಪದವಿಯನ್ನೂ ಅನಂತಪುರದ ಕೃಷ್ಣದೇವರಾಯ ವಿಶ್ವವಿದ್ಯಾಲಯದಿಂದ ಎಂ.ಫಿಲ್. ಪದವಿಯನ್ನೂ ಪಿ.ಎಚ್.ಡಿ ಪದವಿಯನ್ನೂ ಪಡೆದಿದ್ದಾರೆ. ಸಾಮಾಜಿಕ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವ ಇವರು ಸಮೃದ್ಧಿ ಸೇವಾ ಸಂಸ್ಥೆ ಎಂಬ ಟ್ರಸ್ಟ್ ಮೂಲಕ ಹಳ್ಳಿಗಳ ಅಭಿವೃದ್ಧಿ ಕಾರ್ಯದಲ್ಲಿ ನಿರತರಾಗಿದ್ದಾರೆ. 'ಸಮಾಜ ಕಾರ್ಯದ ಕಣಸುಗಾರ - ಪ್ರೊ . ಎಚ್ .ಎಮ್. ಮರುಳಸಿದ್ದಯ್ಯ' ಎಂಬ ಜೀವನ ಚರಿತ್ರೆ, 'ಲೋಕಪ್ರತೀತ - ಜಯಪ್ರಕಾಶ ನಾರಾಯಣ', 'ಅಭಯಸಾಧಕ - ಬಾಬಾ ಅಮಟೆ', 'ಹಸಿರು ಹಾದಿಯ ಪ್ರಗುಣ - ಸುಂದರ್ ಲಾಲ್ ಬಹುಗುಣ' ಮುಂತಾದವು ಇವರ ಇನ್ನಿತರ ಕೃತಿಗಳು. ಶ್ರೀಯುತರು ಪ್ರಸ್ತುತ ಅಜ್ಜಂಪುರ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಗುಂಡಪ್ಪ ದೇವಿಕೇರಿಯವರು ರಾಯಚೂರು ಜಿಲ್ಲೆಯ ಲಿಂಗಸಗೂರು ತಾಲೂಕಿನ ಗುಡದನಾಳ ಗ್ರಾಮದವರು. ಬೆಂಗಳೂರು ವಿಶ್ವವಿದ್ಯಾಲಯದಿಂದ ಸಮಾಜಕಾರ್ಯದಲ್ಲಿ ಸ್ನಾತಕೋತ್ತರ ಪದವಿಯನ್ನೂ ತಮಿಳುನಾಡಿನ ಭಾರತಿದಾಸನ್ ವಿವಿಯಿಂದ ಎಂಫಿಲ್ ಪದವಿಯನ್ನೂ, ತುಮಕೂರು ವಿವಿಯಿಂದ ಪಿ.ಎಚ್.ಡಿ ಪದವಿಯನ್ನೂ ಪಡೆದಿದ್ದಾರೆ. ಇವರು ಹಲವು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸ್ವಯಂ ಸೇವಾ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿದ ಅನುಭವವನ್ನು ಹೊಂದಿದ್ದಾರೆ. ಶ್ರೀಯುತರು ಪ್ರಸ್ತುತ ಬೆಂಗಳೂರು ಉತ್ತರ ವಿವಿಯ ಸಮಾಜಕಾರ್ಯ ವಿಭಾಗದ ಸಂಯೋಜಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.



## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ನಾರಾಯಣ ರೆಡ್ಡಿ ಅವರಿಗೆ ಹಳ್ಳಿ, ಸಮಾಜದ ಬಗ್ಗೆ ನೈಜ ಕಾಳಜಿ ಮೂಡಲು ಕಾರಣರಾದ ಹಿರಿಯ ಗೌಡ ಬಾಲರೆಡ್ಡಿ ಅವರ ಗುಣ ವಿಶೇಷತೆಗಳೇನು?
2. ರೆಡ್ಡಿಯವರು ಪರಿಸರದೆಡೆಗೆ ಆಕರ್ಷಿತರಾಗಲು ಕಾರಣವೇನು?
3. ರೆಡ್ಡಿಯವರ ತಂದೆಯವರು ಎಲ್ಲರೊಂದಿಗೆ ಮಾತು ಬಿಡಲು ಕಾರಣವಾದ ಘಟನೆಯನ್ನು ಬರೆಯಿರಿ
4. ರೆಡ್ಡಿಯವರು ತನ್ನ ತಂದೆಯವರನ್ನು ಹೇಗೆ ಶಾಂತಗೊಳಿಸಿದರು?

## ಅಭಿಪ್ರಾಯ ಟಿಪ್ಪಣಿ ಬರೆಯಿರಿ

'ಬದುಕಿದರೆ ಹಾಗೆ ಬದುಕಬೇಕು' - ಎಂದು ನಾರಾಯಣ ರೆಡ್ಡಿಯವರು ನಿರ್ಧಾರಕ್ಕೆ ಬರಲು ಕಾರಣವಾದ ಸನ್ನಿವೇಶ ಯಾವುದು? ನಿಮ್ಮ ಅಭಿಪ್ರಾಯಗಳೊಂದಿಗೆ ಸಂಕ್ಷಿಪ್ತವಾಗಿ ಬರೆಯಿರಿ.

## ಓದುಗರ ಓಲೆ ಬರೆಯಿರಿ

ನಗರೀಕರಣದ ಹಿನ್ನೆಲೆಯಲ್ಲಿ ಕೃಷಿ ಭೂಮಿ ಹಾಗೂ ಕೆರೆಗಳಿಗೆ ಮಣ್ಣು ತುಂಬಿಸುವ, ಮರಗಳನ್ನು ಕಡಿಯುವ ಪ್ರವೃತ್ತಿಗಳು ಎಲ್ಲೆಡೆ ಕಂಡುಬರುತ್ತವೆ. ಈ ಕುರಿತು ಜಾಗೃತಿ ಮೂಡಿಸಲು ಪತ್ರಿಕೆಯ 'ಓದುಗರ ಓಲೆ' ವಿಭಾಗಕ್ಕೆ ಒಂದು ಓಲೆ ಬರೆಯಿರಿ.

## ಪತ್ರಿಕಾ ವರದಿ ತಯಾರಿಸಿರಿ

ಇಕೋ ಕ್ಲಬ್ಬಿನ ವತಿಯಿಂದ ಶಾಲೆಯಲ್ಲಿ ನಡೆದ ಕೃಷಿ ದಿನಾಚರಣೆಯ ಪತ್ರಿಕಾ ವರದಿಯೊಂದನ್ನು ತಯಾರಿಸಿರಿ.

## ವ್ಯಕ್ತಿ ಚಿತ್ರ ತಯಾರಿಸಿರಿ

ನಿಮ್ಮ ಪರಿಸರದಲ್ಲಿರುವ ಕೃಷಿ ಸಾಧಕರನ್ನು ಭೇಟಿ ಮಾಡಿ ಮಾಹಿತಿಗಳನ್ನು ಸಂಗ್ರಹಿಸಿ ಅವರ ಕುರಿತು ವ್ಯಕ್ತಿ ಚಿತ್ರವನ್ನು ತಯಾರಿಸಿರಿ.

## ಪ್ರಬಂಧ ಬರೆಯಿರಿ

'ಕೃಷಿ - ಆಹಾರ ಸ್ವಾವಲಂಬನೆ' ಎಂಬ ವಿಷಯದ ಕುರಿತು ಒಂದು ಪ್ರಬಂಧ ಬರೆಯಿರಿ .

## ಸಮಾಸ ಗುರುತಿಸಿರಿ

ಕೆಳಗೆ ಕೊಟ್ಟ ಪದಗಳನ್ನು ಗಮನಿಸಿರಿ.

ಹೊಲತೋಟಗದ್ದೆಗಳು - ಹೊಲವೂ ತೋಟವೂ ಗದ್ದೆಯೂ

ಬೆಟ್ಟಗುಡ್ಡಗಳು - ಬೆಟ್ಟವೂ ಗುಡ್ಡವೂ

ಎರಡು ಅಥವಾ ಎರಡಕ್ಕಿಂತ ಹೆಚ್ಚು ನಾಮಪದಗಳು ಒಟ್ಟಿಗೆ ಸೇರಿ ಸಮಾಸವಾಗುವುದನ್ನು ದ್ವಂದ್ವ ಸಮಾಸ ಎನ್ನುವರು. ದ್ವಂದ್ವ ಸಮಾಸದಲ್ಲಿ ಎಲ್ಲಾ ಪದಗಳ ಅರ್ಥವೂ ಪ್ರಧಾನವಾಗಿದೆ.

ದ್ವಂದ್ವ ಸಮಾಸವಾಗುವ ಪದಗಳನ್ನು ಪಾಠದಿಂದ ಆರಿಸಿ ಬರೆಯಿರಿ.

# 5. ಮಾನವೀಯತೆಯ ಸೆಲೆ



ಮಾನವರು ಸಮಾಜ ಜೀವಿಗಳು. ಸಮಾಜ ಜೀವಿಗಳಾದ ಮಾನವರು ತನ್ನ ಸುತ್ತಮುತ್ತಲು ಇರುವ ಇತರರೊಡನೆ ಸೌಹಾರ್ದದಿಂದ, ಸಹಕಾರ ಮನೋಭಾವದಿಂದ ಸಮಾಜಮುಖಿಯಾಗಿ ಬಾಳಬೇಕು. ಸಮಾಜಕ್ಕೆ ಕಂಟಕವಾಗುವ ಯಾವುದೇ ದುಷ್ಕೃತ್ಯಗಳಲ್ಲಿ ತೊಡಗದೆ ಸಮಾಜಕ್ಕೆ ಒಳಿತಾಗುವ ಸತ್ಕಾರ್ಯಗಳನ್ನು ಮಾಡಬೇಕು. ಪ್ರೀತಿ, ದಯೆ, ಕರುಣೆ, ತ್ಯಾಗ, ಶಾಂತಿ ಮೊದಲಾದ ಮಾನವೀಯ ಗುಣಗಳನ್ನು ರೂಢಿಸಿಕೊಳ್ಳಬೇಕು. ನಾಗರಿಕ ಪ್ರಜ್ಞೆಯನ್ನು ಬೆಳೆಸಿಕೊಂಡು ಎಲ್ಲರಿಗೂ ನೆಮ್ಮದಿಯಿಂದ ಬದುಕುವ ವಾತಾವರಣವನ್ನು ಸೃಷ್ಟಿಸಬೇಕು. ಇದರಿಂದ ಸಮಾಜದಲ್ಲಿ ಸುಖ ಶಾಂತಿ ನೆಮ್ಮದಿ ನೆಲೆಸುವುದು. ಈ ಉದ್ದೇಶದಿಂದ 'ಮಾನವೀಯತೆಯ ಸೆಲೆ' ಎಂಬ ಘಟಕವನ್ನು ಪಾಠ ಪುಸ್ತಕದಲ್ಲಿ ಅಳವಡಿಸಲಾಗಿದೆ.



ಪ್ರವೇಶ ಚಟುವಟಿಕೆಯಾಗಿ ಎಸ್. ಷಡಕ್ಷರಿ ಅವರ 'ಬದುಕು ಸಾರ್ಥಕ ಎನಿಸುವುದು ಯಾವಾಗ?' ಎಂಬ ಅಂಕಣ ಬರಹವನ್ನು ನೀಡಲಾಗಿದೆ. ಈ ಘಟಕದ ಮೊದಲ ಪಾಠವಾದ ರತ್ನಾಕರವರ್ಣಿಯ ಭರತೇಶ ವೈಭವದಿಂದ ಆಯ್ದುಕೊಂಡ 'ಅಂತರಂಗವ ಕಾಂಬರಾರು' ಎಂಬ ಕಾವ್ಯಭಾಗದಲ್ಲಿ ಅಣ್ಣನೊಂದಿಗೆ ಯುದ್ಧೋನ್ಮುಖನಾದ ಬಾಹುಬಲಿಯನ್ನು ಯುದ್ಧ ಮಾಡದಂತೆ ತಾಯಿಯು ಮನವೊಲಿಸುವ ಸನ್ನಿವೇಶದ ವರ್ಣನೆಯಿದೆ. ಎಚ್. ಡುಂಡಿರಾಜರ 'ದಾರಿ ಯಾವುದಯ್ಯಾ?' ಎಂಬ ಲಲಿತ ಪ್ರಬಂಧವು ದಾರಿ ಹುಡುಕುವ ಸಂದರ್ಭದಲ್ಲಿ ಅನುಭವಿಸುವ ಬವಣೆಗಳನ್ನು ಸ್ವಾರಸ್ಯಕರವಾಗಿ ವಿವರಿಸುತ್ತದೆ. ಲೀಲಾ ಮಣ್ಣಾಲರ 'ಮುನ್ನಡೆಸು ಬೆಳಕಿನೆಡೆಗೆ' ಎಂಬ ಐತಿಹಾಸಿಕ ನಾಟಕವು ಜನರ ನೋವು, ಸಂಕಟಗಳಿಗೆ ಪರಿಹಾರವನ್ನು ಹುಡುಕಿಕೊಂಡು ಹೋಗುವ ಸಿದ್ಧಾರ್ಥನ ನಿಸ್ವಾರ್ಥ ಜೀವನದ ಚಿತ್ರಣವನ್ನು ನಮಗೆ ನೀಡುತ್ತದೆ.



# ಬದುಕು ಸಾರ್ಥಕ ಎನಿಸುವುದು ಯಾವಾಗ?

- ಎಸ್. ಷಡಕ್ಷರಿ

ಎ.ಪಿ.ಜೆ. ಅಬ್ದುಲ್ ಕಲಾಂ ವೈಮಾನಿಕ ತಂತ್ರಜ್ಞಾನದಲ್ಲಿ ಪದವಿ ಪಡೆದವರು. ಇಸ್ರೋ ಮತ್ತು ಡಿ.ಆರ್.ಡಿ.ಓ.ಗಳ ಮುಖ್ಯಸ್ಥರಾದವರು. ಅನೇಕ ರಾಕೆಟ್‌ಗಳನ್ನು ಯಶಸ್ವಿಯಾಗಿ ಹಾರಿಸಿದವರು. ಪ್ರಖ್ಯಾತ ವಿಜ್ಞಾನಿ. ಮೂವತ್ತು ವಿಶ್ವವಿದ್ಯಾನಿಲಯಗಳಿಂದ ಗೌರವ ಡಾಕ್ಟರೇಟ್ ಪಡೆದವರು. ಭಾರತದ ಅತ್ಯುನ್ನತ ಗೌರವಗಳಾದ ಪದ್ಮಭೂಷಣ, ಪದ್ಮವಿಭೂಷಣ, ಹಾಗೂ ಭಾರತರತ್ನ ಪ್ರಶಸ್ತಿಗಳನ್ನು ಪಡೆದವರು. ಭಾರತದ ರಾಷ್ಟ್ರಪತಿಯೂ ಆಗಿದ್ದವರು.

ಇವರನ್ನು 'ನಿಮ್ಮ ಬದುಕು ಸಾರ್ಥಕ ಎನಿಸಿದ ಕ್ಷಣ ಯಾವುದು?' ಎಂದು ಕೇಳಲಾಯಿತು. ಬಹು ಜನ ನಿರೀಕ್ಷಿಸಿದ್ದು ಗೌರವ ಡಾಕ್ಟರೇಟ್ ಪಡೆದಿದ್ದನ್ನೋ, ಇಸ್ರೋದ ರಾಕೆಟ್ ಯಶಸ್ವಿಯಾಗಿ ಉಡಾಯಿಸಿದ್ದನ್ನೋ ಅಥವಾ ರಾಷ್ಟ್ರಪತಿಯಾಗಿ ಅಧಿಕಾರ ಸ್ವೀಕರಿಸಿದ ಕ್ಷಣವನ್ನೋ ಹೇಳುತ್ತಾರೆಂದು. ಆದರೆ ಅಬ್ದುಲ್ ಕಲಾಂ ಅವರು ನೀಡಿದ ಉತ್ತರ ಆಶ್ಚರ್ಯಕರವಾಗಿತ್ತು. ಆ ಘಟನೆ ಹೀಗಿದೆ:

'ಒಮ್ಮೆ ನಾನು ಹೈದರಾಬಾದಿನ ನಿಜಾಂ ಆಸ್ಪತ್ರೆಯ ಪೋಲಿಯೋ ಪೀಡಿತ ಮಕ್ಕಳ ವಿಭಾಗಕ್ಕೆ ಹೋಗಿದ್ದೆ. ಈ ಮಕ್ಕಳ ಕಾಲುಗಳು ನಿರ್ಬಲವಾಗಿರುತ್ತವೆ. ಅವರು ನಡೆಯುವುದಕ್ಕಾಗಿ ಕಾಲಿಗೆ ಲೋಹದ ಕ್ಯಾಲಿಪರ್ಸ್‌ಗಳನ್ನು ಹಾಕಿಕೊಂಡಿರುತ್ತಾರೆ. ಮೂರು ಕೇಜಿ ತೂಕದ ಈ ಕ್ಯಾಲಿಪರ್ಸ್‌ಗಳು ಅವರು ಕಾಲುಗಳನ್ನು ಎಳೆದೆಳೆದು ಹಾಕುವ ಕಷ್ಟಕ್ಕೆ ಒಳಪಡಿಸುತ್ತವೆ. ವೈದ್ಯಾಧಿಕಾರಿಗಳು 'ಈ ನಮ್ಮ ರೋಗಿಗಳ ನೋವನ್ನು ನಿವಾರಿಸಲು ಸಾಧ್ಯವೇ?' ಎಂದು ಕೋರಿದರು.

ನಾನು ಅಲ್ಲಿಂದ ನೇರವಾಗಿ ಇಸ್ರೋದ ಪ್ರಯೋಗಾಲಯಕ್ಕೆ ಬಂದೆ. ತಜ್ಞರಿಗೆ ಈ ಸಮಸ್ಯೆಯನ್ನು ವಿವರಿಸಿದೆ. ನಾವೆಲ್ಲ ಮೂರು ವಾರಗಳ ಕಾಲ ಬಿಡುವಿಲ್ಲದ ಹಾಗೆ ದುಡಿದೆವು. ರಾಕೆಟ್ ತಯಾರಿಕೆಯಲ್ಲಿ ಉಪಯೋಗಿಸುವ ಒಂದು ವಿಶಿಷ್ಟ ಪದಾರ್ಥದಿಂದ ಹೊಸ ಕ್ಯಾಲಿಪರ್ಸ್‌ನ್ನು ತಯಾರು ಮಾಡಿದೆವು. ಈ ಹೊಸ ಕ್ಯಾಲಿಪರ್ಸ್ ಲೋಹಕ್ಕಿಂತ ಹೆಚ್ಚು ಬಲಿಷ್ಠವಾಗಿತ್ತು. ಆದರೆ ತೂಕ ಮಾತ್ರ ಕೇವಲ ಮುನ್ನೂರು ಗ್ರಾಂ. ಮತ್ತೆ ಹೈದರಾಬಾದಿನ ಆಸ್ಪತ್ರೆಗೆ ಹೋಗಿ ಮಕ್ಕಳ ಕಾಲಿಗೆ ಕ್ಯಾಲಿಪರ್ಸ್ ತೊಡಿಸಿದೆವು. ಮೂರು ಕೇಜಿ ತೂಕದ ಕ್ಯಾಲಿಪರ್ಸ್‌ಗಳನ್ನು ಹೊತ್ತು ನಡೆಯಲಾಗದೆ ಬಳಲುತ್ತಿದ್ದ ಮಕ್ಕಳು ಹಗುರವಾದ ಕ್ಯಾಲಿಪರ್ಸ್‌ಗಳನ್ನು ಹಾಕಿಕೊಂಡು ನಲಿದಾಡುತ್ತಿದ್ದರು. ಮಕ್ಕಳಿಗೆ ಆನಂದವೋ ಆನಂದ. ಅವರ ತಂದೆ ತಾಯಿಗಳ ಕಣ್ಣಲ್ಲೂ ವೈದ್ಯಾಧಿಕಾರಿಗಳ ಕಣ್ಣಲ್ಲೂ ಆನಂದಭಾಷ್ಪ ಸುರಿಯುತ್ತಿತ್ತು. ಅವರ ಕಣ್ಣೀರು ನೋಡಿ ನನಗೂ ಕಣ್ಣೀರು ಬಂತು. ನನ್ನ ಬದುಕಿನ ಸಾರ್ಥಕ ಕ್ಷಣ ಅದು.'

ನಾವು ಏನನ್ನೋ ಗಳಿಸಿದಾಗ, ಪದವಿ ಪಡೆದಾಗ, ಪ್ರಶಸ್ತಿ ಸ್ವೀಕರಿಸಿದಾಗ ನಮಗೆ ಸಂತೋಷವಾಗಬಹುದು. ಆದರೆ ಬದುಕು ಸಾರ್ಥಕ ಎನಿಸುವುದು ಮತ್ತೊಬ್ಬರ ಕಷ್ಟವನ್ನು ನಿವಾರಣೆ ಮಾಡಿದ ಕ್ಷಣದಲ್ಲಿ!

- ಮೇಲಿನ ಘಟನೆಯ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಬರೆದು ಮಂಡಿಸಿರಿ.

# ಅಂತರಂಗವ ಕಾಂಬರಾರು

- ರತ್ನಾಕರವರ್ಣಿ

(ಸಂದರ್ಭ: ವೃಷಭನಾಥನ ನೂರು ಮಂದಿ ಮಕ್ಕಳಲ್ಲಿ ಹಿರಿಯವನಾದ ಭರತ ಮಹಾರಾಜನು ಕೋಸಲ ದೇಶವನ್ನು ಆಳುತ್ತಿದ್ದನು. ಒಮ್ಮೆ ಆತನ ಆಯುಧಾಗಾರದಲ್ಲಿ ದಿಗ್ವಿಜಯ ಸೂಚಕವಾದ ಚಕ್ರರತ್ನ ಉದಿಸಿತು. ಮಂತ್ರಿಗಳ ನಿವೇದನೆಯ ಮೇರೆಗೆ ಭರತನು ದಿಗ್ವಿಜಯಕ್ಕೆ ಹೊರಟನು. ದಿಗ್ವಿಜಯವನ್ನು ಸಾಧಿಸಿ ಹಿಂದಿರುಗಿ ಬಂದಾಗ ಪೌದನಾಪುರದ ಬಳಿ ಚಕ್ರರತ್ನವು ಇದ್ದಕ್ಕಿದ್ದಂತೆಯೇ ನಿಂತು ಹೋಯಿತು. ಅನುಜನಾದ ಬಾಹುಬಲಿಯು ತಮ್ಮಂದಿರೊಂದಿಗೆ ಬಂದು ತನಗೆ ಶರಣಾಗದ ಹೊರತು ಚಕ್ರ ಮುಂದೆ ಉರುಳುವಂತಿಲ್ಲ ಎಂದು ತಿಳಿದ ಭರತನು ತಮ್ಮಂದಿರೆಲ್ಲ ತನಗೆ ತಲೆಬಾಗಿ ಬಾಳಬೇಕೆಂದು ಕೇಳಿಕೊಂಡು ಅವರಿಗೆ ಓಲೆಗಳನ್ನು ಕಳುಹಿಸಿದನು. ಅದನ್ನು ಓದಿಕೊಂಡ ತಮ್ಮಂದಿರು ತಂದೆ ಕೊಟ್ಟ ಉಂಬಳಿಯೊಳಗಿರುವ ತಾವು ಈತನಿಗೇಕೆ ಆನತರಾಗಿ ಬಾಳಬೇಕೆಂದು ಬಗೆದು ಕೈಲಾಸಗಿರಿಗೆ ಹೋಗಿ ತಂದೆಯ ಬಳಿಯಲ್ಲಿ ದೀಕ್ಷೆ ಪಡೆದು ತಪೋನಿರತರಾದರು. ಪೌದನಾಪುರದ ಅಧಿಪತಿಯಾದ ಬಾಹುಬಲಿಯೊಬ್ಬನು ಮಾತ್ರ ಅಣ್ಣನ ವಿರುದ್ಧ ಸೆಟೆದು ನಿಂತನು. ಅಣ್ಣನ ಆಳ್ವಿಕೆಗೆ ತಲೆಬಾಗದೆ ಆತನ ವಿರುದ್ಧ ಯುದ್ಧ ಮಾಡಲು ತನ್ನ ಬಲವನ್ನು ಸಜ್ಜುಗೊಳಿಸಿದನು. ಅವನ ಮನಃಪರಿವರ್ತನೆ ಮಾಡಬೇಕೆಂದು ಭರತನ ಮಂತ್ರಿಗಳು ಮಾಡಿದ ಪ್ರಯತ್ನಗಳೆಲ್ಲವೂ ನಿಷ್ಫಲವಾದುವು. ಈ ವಿಷಯವನ್ನು ತಿಳಿದ ಬಾಹುಬಲಿಯ ತಾಯಿ ಸುನಂದಾದೇವಿಯು ಆತನನ್ನು ತನ್ನ ಬಳಿಗೆ ಕರೆಸಿಕೊಂಡು ಅಣ್ಣನ ಜೊತೆ ಯುದ್ಧ ಮಾಡದಂತೆ ಮನವೊಲಿಸಲು ಪ್ರಯತ್ನಿಸುವ ಸನ್ನಿವೇಶ ಈ ಭಾಗದಲ್ಲಿದೆ.)

ಕಟಕದ ವಾರ್ತೆಯ ಕೇಳುತಿಷ್ಟಳುಕುತ
ಪಟುವಾಗಿ ಮೊದಲು ತಾ ನುಡಿದ
ಘಟಿತ ಗರ್ವವ ನೆನೆದಾ ಕಾಮ ಕೂಡೆ ಹೋ
ರಟೆಗೆ ಮುಂಕೊಂಡನೇನೆಂಬೆ ||೧||

ಮಿಗೆ ಸುನಂದಾದೇವಿ ಕೇಳ್ದು ಪ್ರಾಪ್ತರನಟ್ಟಿ
ಮಗನ ಕರೆಸಿದಳು ಮನೆಗೆ
ದುಗುಡವ ಕಾಣಿಸದಂಗಜ ಬಂದಿಷ್ಟು
ನಗೆಮೊಗದಿಂದೆರಗಿದನು ||೨||

ಭುಜಬಲಿ ದೊಡ್ಡಣ್ಣನೊಡನೆ ಕಾಳಗವೆಂದು
ಗಜಬಜಿಸಿದೆ ಕಂಡ ನೀನು
ಸುಜನರಾರಿದ ಮೆಚ್ಚುವರು ಸುಡು ನಿನ್ನೊಂದು
ಕುಜನಮಾರ್ಗವನೆಂದಳಾಕೆ ||೩||

ಅಣ್ಣನ ಕೂಡೆ ಕಾಳಗವ ಮಾಡೆಂದಾನು
ಬೆಣ್ಣೆವಾಲೂಡಿ ಸಾಕಿದೆನೆ
ತಣ್ಣನೆ ಮಾಡಬೇಕೆಮ್ಮೆಲ್ಲರುದರಕೆ
ಹುಣ್ಣುಮಾಳ್ಪುದು ಲೇಸೆ ಮಗನೆ ||೪||

ಹಿರಿಯಣ್ಣ ಹೆತ್ತ ತಂದೆಯ ಪಾಟಿಯೆಂದು ಸ
ತ್ಪುರುಷರು ಭಕ್ತಿ ಮಾಡುವರು
ಸರಿ ನಾನು ತಾನೆಂದು ದಾಯಾದ್ಯರಾಗಿ ಧೂ
ರ್ತರು ಹೋರುವರು ಜಗದೊಳಗೆ ||೫||

ಎಲ್ಲರು ತಪಸಿಗೆಯ್ದಿದರು ನೀನೊಬ್ಬನ
ಮ್ಮೆಲ್ಲರರ್ತಿಯ ಸಲಿಸಣ್ಣ
ಬಲ್ಲಿತುದೋರದಿರಣ್ಣನಿಗೆರಗೆಂದು
ಗಲ್ಲವ ಪಿಡಿದಲುಗಿದಳು ||೬||



ಇಲ್ಲಮ್ಮಾಜಿ ಕಾಳಗವೆಂದು ಮೊದಲಿಷ್ಟು
ಸೊಲ್ಲಿಸಿದೆನು ಕೋಪದಿಂದ
ಸಲ್ಲದೆಂದೆಲ್ಲರಾಡಲು ಬಿಟ್ಟೆನಣ್ಣನ|
ಮೆಲ್ಲಡಿಗೆರಗುವೆನೆಂದ || ೭||

ಪರರಲ್ಲವೆಂಬುದ ಮಾಡೆನು ನಾನು ದೇ
ವರಿಗತಿ ಚಿಂತೆಯೇಕಿದಕೆ
ಶಿರಬಾಗಿ ಬಹೆನಣ್ಣಗೆಂದನು ಮಾತಿನೊ
ಳಿರಿಸಿಕೊಂಡೆದೆಯೊಳು ಕೋಪ || ೮||

ಸಂತಸಬಟ್ಟಾಕೆ ತಕ್ಕೈಸಿಕೊಂಡೆನ್ನ
ಕಂತು ನೀನಂತೆ ಮಾಡೆಂದು
ಚಿಂತೆ ಹೋಯ್ತೆಂದು ಪರಸಿ ಕಳುಹಿದಳೆಲ್ಲ
ರಂತರಂಗವ ಕಾಂಬರಾರು || ೯ ||

ಪಡೆದಳಿಗೆರಗಿ ಬೀಳ್ಕೊಂಡು ತನ್ನರಮನೆ
ಗೊಡನೆ ಹೊಕ್ಕನು ಪುಷ್ಪಬಾಣ
ಬೆಡಗಾಗಿ ಸಿಂಗರಿಸಿದನು ತನ್ನಂಗಕೆ
ಕಡೆಯ ಶೃಂಗಾರವದಲ್ತೆ || ೧೦ ||

ಖೋಡಿಯಿಲ್ಲದ ಮೋಹನಾಂಗವದಕೆ ತಕ್ಕ
ಗಾಡಿ ಮೋಡಿಯೊಳು ಸಿಂಗರಿಸಿ
ನೋಡಿವರೆಲ್ಲರ ಕಣ್ಮನಗಳ ನಲಿ
ದಾಡಿಸುತ್ತಿದ್ದನಾ ಸೊಬಗ || ೧೧ ||

## ಕವಿ ಪರಿಚಯ



'ಹದಿನಾರನೇ ಶತಮಾನದ ಕೋಗಿಲೆ' ಎಂದು ಪ್ರಸಿದ್ಧನಾದ ರತ್ನಾಕರವರ್ಣಿಯ ಹುಟ್ಟೂರು ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದಿರೆ. ಜೈನ ಪರಂಪರೆಯ ಕವಿಯಾದ ಇವನು ಅಪರಾಜಿತೇಶ್ವರಶತಕ, ತ್ರಿಲೋಕಶತಕ ಎಂಬ ಕೃತಿಗಳನ್ನು ರಚಿಸಿರುವನು. ಸಾಂಗತ್ಯ ಛಂದಸ್ಸಿನಲ್ಲಿರುವ 'ಭರತೇಶ ವೈಭವ'ವು ಈತನ ಪ್ರಸಿದ್ಧ ಕೃತಿಯಾಗಿದೆ. ಈ ಭಾಗವನ್ನು ಭರತೇಶ ವೈಭವದ 'ಮದನ ಸನ್ನಾಹ ಸಂಧಿ'ಯಿಂದ ಆಯ್ದುಕೊಳ್ಳಲಾಗಿದೆ.

## ಉತ್ತರಿಸಿರಿ

ಕೆಳಗೆ ನೀಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಸುನಂದಾದೇವಿ ಮಗನನ್ನು ಯಾಕೆ ಕರೆಸಿಕೊಂಡಳು?
2. ಸುಜನರು ಯಾವುದನ್ನು ಮೆಚ್ಚುವುದಿಲ್ಲ?
3. ಸುನಂದಾದೇವಿ ಮಗನಿಗೆ ಮಾಡಿದ ಉಪದೇಶವೇನು?
4. ಅಮ್ಮನ ಮಾತಿಗೆ ಬಾಹುಬಲಿಯು ಏನೆಂದು ಉತ್ತರಿಸಿದನು?
5. ಅರಮನೆಗೆ ಮರಳಿ ಬಂದ ಬಾಹುಬಲಿ ಏನು ಮಾಡಿದನು?

## ಪದ ವಿಂಗಡಿಸಿರಿ

ಕೆಳಗೆ ಕೊಟ್ಟ ಪದ ವಿಂಗಡಣೆಗಳನ್ನು ಗಮನಿಸಿರಿ.

ಕೇಳುತಿಷ್ಟಳುಕುತ - ಕೇಳುತ + ಇಷ್ಟು + ಅಳುಕುತ

ಮುಂಕೊಂಡನೇನೆಂಬೆ - ಮುಂಕೊಂಡನು + ಏನು + ಎಂಬೆ

ಪ್ರಾಪ್ತರನಟ್ಟಿ - ಪ್ರಾಪ್ತರನು + ಅಟ್ಟಿ

ನಗೆಮೊಗದಿಂದೆರಗಿದನು - ನಗೆಮೊಗದಿಂದ + ಎರಗಿದನು

ಬಲ್ಲಿತುದೋರದಿರಣ್ಣನಿಗೆರಗೆಂದು - ಬಲ್ಲಿತು + ತೋರದೆ + ಇರು + ಅಣ್ಣನಿಗೆ + ಎರಗು + ಎಂದು

ಮಾತಿನೊಳಿರಿಸಿಕೊಂಡೆದೆಯೊಳು - ಮಾತಿನೊಳು + ಇರಿಸಿಕೊಂಡು + ಎದೆಯೊಳು

ಕಳುಹಿದಳೆಲ್ಲರಂತರಂಗವ - ಕಳುಹಿದಳು + ಎಲ್ಲರ + ಅಂತರಂಗವ

- ಕೆಳಗೆ ಕೊಡಲಾದ ಪದಗಳನ್ನು ವಿಂಗಡಿಸಿ ಬರೆಯಿರಿ.

ಕಾಣಿಸದಂಗಜ -

ಸುಜನರಾರಿದ -

ಬೆಣ್ಣೆವಾಲೂಡಿ -

ನಮ್ಮೆಲ್ಲರರ್ತಿಯ -

ಪಿಡಿದಲುಗಿದಳು -

ಮೆಲ್ಲಡಿಗೆರಗುವೆನೆಂದ -

ಕಾಂಬರಾರು -

ಪಡೆದಳಿಗೆರಗಿ -

## ಹಾಡಿರಿ

'ಅಂತರಂಗವ ಕಾಂಬರಾರು' ಕಾವ್ಯಭಾಗವನ್ನು ರಾಗವಾಗಿ ಹಾಡಿರಿ.

## ಆದಿ ಪ್ರಾಸವನ್ನು ಗುರುತಿಸಿರಿ

ಅಡಿಗೆರೆ ಎಳೆದ ಅಕ್ಷರಗಳನ್ನು ಗಮನಿಸಿರಿ.

ಕಟ್ಟಕದ ವಾರ್ತೆಯ ಕೇಳುತಿಷ್ಟಳುಕುತ
ಪಟ್ಟುವಾಗಿ ಮೊದಲು ತಾ ನುಡಿದ
ಘಟ್ಟಿತ ಗರ್ವವ ನೆನೆದಾ ಕಾಮ ಕೂಡೆ ಹೋ
ರಟ್ಟೆಗೆ ಮುಂಕೊಂಡನೇನೆಂಬೆ

ಪದ್ಯದ ಪ್ರತಿ ಪಾದದ ಆದಿಯ ಒಂದು ಮತ್ತು ಎರಡನೆಯ ಸ್ವರಗಳ ನಡುವೆ ಒಂದೇ ವಿಧವಾದ ವ್ಯಂಜನ ಬಂದರೆ ಅದನ್ನು "ಆದಿ ಪ್ರಾಸ" ಎನ್ನುತ್ತೇವೆ.

ಈ ರೀತಿ ಆದಿಪ್ರಾಸವಿರುವ ಪದಗಳನ್ನು ಕಾವ್ಯಭಾಗದಿಂದ ಗುರುತಿಸಿ ಬರೆಯಿರಿ.

## ಸ್ವಾರಸ್ಯ ಬರೆಯಿರಿ

ಕೆಳಗಿನ ಸಾಲುಗಳ ಸ್ವಾರಸ್ಯವನ್ನು ಬರೆಯಿರಿ.

ಅಣ್ಣನ ಕೂಡೆ ಕಾಳಗವ ಮಾಡೆಂದಾನು
ಬೆಣ್ಣೆವಾಲೂಡಿ ಸಾಕಿದೆನೆ
ತಣ್ಣನೆ ಮಾಡಬೇಕೆಮ್ಮೆಲ್ಲರುದರಕೆ
ಹುಣ್ಣು ಮಾಳ್ಪುದು ಲೇಸೆ ಮಗನೆ

## ಆಶಯ ಬರೆಯಿರಿ

'ಅಂತರಂಗವ ಕಾಂಬರಾರು' ಕಾವ್ಯಭಾಗದ ಆಶಯವನ್ನು ಬರೆಯಿರಿ.

## ಪಾತ್ರಚಿತ್ರಣ ಮಾಡಿರಿ

ಈ ಕಾವ್ಯಭಾಗದಲ್ಲಿ ಬಂದಿರುವ ಸುನಂದಾದೇವಿಯ ಪಾತ್ರಚಿತ್ರಣ ಮಾಡಿರಿ.

## ಸಂದೇಶ ಬರೆಯಿರಿ

'ಅಂತರಂಗವ ಕಾಂಬರಾರು' ಕಾವ್ಯಭಾಗವು ನೀಡುವ ಸಂದೇಶವನ್ನು ಬರೆಯಿರಿ.

## ಘೋಷಣ ವಾಕ್ಯ ರಚಿಸಿರಿ

ಯುದ್ಧದ ಕಾವು
ಮನುಕುಲದ ಸಾವು

ಇದು ಯುದ್ಧ ವಿರುದ್ಧ ಜನಜಾಗೃತಿ ಮೂಡಿಸುವ ಘೋಷಣ ವಾಕ್ಯವಾಗಿದೆ. ಈ ರೀತಿಯ ಎರಡು ಘೋಷಣ ವಾಕ್ಯಗಳನ್ನು ರಚಿಸಿರಿ.

## ಸಮಾಸ ಗುರುತಿಸಿರಿ

ಕೆಳಗಿನ ಪದಗಳನ್ನು ಗಮನಿಸಿರಿ.

ಶಿರಬಾಗು, ಕೈಯೆತ್ತು

- ಈ ಪದಗಳನ್ನು ಕೆಳಗಿನಂತೆ ಬಿಡಿಸಿ ಬರೆಯಬಹುದು.

ಶಿರವನ್ನು ಬಾಗು, ಕೈಯನ್ನು ಎತ್ತು - ಈ ರೀತಿ ಬಿಡಿಸಿ ಬರೆಯುವುದನ್ನು ವಿಗ್ರಹ ವಾಕ್ಯ ಎನ್ನುವರು. ಇಲ್ಲಿ ಪೂರ್ವಪದವು ನಾಮಪದವಾಗಿದ್ದು ಉತ್ತರ ಪದವು ಕ್ರಿಯಾಪದವಾಗಿದೆ. ಈ ರೀತಿಯಲ್ಲಿ ಪದಗಳು ಸೇರುವುದನ್ನು 'ಕ್ರಿಯಾ ಸಮಾಸ' ಎನ್ನುವರು. ಕ್ರಿಯಾ ಸಮಾಸವಾಗುವ ಇಂತಹ ಪದಗಳನ್ನು ಸಂಗ್ರಹಿಸಿ ಬರೆಯಿರಿ.

## ಅಂಶಗಣವನ್ನು ತಿಳಿಯಿರಿ

ಅಂಶಗಳನ್ನು ಪರಿಗಣಿಸಿ ರೂಪಿಸುವ ಗಣಗಳನ್ನು ಅಂಶಗಣ ಎನ್ನುತ್ತಾರೆ.

ಅಂಶಗಣದಲ್ಲಿ ಮೂರು ಪ್ರಕಾರಗಳಿವೆ.

- ಎರಡು ಅಂಶವಿರುವ ಗಣ - ಬ್ರಹ್ಮಗಣ
- ಮೂರು ಅಂಶವಿರುವ ಗಣ – ವಿಷ್ಣುಗಣ
- ನಾಲ್ಕು ಅಂಶವಿರುವ ಗಣ – ರುದ್ರಗಣ

ಪ್ರತಿ ಗಣದ ಆರಂಭದ ಅಂಶದಲ್ಲಿ ಗುರುವಾದರೆ ಒಂದು, ಲಘುವಾದರೆ ಎರಡು ಅಕ್ಷರಗಳಿರುತ್ತವೆ. ಮುಂದಿನ ಅಂಶಗಳಲ್ಲಿ ಲಘು ಅಥವಾ ಗುರು ಒಂದೊಂದೇ ಬರುತ್ತದೆ.

| | | | |
|---|---|---|---|
| ವಿ | ವಿ | ವಿ | ವಿ |
| - U U | - U - | U U U - | - - U |
| ಅಣ್ಣನ | ಕೂಡೆ ಕಾ | ಳಗವ ಮಾ | ಡೆಂದಾನು |
| ವಿ | ವಿ | ಬ್ರ | |
| - U - | - U - | UUU | |
| ಬೆಣ್ಣೆವಾ | ಲೂಡಿ ಸಾ | ಕಿದೆನೆ | |
| ವಿ | ವಿ | ವಿ | ವಿ |
| - UU | - U - | - - U | UUUU |
| ತಣ್ಣನೆ | ಮಾಡಬೇ | ಕೆಮ್ಮೆಲ್ಲ | ರುದರಕೆ |
| ವಿ | ವಿ | ಬ್ರ | |
| - U - | U U - U | UUU | |
| ಹುಣ್ಣು ಮಾ | ಳ್ಪುದು ಲೇಸೆ | ಮಗನೆ | |

ಮೇಲಿನ ಕಾವ್ಯಭಾಗವು ಅಂಶಗಣ ಪ್ರಧಾನವಾದ ಸಾಂಗತ್ಯ ಛಂದಸ್ಸಿನಲ್ಲಿದೆ. ಇದರಲ್ಲಿ ನಾಲ್ಕು ಸಾಲುಗಳಿರುತ್ತವೆ. ಆರಂಭದ ಎರಡು ಸಾಲುಗಳಿಗೆ ಅನಂತರದ ಎರಡು ಸಾಲುಗಳು ಸಮಾನವಾಗಿರುತ್ತವೆ. ಒಂದನೇ ಮತ್ತು ಮೂರನೇ ಸಾಲುಗಳಲ್ಲಿ ನಾಲ್ಕು ನಾಲ್ಕು ವಿಷ್ಣುಗಣಗಳೂ ಎರಡು ಮತ್ತು ನಾಲ್ಕನೇ ಸಾಲುಗಳಲ್ಲಿ ಎರಡೆರಡು ವಿಷ್ಣುಗಣಗಳೂ ಕೊನೆಯಲ್ಲಿ ಒಂದು ಬ್ರಹ್ಮಗಣವೂ ಬರುತ್ತವೆ.

ಒಂದು ಮತ್ತು ಮೂರನೇ ಸಾಲುಗಳಲ್ಲಿ - ವಿ | ವಿ | ವಿ | ವಿ

ಎರಡು ಮತ್ತು ನಾಲ್ಕನೇ ಸಾಲುಗಳಲ್ಲಿ - ವಿ | ವಿ | ಬ್ರ

- ಎಂಬ ರೀತಿಯ ಗಣಗಳ ವಿನ್ಯಾಸವಿರುತ್ತದೆ.

'ಅಂತರಂಗವ ಕಾಂಬರಾರು' ಕಾವ್ಯ ಭಾಗದಲ್ಲಿ ಬಂದಿರುವ ಕೆಳಗಿನ ಪದ್ಯಕ್ಕೆ ಪ್ರಸ್ತಾರ ಹಾಕಿ ಗಣವಿಭಾಗ ಮಾಡಿರಿ.

ಪಡೆದಳಿಗೆರಗಿ ಬೀಳ್ಕೊಂಡು ತನ್ನರಮನೆ
ಗೊಡನೆ ಹೊಕ್ಕನು ಪುಷ್ಪಬಾಣ
ಬೆಡಗಾಗಿ ಸಿಂಗರಿಸಿದನು ತನ್ನಂಗಕೆ
ಕಡೆಯ ಶೃಂಗಾರವದಲ್ತೆ

# ದಾರಿ ಯಾವುದಯ್ಯಾ?

- ಎಚ್. ಡುಂಡಿರಾಜ್

ಪ್ರತಿಯೊಬ್ಬರೂ ಒಂದಲ್ಲ ಒಂದು ಸಂದರ್ಭದಲ್ಲಿ ದಾರಿ ಗೊತ್ತಿಲ್ಲದೆ ಅಥವಾ ಗೊತ್ತಿದ್ದ ದಾರಿಯನ್ನು ಮರೆತು ಸಿಕ್ಕ ಸಿಕ್ಕವರ ಹತ್ತಿರ ದಾರಿ ಕೇಳುತ್ತಾ ಅಲೆದಾಡಿರುತ್ತಾರೆ. ಒಂದು ವೇಳೆ ನೀವು ಇನ್ನೊಬ್ಬರ ಹತ್ತಿರ ದಾರಿ ಕೇಳದೆ ಇರಬಹುದು. ಆದರೆ, ಇನ್ನೊಬ್ಬರು ನಿಮ್ಮ ಹತ್ತಿರ ದಾರಿ ಕೇಳಿರುತ್ತಾರೆ. ಹೀಗಾಗಿ ದಾರಿ ಕೇಳುವುದು ಎಲ್ಲರ ಅನುಭವಕ್ಕೂ ಬಂದಿರುವ ಸಂಗತಿ ಅಂದರೆ ತಪ್ಪಾಗಲಾರದು.

ಮನೆಯೊಳಗೆ ವಿಪರೀತ ಕಾಟ ಕೊಡುತ್ತಿದ್ದ ಬೆಕ್ಕನ್ನು ದೂರದ ಕಾಡಿನೊಳಗೆ ಬಿಟ್ಟು ಬರುತ್ತೇನೆಂದು ಹೊರಟವನ ಕತೆ ನೀವು ಕೇಳಿರಬಹುದು. ಬೆಕ್ಕನ್ನು ದಟ್ಟ ಕಾಡಿನಲ್ಲಿ ಬಿಟ್ಟು ಮನೆಗೆ ವಾಪಸು ಬರುವಾಗ ಆತನಿಗೆ ದಾರಿ ತಪ್ಪಿ ಹೋಗುತ್ತದೆ. ಯಾರ ಹತ್ತಿರವಾದರೂ ದಾರಿ ಕೇಳೋಣವೆಂದರೆ ಆ ನಿರ್ಜನ ಪ್ರದೇಶದಲ್ಲಿ ಯಾರು ಸಿಗುತ್ತಾರೆ? ತಲೆಯ ಮೇಲೆ ಕೈಹೊತ್ತು ಕುಳಿತ ಆತನನ್ನು ಅವನು ಕಾಡಿನಲ್ಲಿ ಬಿಟ್ಟು ಬಂದ ಬೆಕ್ಕು 'ಮಿಯಾಂ' ಎಂದು ಕರೆಯುತ್ತದೆ. ಆತ ಅದರ ಹಿಂದೆಯೇ ನಡೆದು ಮನೆ ಸೇರಿಕೊಳ್ಳುತ್ತಾನೆ.

ಮೇಲಿನ ಕತೆಯಿಂದ ತಿಳಿದುಬರುವ ಸಂಗತಿ ಏನೆಂದರೆ ದಾರಿ ತಪ್ಪುವುದು ಮಾನವನ ವಿಶಿಷ್ಟ ಗುಣಗಳಲ್ಲಿ ಒಂದು. ಪ್ರಾಣಿಗಳು ನಮ್ಮ ಹಾಗೆ ದಾರಿ ತಪ್ಪಿಸಿಕೊಂಡು ಅಲೆದಾಡುವುದಿಲ್ಲ. ಎಲ್ಲೆಲ್ಲೋ ಮೇಯಲು ಹೋಗುವ ದನಗಳು ಸಂಜೆಯಾಗುತ್ತಲೆ ಕೊಟ್ಟಿಗೆಗೆ ಮರಳುತ್ತವೆ. ಸಾವಿರಾರು ಮೈಲಿ ಕ್ರಮಿಸಿ ಪ್ರತಿ ವರ್ಷ ಮೊಟ್ಟೆ ಇಡಲು ರಂಗನತಿಟ್ಟಿಗೆ ಬರುವ ಪಕ್ಷಿಗಳು ದಾರಿಯನ್ನು ಮರೆಯುವುದಿಲ್ಲ. ಪ್ರಾಣಿ-ಪಕ್ಷಿಗಳಷ್ಟೇ ಅಲ್ಲ ಕ್ರಿಮಿಕೀಟಗಳೂ ದಾರಿಯ ವಿಚಾರದಲ್ಲಿ ನಮಗಿಂತ ವಾಸಿ. ಈ ಬಗ್ಗೆ ಒಂದು ಹೈಕು.

ಎಲ್ಲಿದ್ದರೂ ಸಿಹಿ
ಪತ್ತೆ ಹಚ್ಚುವ ಇರುವೆ
ಗುರುವೆ

ಒಮ್ಮೆ ಕ್ರಮಿಸಿದ ದಾರಿಯನ್ನು ನೆನಪಿಟ್ಟು ಕೊಳ್ಳುವ ಶಕ್ತಿಯನ್ನು ನಿಸರ್ಗವು ಪ್ರಾಣಿ, ಪಕ್ಷಿ, ಕ್ರಿಮಿಕೀಟಗಳಿಗೆ ಕೊಟ್ಟಿದೆ. ಕೊಡಲೇಬೇಕು. ಏಕೆಂದರೆ, ನಮ್ಮ ಹಾಗೆ ಇನ್ನೊಬ್ಬರ ಹತ್ತಿರ ದಾರಿ ಕೇಳುವುದಕ್ಕೆ ಅವುಗಳಿಗೆ ಮಾತು ಬರುತ್ತದೆಯೆ?

ದಾರಿ ತಪ್ಪಿಹೋದಾಗ ಇನ್ನೊಬ್ಬರ ಹತ್ತಿರ ಕೇಳುವುದನ್ನು ಬಿಟ್ಟರೆ ನಮಗೆ ಬೇರೆ ದಾರಿಯೇ ಇಲ್ಲ. ನೀವು ಕೇಳಿದ ವ್ಯಕ್ತಿಗಳೆಲ್ಲ ನಿಮಗೆ ಸರಿಯಾಗಿ ಮಾರ್ಗದರ್ಶನ ಮಾಡುತ್ತಾರೆ ಅನ್ನುವಂತಿಲ್ಲ. 'ಗೊತ್ತಿಲ್ಲ', 'ನಾನು ಹೊಸಬ' ಮುಂತಾದ ಋಣಾತ್ಮಕವಾದ ಉತ್ತರಗಳು ಸಿಗುವುದು ಸಾಮಾನ್ಯ. ಅವುಗಳಿಂದ ನಿರಾಶರಾಗದೆ 'ಮರಳಿ ಯತ್ನವ ಮಾಡು' ಎಂಬ ಮಂತ್ರವನ್ನು ಪಠಿಸುತ್ತಾ ವಿಚಾರಣೆಯನ್ನು ಮುಂದುವರಿಸಬೇಕು. ಯಾರ ಹತ್ತಿರ ದಾರಿ ಕೇಳಿದರೆ ಸರಿಯಾದ ಮಾಹಿತಿ

ಸಿಗಬಹುದು ಅಂತ ಊಹಿಸುವುದು ಒಂದು ಕಲೆ. ಅಷ್ಟೇನೂ ವಿದ್ಯಾವಂತರಲ್ಲದವರ ಹತ್ತಿರ ದಾರಿ ಕೇಳುವಾಗ ಹುಷಾರಾಗಿರಬೇಕು. ಅವರು ಇಂಗ್ಲಿಷ್ ಸರಿಯಾಗಿ ಬಾರದಿದ್ದರೂ ನಮ್ಮನ್ನು ಇಂಪ್ರೆಸ್ ಮಾಡಲು ರೈಟಿಗೆ ತಿರುಗಿ, ಲೆಫ್ಟಿಗೆ ತಿರುಗಿ ಅನ್ನುತ್ತಾರೆ. ಆದರೆ ಹಾಗೆ ಹೇಳುವಾಗ ಅವರ ಕೈ ಮಾತ್ರ ವಿರುದ್ಧ ದಿಕ್ಕನ್ನು ತೋರಿಸುತ್ತದೆ!

ಸಿಗಲಾರದು. ದಾರಿ ಕೇಳಲು ಗೂಡಂಗಡಿಯೇ ಉತ್ತಮ. ಮಾರ್ಗದರ್ಶನ ಮಾಡುವುದರಲ್ಲಿ ಮಂಗಳೂರಿನವರಿಗಿಂತ ಘಟ್ಟದ ಮೇಲಿನವರೆ ವಾಸಿ ಎಂಬುದು ನನ್ನ ಸ್ನೇಹಿತರೊಬ್ಬರ ಅನಿಸಿಕೆ. ಏನೂ ವ್ಯಾಪಾರ ಮಾಡದೆ ಧರ್ಮಕ್ಕೆ ದಾರಿ ಕೇಳಿದರೆ ಮಂಗಳೂರಿನ ವ್ಯಾಪಾರಿಗಳಿಗೆ ಕೋಪ ಬರುತ್ತದಂತೆ. ನನ್ನ ಅನುಭವದ ಪ್ರಕಾರ ಮುಂಬೈನವರು ದಾರಿ



ದಾರಿಹೋಕರನ್ನು ತಡೆದು ನಿಲ್ಲಿಸಿ ದಾರಿ ಕೇಳುವುದಕ್ಕಿಂತ ಅಂಗಡಿಗಳಲ್ಲಿ ವಿಚಾರಿಸುವುದು ಒಳ್ಳೆಯದು. ಆದರೆ ವಿಪರೀತ ರಶ್ ಇರುವ ದೊಡ್ಡ ದೊಡ್ಡ ಅಂಗಡಿಗಳಲ್ಲಿ ದಾರಿ ಕೇಳಿದರೆ ಹೆಚ್ಚು ಮಾಹಿತಿ ಸಿಗುವುದು ಕಷ್ಟ. ಸೂಪರ್ ಮಾರ್ಕೆಟ್ ನಲ್ಲಿ ಎಲ್ಲವೂ ಸಿಗಬಹುದಾದರೂ ನಿಮಗೆ ಬೇಕಾದ ವಿಳಾಸ

ತೋರಿಸುವುದರಲ್ಲಿ ಅತ್ಯಂತ ಉ-ದಾರಿಗಳು! ಯಾವ ಭಾಷೆಯಲ್ಲಿ ಕೇಳಿದರೂ ಅದೆಷ್ಟೆ ಗಡಿಬಿಡಿಯಲ್ಲಿದ್ದರೂ ನಗುನಗುತ್ತ ದಾರಿ ತೋರಿಸುತ್ತಾರೆ.

ಈಚೆಗೆ ನಾನು ಯಲಹಂಕದಲ್ಲಿ ಒಬ್ಬ ವ್ಯಕ್ತಿಯ ಹತ್ತಿರ ದಾರಿ ಕೇಳಿದೆ. ಆತ - 'ಹೀಗೆ ನೇರವಾಗಿ ಹೋಗಿ ನಂತರ ಎಡಕ್ಕೆ ತಿರುಗಿ, ಆಮೇಲೆ ಬಲಕ್ಕೆ

ತಿರುಗಿ ಮುಂದೆ ಹೋಗಿ ಪುನಃ ಎಡಕ್ಕೆ ತಿರುಗಿ ಕಾರ್ನರಿನಲ್ಲಿ ಬಲಕ್ಕೆ ತಿರುಗಿ.....' ಎಂದು ಒಂದೇ ಸಮನೆ ಮಾರ್ಗದರ್ಶನ ಮಾಡತೊಡಗಿದ. ಮಾತಿನ ನಡುವೆ - 'ಮುಂದೆ ಹೋಗಿ ಪುನಃ ಹಿಂದೆ ಬನ್ನಿ' ಅಂದಾಗ ನನಗೆ ಅನುಮಾನವಾಯಿತು. ಸೂಕ್ಷ್ಮವಾಗಿ ಅವಲೋಕಿಸಿದಾಗ ಆತ ಗುಂಡಿನ ಗಮ್ಮತ್ತಿನಲ್ಲಿದ್ದ ಎಂದು ಗೊತ್ತಾಯಿತು. ಅವನು ಹೇಳಿದಂತೆ ಎಡಕ್ಕೆ, ಬಲಕ್ಕೆ, ಹಿಂದಕ್ಕೆ, ಮುಂದಕ್ಕೆ ತಿರುಗುತ್ತಾ ಹೋಗಿದ್ದರೆ ತಲೆ ತಿರುಗಿ ಅವನ ಜೊತೆ ನಾನೂ ಚರಂಡಿಗೆ ಬೀಳುವ ಸಂಭವವಿತ್ತು.

ಕವಿರಾಜಮಾರ್ಗವನ್ನು ಬೇಕಾದರೆ ನೆನಪಿಟ್ಟು ಕೊಳ್ಳಬಲ್ಲೆ. ಆದರೆ ನಗರದ ಮಾರ್ಗಗಳನ್ನು ನೆನಪಿಟ್ಟುಕೊಳ್ಳುವುದು ನನ್ನಿಂದ ಸಾಧ್ಯವಾಗದ ಸಂಗತಿ. ಹೀಗಾಗಿ ದಾರಿ ಕೇಳುವ ಪ್ರಸಂಗ ನನಗೆ ಹೆಜ್ಜೆ ಹೆಜ್ಜೆಗೂ ಎದುರಾಗುತ್ತದೆ. ಇನ್ನೊಬ್ಬರ ಹತ್ತಿರ ದಾರಿ ಕೇಳುವಾಗ ನಾವು ನಮಗೆ ಗೊತ್ತಿಲ್ಲದಂತೆ ಅತ್ಯಂತ ದೀನರಾಗಿರುತ್ತೇವೆ. ದಾರಿ ತೋರಿಸುವವರು ಸರ್ವಜ್ಞನಂತೆ ವರ್ತಿಸುತ್ತಾರೆ. ಸರಿಯಾದ ವಿಳಾಸವಿಲ್ಲದೆ ದಾರಿ ಕೇಳಿದ್ದಕ್ಕೆ ಒಮ್ಮೆ ಮುದುಕರೊಬ್ಬರು ನನಗೆ ಚೆನ್ನಾಗಿ ಬೈದು ಬುದ್ಧಿ ಹೇಳಿದ್ದರು. ಮೊದಮೊದಲು ನಾನು ದಾರಿ ಕೇಳಲು ತುಂಬಾ ಸಂಕೋಚಪಟ್ಟುಕೊಳ್ಳುತ್ತಿದ್ದೆ. ನಾನೇ ದಾರಿ ಹುಡುಕಲು ಹೋಗಿ, ತಿರುಗಿ, ತಿರುಗಿ ಸುಸ್ತಾಗಿ, ಕೊನೆಗೆ ಯಾವುದಾದರೂ ಅಂಗಡಿಯಲ್ಲಿ ಬೇಡದಿದ್ದರೂ ಏನಾದರೂ ಖರೀದಿಸಿ ಆಮೇಲೆ ದಾರಿ ಕೇಳುತ್ತಿದ್ದೆ. ಹಲವು ಊರುಗಳಲ್ಲಿ ಹಲವು ಬಾರಿ ದಾರಿತಪ್ಪಿ ಅಲೆದಾಡಿದ ಬಳಿಕ ಈಗ ನಿರ್ದಾಕ್ಷಿಣ್ಯವಾಗಿ ದಾರಿ ಕೇಳುವುದನ್ನು ಕಲಿತಿದ್ದೇನೆ.

ತಮಾಷೆಯೆಂದರೆ ಆಗಾಗ ದಾರಿ ತಪ್ಪುವ ನನ್ನ ಹತ್ತಿರವೂ ಕೆಲವರು ದಾರಿ ಕೇಳುತ್ತಾರೆ. ಆಗ ನನಗೆ ತುಂಬಾ ಸಂತೋಷವಾಗುತ್ತದೆ. ನನ್ನ ಹತ್ತಿರ ದಾರಿ ಕೇಳಿದ ಮಹನೀಯರೊಬ್ಬರಿಗೆ ನಾನೊಮ್ಮೆ ಕಾವ್ಯಾತ್ಮಕವಾಗಿ ಹೀಗೆ ಮಾರ್ಗದರ್ಶನ ಮಾಡಿದ್ದೆ.

ಇದೇ ರಸ್ತೆಯಲ್ಲಿ ಸೀದಾ ಹೋಗಿ
ಮೊದಲ ತಿರುವಿನಲ್ಲಿ ಎಡಕ್ಕೆ ತಿರುಗಿ
ಹಾಗೇ ಮುಂದೆ ಸಾಗಿದರೆ
ವಿದ್ಯುತ್ ಕಂಬದ ಬಳಿ ಭಾರೀ
ಹೊಂಡಕ್ಕೆ ಬೀಳುತ್ತೀರಿ.
ಎದ್ದರೆ ಕಾಣಿಸುವುದೇ
ತಾಲೂಕು ಕಚೇರಿ!

ದಾರಿ ಕೇಳುವವರಿಗೆಲ್ಲ ದಾರಿ ಗೊತ್ತಿರುವುದಿಲ್ಲ ಅಂದುಕೊಳ್ಳಬೇಡಿ. ಕೆಲವರು ಗೊತ್ತಿದ್ದರೂ ಖಾತ್ರಿ ಮಾಡಿಕೊಳ್ಳುವುದಕ್ಕೆ ಸೆಕೆಂಡ್ ಒಪೀನಿಯನ್ ಕೇಳುತ್ತಾರೆ. ಹಳ್ಳಿಗಳಿಗೆ ಹೋಲಿಸಿದರೆ ನಗರಗಳಲ್ಲಿ ದಾರಿ ತಪ್ಪುವವರ ಹಾವಳಿ ಹೆಚ್ಚು. ಹಳ್ಳಿಗಳಲ್ಲಿ ಯಾರಾದರೂ ವಿಳಾಸ ಕೇಳುತ್ತಾ ಅಲೆದಾಡುತ್ತಿದ್ದರೆ ಅವರು ಸಾಲ ವಸೂಲಿಗೆ ಬಂದ ಬ್ಯಾಂಕಿನವರು ಎಂದು ತಿಳಿಯಬಹುದು. ಸದಾ ಯಾವುದೋ ಗುಂಗಿನಲ್ಲಿ ತಮ್ಮದೇ ಲೋಕದಲ್ಲಿ ವಿಹರಿಸುವ ಸಾಹಿತಿಗಳು ದಾರಿ ತಪ್ಪುವುದು ಜಾಸ್ತಿ. ಎರಡು ತಿಂಗಳ ಹಿಂದೆ ಸಾಹಿತಿ ಮಿತ್ರರೊಬ್ಬರು ಬೆಳಗಾವಿಗೆ ಬಂದು ಫೋನ್ ಮಾಡಿದರು. ನಾನು ಬಸ್ ನಿಲ್ದಾಣಕ್ಕೆ ಹೋಗಿ ಅವರನ್ನು ಮನೆಗೆ ಕರೆದುಕೊಂಡು ಬಂದೆ.

ರಾತ್ರಿ ನಮ್ಮ ಮನೆಯಲ್ಲಿ ಉಳಿದುಕೊಂಡರು. ಬೆಳಗ್ಗೆ ಬೇಗ ಎದ್ದು ಒಬ್ಬರೇ ವಾಕಿಂಗ್‌ಗೆ ಹೋದರು. ೧೦ ನಿಮಿಷದಲ್ಲಿ ಬರುತ್ತೇನೆ ಅಂದವರು ೨೦ ನಿಮಿಷಗಳಾದರೂ ಬರಲಿಲ್ಲ. ಸ್ವಲ್ಪ ಹೊತ್ತಿನ ನಂತರ ಮೇಜಿನ ಮೇಲಿದ್ದ ಅವರ ಮೊಬೈಲ್ ರಿಂಗಾಯಿತು. ಅವರ ಖಾಸಗಿ ಫೋನನ್ನು ನಾನೇಕೆ ತೆಗೆದುಕೊಳ್ಳಲಿ? ಅಂತ ಮೊದಲು ಸುಮ್ಮನಿದ್ದೆನಾದರೂ ನಂತರ ರಿಸೀವ್ ಮಾಡಿ- 'ಅವರು ಹೊರಗಡೆ ಹೋಗಿದ್ದಾರೆ' ಅಂದೆ. ಆ ಕಡೆಯಿಂದ ಪರಿಚಿತ ಧ್ವನಿ - 'ನಾನೇ ಮಾತನಾಡೋದು. ವಾಕಿಂಗ್ ಮಾಡ್ತಾ ಮಾಡ್ತಾ ನಿಮ್ಮ ಮನೆ ದಾರಿ ತಪ್ಪಿಸಿಕೊಂಡೆ. ಸ್ವಲ್ಪ ವಿಳಾಸ ಹೇಳ್ತೀರಾ?' ಅಂದಾಗ ಅವರ ಅವಸ್ಥೆ ನೋಡಿ ನಗು ಬಂತು.

ಅವರ ಹತ್ತಿರ ನನ್ನ ವಿಳಾಸ, ಫೋನ್ ನಂಬರ್ ಇರಲಿಲ್ಲ. ನಾನು ಆ ಪ್ರದೇಶಕ್ಕೆ ಹೊಸಬನಾದ್ದರಿಂದ ಹೆಸರು ಹೇಳಿದಾಗ ಯಾರಿಗೂ ಗೊತ್ತಾಗಲಿಲ್ಲ. ಪುಣ್ಯಕ್ಕೆ ಅವರು ತಮ್ಮ ಮೊಬೈಲನ್ನು ನನ್ನ ಮನೆಯಲ್ಲೇ ಬಿಟ್ಟುಹೋಗಿದ್ದರು. ಯಾವುದೊ ಅಂಗಡಿಯಲ್ಲಿ ೧ ರೂ. ಸಾಲ ಮಾಡಿ (ಅವರ ಹತ್ತಿರ ಪರ್ಸ್ ಕೂಡ ಇರಲಿಲ್ಲ.) ತಮ್ಮ ಮೊಬೈಲಿಗೆ ಫೋನ್ ಮಾಡಿದರು. ಮನೆಗೆ ಮರಳಿದ ಅವರು 'ಬೆಳಗಾವಿಗೆ ಬಂದು ಒಂದು ರೂಪಾಯಿ ಭಿಕ್ಷೆ ಬೇಡುವ ಗತಿ ಬಂತಲ್ರೀ' ಅಂತ ಪೇಚಾಡಿಕೊಂಡರು. ಮೊಬೈಲ್ ಬಂದದ್ದರಿಂದ ದಾರಿ ಹುಡುಕುವುದು ಸುಲಭವಾಗಿದೆ. ಇನ್ನೊಬ್ಬರ ಹತ್ತಿರ ವಿಚಾರಿಸುವ ಬದಲು ಫೋನ್ ನಂಬರ್ ಗೊತ್ತಿದ್ದರೆ ದಾರಿ ತಪ್ಪಿದ ತಕ್ಷಣ ನಮಗೆ ಬೇಕಾದ ವ್ಯಕ್ತಿಗೆ ಫೋನಿಸಿ ದಾರಿ ಕೇಳಬಹುದು. ಹುಡುಕುತ್ತಿದ್ದ ಬಳ್ಳಿ ಕಾಲಿಗೆ ಸಿಗದಿರಬಹುದು. ಆದರೆ ವ್ಯಕ್ತಿ, ಮೊಬೈಲ್ ಕಾಲಿಗೆ(ಕಾಲ್ ಗೆ) ಸಿಕ್ಕೆ ಸಿಗುತ್ತಾನೆ!

ದಾರಿ ತಪ್ಪುವುದು ತಪ್ಪಲ್ಲ. ಆ ಬಗ್ಗೆ ನಾಚಿಕೆ ಬೇಡ. ಕೊಲಂಬಸ್ ದಾರಿ ತಪ್ಪಿದ್ದರಿಂದಲೇ ಅಮೆರಿಕವನ್ನು ಕಂಡುಹಿಡಿಯಲು ಸಾಧ್ಯವಾಯಿತು. ದಾರಿ ಕೇಳುವುದೂ ಅಪರಾಧವಲ್ಲ. ದಾಸ ಶ್ರೇಷ್ಠರಾದ

> ದಾರಿ ಯಾವುದಯ್ಯಾ ವೈಕುಂಠಕೆ ಹಾದಿ ತೋರಿಸಯ್ಯಾ
> ದಾರಿ ಯಾವುದಯ್ಯಾ ದಾರಿ ತೋರಿಸಯ್ಯಾ
> ಆಧಾರ ಮೂರುತಿ ನಿನ್ನ ಪಾದ ಸೇರುವುದಕ್ಕೆ ||ಅನು.ಪ||
>
> ಬಲುಭವದನುಭವದಿ ಕತ್ತಲೆಯೊಳು ಬಲು ಅಂಜುತೆ ನಡುಗಿ ||
> ಬಳಲುತ ತಿರುಗಿದೆ ಹಾದಿಯ ಕಾಣದೆ
> ಹೊಳೆವಂಥ ದಾರಿಯ ತೋರೊ ನಾರಾಯಣ
>
> **- ಪುರಂದರದಾಸ**

ಪುರಂದರದಾಸರೇ 'ದಾರಿ ಯಾವುದಯ್ಯಾ ವೈಕುಂಠಕೆ' ಅಂತ ದಾರಿ ಕೇಳಿದ್ದಾರೆ.

ಎಲ್ಲದಕ್ಕೂ ಬಿಲ್ ಮಾಡುವ ಇಂದಿನ ಕಾಲದಲ್ಲಿ ದಾರಿ ಕೇಳಿದರೆ ಜನಸಾಮಾನ್ಯರು ಉಚಿತವಾಗಿ ಹೇಳುತ್ತಾರೆ. ಆದರೆ ಸಂತೃಪ್ತಿಯ ಜೀವನಕ್ಕೆ, ಸ್ವರ್ಗಕ್ಕೆ, ಮೋಕ್ಷಕ್ಕೆ ದಾರಿಯನ್ನು ನಾವೇ ಹುಡುಕಿಕೊಳ್ಳುವುದು ಒಳ್ಳೆಯದು.

## ಲೇಖಕರ ಪರಿಚಯ



ಕವಿ, ನಾಟಕಕಾರ, ಅಂಕಣಕಾರ ಹಾಗೂ ಉತ್ತಮ ವಾಗ್ಮಿಯಾಗಿರುವ ಎಚ್. ಡುಂಡಿರಾಜ್ ಅವರು ೧೯೫೬ ಆಗಸ್ಟ್ ೧೮ ರಂದು ಉಡುಪಿ ಜಿಲ್ಲೆಯ ಹಟ್ಟಿಕುದ್ರು ಎಂಬಲ್ಲಿ ಜನಿಸಿದರು. ಇವರ ತಂದೆ ವೆಂಕಟರಮಣ ಭಟ್, ತಾಯಿ ರಾಧಮ್ಮ. ಹನಿಗವನಗಳ ರಾಜ, ಚುಟುಕು ಚಕ್ರವರ್ತಿ ಎಂದೇ ಜನಪ್ರಿಯರಾಗಿರುವ ಇವರು ಪದ್ಯ ಹಾಗೂ ಗದ್ಯ ಎರಡರಲ್ಲೂ ಗಣನೀಯ ಸಾಧನೆ ಮಾಡಿದ ಕನ್ನಡದ ಪ್ರಮುಖ ಲೇಖಕರಲ್ಲೊಬ್ಬರಾಗಿದ್ದಾರೆ. ಇವರು ಕಾರ್ಪೊರೇಷನ್ ಬ್ಯಾಂಕ್ ನಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಇವರು ೪೫೦೦ಕ್ಕೂ ಹೆಚ್ಚು ಹನಿಗವನಗಳು, ೩೫೦ ಕ್ಕೂ ಹೆಚ್ಚು ಕವನಗಳು, ೫೩೦ ಕ್ಕೂ ಹೆಚ್ಚು ಲೇಖನಗಳು, ಎರಡು ಪ್ರಬಂಧ ಸಂಕಲನಗಳು, ೧೫ ನಾಟಕಗಳು ಹಾಗೂ ಒಂದು ಪ್ರವಾಸ ಕಥನವನ್ನು ಬರೆದಿದ್ದಾರೆ. ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕಡೆಂಗೋಡ್ಲು ಕಾವ್ಯ ಪ್ರಶಸ್ತಿ ಮುಂತಾದ ಪ್ರಶಸ್ತಿಗಳು ಲಭಿಸಿವೆ. ಇವರು ಕನ್ನಡ ಸಾಹಿತ್ಯ ಪರಿಷತ್ತಿನ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಹನಿಗವನ ಗೋಷ್ಠಿಯ ಅಧ್ಯಕ್ಷತೆ ಹಾಗೂ ಚುಟುಕು ಗೋಷ್ಠಿಗಳ ಅಧ್ಯಕ್ಷತೆಯನ್ನು ವಹಿಸಿದ್ದಾರೆ.

ಪ್ರಸ್ತುತ ಪಾಠವನ್ನು ಅವರ 'ಪರವಾಗಿಲ್ಲ' ಎಂಬ ಪ್ರಬಂಧ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

## ಉತ್ತರಿಸಿರಿ

ಕೆಳಗೆ ನೀಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಪ್ರಾಣಿಗಳು ಮನುಷ್ಯರ ಹಾಗೆ ದಾರಿ ತಪ್ಪಿಸಿಕೊಂಡು ಅಲೆದಾಡುವುದಿಲ್ಲ. ಯಾಕೆ?
2. ಅಂಗಡಿಗಳಲ್ಲಿ ದಾರಿ ವಿಚಾರಿಸುವ ಬಗ್ಗೆ ಲೇಖಕರು ಏನು ಹೇಳಿದ್ದಾರೆ?
3. ಲೇಖಕರ ಮನೆಗೆ ಬಂದ ಸಾಹಿತಿ ಮಿತ್ರರ ಅನುಭವವೇನು?
4. ದಾರಿ ತಪ್ಪುವುದರ ಬಗ್ಗೆ ನಾಚಿಕೆ ಬೇಡ ಎಂದು ಲೇಖಕರು ಹೇಳಲು ಕಾರಣವೇನು?

## ಸಮರ್ಥಿಸಿ ಬರೆಯಿರಿ

ಈ ಪಾಠದಲ್ಲಿ ನಿಮಗೆ ಇಷ್ಟವಾದ ಭಾಗವನ್ನು ಬರೆದು ಅದು ಯಾಕೆ ಇಷ್ಟವಾಯಿತು ಎಂದು ಸಮರ್ಥಿಸಿ ಬರೆಯಿರಿ.

## ಅನುಭವ ಟಿಪ್ಪಣಿ ಬರೆಯಿರಿ

ನೀವು ಎಂದಾದರೂ ದಾರಿ ತಪ್ಪಿ ಪೇಚಿಗೆ ಸಿಲುಕಿದ ಒಂದು ಸನ್ನಿವೇಶವನ್ನು ಟಿಪ್ಪಣಿಯಾಗಿ ಬರೆಯಿರಿ.

## ವಾಕ್ಯ ರಚಿಸಿರಿ

ಈ ಪಾಠದಲ್ಲಿ ಬಂದಿರುವ ಅನ್ಯದೇಶೀಯ ಪದಗಳನ್ನು ಗುರುತಿಸಿ ಅವುಗಳಿಗೆ ಸಂವಾದಿಯಾದ ಕನ್ನಡ ಪದಗಳನ್ನು ಬರೆದು ವಾಕ್ಯ ರಚಿಸಿರಿ.

ಮಾದರಿ :

* ವಾಕಿಂಗ್ ಮಾಡುವುದರಿಂದ ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು.

* ಮುಂಜಾನೆಯ ನಡಿಗೆಯು ನಮ್ಮ ಮನಸ್ಸಿಗೆ ಉಲ್ಲಾಸವನ್ನು ನೀಡುತ್ತದೆ.

## ಪ್ರಬಂಧ ಬರೆಯಿರಿ

'ಸೂಕ್ಷ್ಮವಾಗಿ ಅವಲೋಕಿಸಿದಾಗ ಆತ ಗುಂಡಿನ ಗಮ್ಮತ್ತಿನಲ್ಲಿದ್ದ ಎಂದು ಗೊತ್ತಾಯಿತು. ಅವನು ಹೇಳಿದಂತೆ ಎಡಕ್ಕೆ, ಬಲಕ್ಕೆ , ಹಿಂದಕ್ಕೆ, ಮುಂದಕ್ಕೆ ತಿರುಗುತ್ತಾ ಹೋಗಿದ್ದರೆ ತಲೆ ತಿರುಗಿ ಅವನ ಜತೆ ನಾನು ಚರಂಡಿಗೆ ಬೀಳುವ ಸಂಭವವಿತ್ತು.'

ಮದ್ಯಪಾನಿಯು ಮಾಡಿದ ಅವಾಂತರವನ್ನು ಪಾಠದಲ್ಲಿ ನೀವು ಓದಿರುವಿರಲ್ಲವೇ? ಈ ಹಿನ್ನೆಲೆಯಲ್ಲಿ ಗ್ರಂಥಾಲಯದ ಸಹಾಯದಿಂದ ಮಾಹಿತಿ ಸಂಗ್ರಹಿಸಿ 'ಮದ್ಯಪಾನ ಮತ್ತು ಮಾದಕದ್ರವ್ಯಸೇವನೆಯ ದುಷ್ಪರಿಣಾಮಗಳು' ಎಂಬ ವಿಷಯದ ಕುರಿತು ಒಂದು ಪ್ರಬಂಧ ಬರೆಯಿರಿ.

## ಓದಿರಿ

ಎಚ್. ಡುಂಡಿರಾಜರ ಮತ್ತು ಕನ್ನಡದ ಇತರ ಹಾಸ್ಯ ಸಾಹಿತಿಗಳ ಹಾಸ್ಯ ಲೇಖನಗಳನ್ನು ಓದಿರಿ.

# ಮುನ್ನಡೆಸು ಬೆಳಕಿನೆಡೆಗೆ

**- ಲೀಲಾ ಮಣ್ಣಾಲ**

(ಪಾತ್ರವರ್ಗ : ೧. ಮಹಾರಾಜ ಶುದ್ಧೋದನ ೨. ರಾಜಕುಮಾರ ಸಿದ್ಧಾರ್ಥ ೩. ಮಂತ್ರಿ ೪. ರಥದ ಸಾರಥಿ ಚೆನ್ನ ೫. ರಾಜಸೊಸೆ ಯಶೋಧರೆ ೬. ಮಹಾರಾಣಿ ಗೌತಮಿ ೭. ದೂತ ೮. ಓರ್ವ ವೃದ್ಧ ೯. ಓರ್ವ ರೋಗಿ ೧೦. ನಾಲ್ಕಾರು ಮಂದಿ ಮಕ್ಕಳು.)

ಸಂದರ್ಭ : ಕಪಿಲವಸ್ತುವಿನ ಮಹಾರಾಜ ಶುದ್ಧೋದನನು ಅಂತಃಪುರದಲ್ಲಿ ವಿಶ್ರಾಂತಿಯಲ್ಲಿರುವನು. ಆಗ ಆತನ ಮಗ ಸಿದ್ಧಾರ್ಥನು ತಂದೆಯ ಭೇಟಿಗಾಗಿ ಆಗಮಿಸುತ್ತಾನೆ.)

**ದೃಶ್ಯ ೧**

ದೂತ : (ವಿನಮ್ರನಾಗಿ ವಂದಿಸಿ) ಮಹಾರಾಜರಿಗೆ ಜಯವಾಗಲಿ. ತಮ್ಮನ್ನು ಕಾಣುವುದಕ್ಕಾಗಿ ರಾಜಕುಮಾರರು ಬಂದಿದ್ದಾರೆ.

ಶುದ್ಧೋದನ : ಯಾರು? ಸಿದ್ಧಾರ್ಥನೆ? ಒಳಗೆ ಕಳುಹಿಸು.

ದೂತ : ಅಪ್ಪಣೆ ಮಹಾಪ್ರಭೂ... (ನಿರ್ಗಮಿಸುವನು)

ಸಿದ್ಧಾರ್ಥ : (ಒಳಗೆ ಪ್ರವೇಶಿಸಿ,ವಂದಿಸುತ್ತಾ ) ಅಪ್ಪಾಜಿ, ತಮಗೆ ವಂದನೆಗಳು. ಕುಶಲವಷ್ಟೇ?

ಶುದ್ಧೋದನ : (ಪ್ರೀತಿಯಿಂದ ಮಗನನ್ನು ಆಲಿಂಗಿಸಿ) ಓಹೋ... ನಾವು ಚೆನ್ನಾಗಿರುವೆವು. ಮಗೂ, ತಂದೆಯ ಬಳಿಗೆ ಬರಲು ಮಗನಿಗೆ ಅಪ್ಪಣೆ ಬೇಕೇನು? ಸೀದಾ ಒಳಗೆ ಬರಬಾರದೇ ಕಂದಾ?

ಸಿದ್ಧಾರ್ಥ : (ನಗುತ್ತಾ) ಬರಬಹುದು, ನಿಜ. ಆದರೆ ತಾವೇ ಕಲಿಸಿದ ಶಿಷ್ಟಾಚಾರ! ಬಿಡುವುದು ಕಷ್ಟ, ಏನು ಮಾಡಲಿ?

ಶುದ್ಧೋದನ : (ಹೆಮ್ಮೆಯಿಂದ) ಎಷ್ಟಾದರೂ ನಮ್ಮ ಪುತ್ರನಲ್ಲವೇ! ಈಗ ಹೇಳು, ಬಂದ ಕಾರಣವೇನು? ಎಲ್ಲವೂ ಕುಶಲವಷ್ಟೇ? ತಂದೆಯ ಬಳಿಗೆ ಮಗನು ಆತ್ಮೀಯ ಮಾತುಕತೆಗಾಗಿ ಬಂದಿದ್ದಾನೆ ಎಂದು ಎಣಿಸೋಣವೇನು?

ಸಿದ್ಧಾರ್ಥ : ಹಾಗೆಯೇ ಎಣಿಸಿರಿ ಅಪ್ಪಾಜಿ.

ಶುದ್ಧೋದನ : ಮಗೂ, ಯಶೋಧರೆ ಆರೋಗ್ಯವಷ್ಟೆ? ನಮ್ಮ ಸಾಮ್ರಾಜ್ಯದ ಭವಿಷ್ಯ ಆಕೆಯ ಉದರದಲ್ಲಿ ಕುಡಿಯೊಡೆದು ಬೆಳೆಯುತ್ತಿದೆ. ಪ್ರೀತಿಯಿಂದ ಲಾಲಿಸಿಕೋ........

ಸಿದ್ಧಾರ್ಥ : ಚಿಕ್ಕಮ್ಮನನ್ನೂ ಒಳಗೊಂಡಂತೆ ಇಡೀ ಅರಮನೆಗೆ ಅರಮನೆಯೇ ಯಶೋಧರೆಯ ಆರೈಕೆಗೆ ನಿಂತಿರುವಾಗ ಚಿಂತೆಯೇನಿದೆ ಅಪ್ಪಾಜಿ?

| | | |
|---|---|---|
| ಶುದ್ಧೋದನ | : | (ತಲೆದೂಗುತ್ತಾ) ಒಳ್ಳೇದು, ಒಳ್ಳೇದು. ಮಗೂ, ಇನ್ನುಮೇಲೆ ರಾಜಕಾರಣದ ಬಗೆಗೆ ನೀನೊಂದಷ್ಟು ಜವಾಬ್ದಾರಿಯನ್ನು ವಹಿಸಬೇಕು. ಅಲ್ಲವೇ? |
| ಸಿದ್ಧಾರ್ಥ | : | ಹೂಂ, ಅಪ್ಪಾಜಿ, ನಿಮ್ಮಲ್ಲಿ ಒಂದು ಬಿನ್ನಹ. |
| ಶುದ್ಧೋದನ | : | ಹೇಳು ಮಗೂ.... |
| ಸಿದ್ಧಾರ್ಥ | : | (ಅಳುಕುತ್ತಾ) ಅಪ್ಪಾಜಿ.... ಅದೇಕೋ ಈಗೀಗ ಅರಮನೆಯಲ್ಲಿ ಬಹಳ ಬೇಸರವಾಗತೊಡಗಿದೆ.... |
| ಶುದ್ಧೋದನ | : | ಬೇಸರವಾದರೆ ತೋಟದಲ್ಲಿ ಅಡ್ಡಾಡು. ರಾಜಕಾರಣ ಕಲಿತುಕೋ... |
| ಸಿದ್ಧಾರ್ಥ | : | ಅದಾವುದರಲ್ಲೂ ಆಸಕ್ತಿ ಮೂಡುತ್ತಿಲ್ಲ. ಒಂದು ಬಾರಿ.... ನಗರ ಸಂಚಾರ ಮಾಡಬೇಕು ಎಂಬ ಹಂಬಲ.... |
| ಶುದ್ಧೋದನ | : | ಈಗ ಅರಮನೆಯಲ್ಲಿ ಆಗಿರುವ ಕೊರತೆಯಾದರೂ ಏನು? ಚಕ್ರವರ್ತಿಯಾದ ಮೇಲೆ ರಾಜ್ಯ ಸುತ್ತಿ, ಪ್ರಜೆಗಳ ಕಷ್ಟ - ಸುಖ ಅರಿಯುವುದು ಇದ್ದೇ ಇದೆಯಲ್ಲ? ಈಗ ಏನು ಅವಸರ? |
| ಸಿದ್ಧಾರ್ಥ | : | ಅಪ್ಪಾಜಿ, ಹಕ್ಕಿಗೆ ರೆಕ್ಕೆ ಇರುವುದೇತಕ್ಕೆ ಹೇಳಿ ? |
| ಶುದ್ಧೋದನ | : | ಇದೆಂಥ ದಡ್ಡ ಪ್ರಶ್ನೆ! ಹಾರಬೇಕೆಂದರೆ ರೆಕ್ಕೆ ಇರಲೇಬೇಕಷ್ಟೆ? |
| ಸಿದ್ಧಾರ್ಥ | : | ಬಂಗಾರದ ಪಂಜರ ಮಾಡಿಸಿದ ಮಾತ್ರಕ್ಕೆ ಹಕ್ಕಿ ಬಂಧಿಯಾಗಿರಲು ಬಯಸುವುದೇನು? |
| ಶುದ್ಧೋದನ | : | ಇಲ್ಲ... |
| ಸಿದ್ಧಾರ್ಥ | : | ಕ್ಷಮಿಸಿ ಅಪ್ಪಾಜಿ, ನಾನು ಹಾಗೆಯೇ, ಪಂಚಭಕ್ಷ್ಯ ಪರಮಾನ್ನವನ್ನು ಸವಿಯುತ್ತಿರ ಬಹುದು. ಹಂಸತೂಲಿಕಾತಲ್ಪದಲ್ಲಿ ಮಲಗಿ ಚಿನ್ನದ ಬೀಸಣಿಗೆಯಿಂದ ಗಾಳಿ ಹಾಕಿಸಿಕೊಳ್ಳುತ್ತಿರಬಹುದು. ಹಾಗಂತ... ಅರಮನೆಯ ನಾಲ್ಕು ಗೋಡೆಗಳ ನಡುವೆ ನಾನು ಬಂದಿಯಾಗಲು ಸಾಧ್ಯವೇ? ಹೇಳಿ ಅಪ್ಪಾಜಿ.ನನ್ನನ್ನು ಹೀಗೆ ಕೂಡಿ ಹಾಕುವುದರ ಉದ್ದೇಶವಾದರೂ ಏನು? |
| ಶುದ್ಧೋದನ | : | (ಸ್ವಲ್ಪ ದೂರ ನಿಂತು, ಸ್ವಗತ) ಉದ್ದೇಶ...ಉದ್ದೇಶ... (ಆತಂಕದಿಂದ) ಸಿದ್ಧಾರ್ಥ ಶಿಶುವಾಗಿದ್ದಾಗ - ಅಸಿತಮುನಿಗಳು ನುಡಿದಿದ್ದ ಭವಿಷ್ಯ... ಈಗಲೂ ನನ್ನ ಕಿವಿದೆರೆಯಲ್ಲಿ ಅನುರಣಿಸುತ್ತಾ ಇದೆ! ಇಲ್ಲ .... ನನ್ನ ಸಿದ್ಧಾರ್ಥ ಸನ್ಯಾಸಿಯಾಗಲು ನಾನು ಬಿಡಲಾರೆ... ಅದಕ್ಕಾಗಿಯೇ ಅವನನ್ನು ಯಾವ ನೋವೂ ಬಾಧಿಸದಂತೆ ಸುಖದ ಸುಪ್ಪತ್ತಿಗೆಯಲ್ಲಿ ಇರಿಸಿ, ಸಾಕುತ್ತಿದ್ದೇನೆ.... |

ಸಿದ್ಧಾರ್ಥ : ಅಪ್ಪಾಜಿ, ಏನಾದರೂ ಹೇಳಿದಿರೇನು?

ಶುದ್ಧೋದನ : (ಅನ್ಯಮನಸ್ಕತೆಯಿಂದ ಸ್ವಗತ) ಆದರೆ... ಹೆಚ್ಚು ಎಳೆದರೆ ದಾರ ತುಂಡಾದೀತು!

(ಪ್ರಕಟವಾಗಿ) ಮಗೂ, ನಿನಗೆ ನಗರ ಪ್ರದಕ್ಷಿಣೆ ಮಾಡಬೇಕೆಂದಿದ್ದರೆ, ನಾನು ಅಡ್ಡಿಮಾಡಲಾರೆ.ನಾಳೆ ಸೂರ್ಯೋದಯಕ್ಕೆ ನೀನು ತಯಾರಾಗು. ಸಾರಥಿ ಚೆನ್ನನಿಗೆ ರಥ ಸಿದ್ಧಗೊಳಿಸಲು ಈಗಲೇ ಸೂಚಿಸುತ್ತೇನೆ. ಸರಿಯಷ್ಟೇ (ಕೈ ಚಪ್ಪಾಳೆ ತಟ್ಟಿ) ಯಾರಲ್ಲಿ...?

**ಬುದ್ಧನ ನುಡಿಮುತ್ತುಗಳು**

* ಆಸೆಯೇ ದುಃಖಕ್ಕೆ ಮೂಲ
* ಒಂದು ಹಣತೆಯಿಂದ ಸಾವಿರಾರು ಹಣತೆಗಳನ್ನು ಬೆಳಗಿಸಬಹುದು ಇದರಿಂದ ಆ ಹಣತೆಯ ಬೆಳಕು ಕಡಿಮೆಯಾಗದು ಹಂಚಿಕೆಯಿಂದ ಎಂದೂ ಸಂತೋಷ ಕಡಿಮೆಯಾಗದು
* ಮನುಷ್ಯ ಸೋಲಿನಲ್ಲಿ ಕಲಿಯುವಷ್ಟು ಪಾಠಗಳನ್ನು ಗೆಲುವಿನಲ್ಲಿ ಕಲಿಯುವುದು ಅಸಾಧ್ಯ
* ಜೀವನದಲ್ಲಿ ನಿನಗಾದ ನೋವನ್ನು ಮರೆತುಬಿಡು ನೋವಿನಿಂದ ಕಲಿತ ಪಾಠವನ್ನು ಮರೆಯಬೇಡ
* ನಿಮ್ಮ ಕೋಪಕ್ಕಾಗಿ ನಿಮ್ಮನ್ನು ಶಿಕ್ಷಿಸಲಾಗುವುದಿಲ್ಲ ನಿಮ್ಮ ಕೋಪವೇ ನಿಮ್ಮನ್ನು ಶಿಕ್ಷಿಸುತ್ತದೆ
* ಸಾವಿರ ಯುದ್ಧಗಳನ್ನು ಗೆಲ್ಲುವುದಕ್ಕಿಂತ ನಿಮ್ಮನ್ನು ನೀವು ಜಯಿಸುವುದು ಉತ್ತಮ ಆ ಗೆಲುವು ಶಾಶ್ವತ
* ಸಾವಿರ ಸರ್ಪಗಳು ಸುತ್ತಿಕೊಂಡಿದ್ದರೂ ಗಂಧದ ಮರವು ವಿಷವಾಗುವುದಿಲ್ಲ. ಸಹವಾಸ ದೋಷದಿಂದ ಸಜ್ಜನರು ಎಂದಿಗೂ ಬದಲಾಗುವುದಿಲ್ಲ.

ಸಿದ್ಧಾರ್ಥ : (ಆನಂದದಿಂದ) ನೀವು ನನ್ನನ್ನು ನಿರಾಸೆಗೊಳಿಸಲಾರಿರಿ ಎಂಬುದು ನನಗೆ ಗೊತ್ತಿತ್ತು! ಪ್ರಣಾಮಗಳು. ನಾನು ಬರಲೇ.... ಅಪ್ಪಾಜಿ ?

ಶುದ್ಧೋದನ : (ಆಶೀರ್ವಾದ ಮಾಡುತ್ತಾ) ಜಾಗ್ರತೆ ಹೋಗಿ ಬಾ ಮಗೂ... ನಿನಗೆ ಒಳಿತಾಗಲಿ.

(ಸಿದ್ಧಾರ್ಥ ನಿರ್ಗಮಿಸುವನು)

ದೂತ : (ನಮಸ್ಕರಿಸುತ್ತಾ) ಕರೆದಿರಾ ಪ್ರಭು...?

ಶುದ್ಧೋದನ : ಹೌದು. ಈಗಲೇ ಹೋಗಿ ಮಂತ್ರಿಗಳನ್ನು ಬರ ಹೇಳು .

ದೂತ : ಅಪ್ಪಣೆ ಪ್ರಭೂ... (ಹಿಂದೆ ಹೆಜ್ಜೆ ಇರಿಸುತ್ತಾ ಮರೆಯಾಗುವನು)

ಪ್ರಧಾನ ಮಂತ್ರಿ : (ವಂದಿಸುತ್ತಾ) ಮಹಾರಾಜರಿಗೆ ಜಯವಾಗಲಿ. ಹೇಳಿ ಕಳುಹಿಸಿದಿರಂತೆ, ಅಪ್ಪಣೆಯಾಗಲಿ ಪ್ರಭೂ...

ಶುದ್ಧೋದನ : (ಚಿಂತಿತನಾಗಿ) ನಿಮಗೆ ತಿಳಿಯದ್ದೇನಿದೆ ಮಂತ್ರಿಗಳೇ. ನಗರದ ಪ್ರದಕ್ಷಿಣೆ ಮಾಡಲೇಬೇಕೆಂದು ಸಿದ್ಧಾರ್ಥ ಹಠ ಹಿಡಿದಿದ್ದಾನೆ. ಯಾವ ಕಾರಣಕ್ಕೂ ನಾನು ಅವನ ಮನಸ್ಸನ್ನು ನೋಯಿಸಲಾರೆ. ಚೆನ್ನನಿಗೆ ರಥವನ್ನು ಸಿದ್ಧಗೊಳಿಸಲು ತಿಳಿಸಿರಿ. ಹಾಗೆಯೇ ರಥವನ್ನು ನಡೆಸಬೇಕಾದ ಮಾರ್ಗವನ್ನೂ ನಿರ್ದೇಶಿಸಿರಿ. ಅದಕ್ಕಿಂತ ಮೊದಲು ತುರ್ತಾಗಿ ಆಗಬೇಕಾದ ಇನ್ನೊಂದು ಕಾರ್ಯವಿದೆ.

| | | |
|---|---|---|
| ಮಂತ್ರಿ | : | ಹೇಳಿ ಪ್ರಭೂ... |
| ಶುದ್ಧೋದನ | : | ನಗರವನ್ನು ತಳಿರು ತೋರಣಗಳಿಂದ ಸಿಂಗರಿಸಬೇಕು. ಎಲ್ಲಿಯೂ ಕೊಳೆ ಕಸ ಕಾಣಬಾರದು. ನೋವು ಸಂಕಟಗಳು ಇರಬಾರದು. ಎಲ್ಲೆಲ್ಲಿಯೂ ಸಂತೋಷ ತುಂಬಿ ತುಳುಕಾಡುವಂತೆ ಜಾಗ್ರತೆವಹಿಸಬೇಕು. ಅದರಲ್ಲೂ ಸಿದ್ಧಾರ್ಥನು ಸಂಚರಿಸುವ ಮಾರ್ಗಕ್ಕೆ ವಿಶೇಷ ಗಮನ ನೀಡಿರಿ. ಯಾವ ಕಾರಣಕ್ಕೂ ನಮ್ಮ ಮಗುವಿನ ಮನಸ್ಸು ನೋಯಬಾರದು! ಹೋಗಿ... ಮಿಂಚಿನ ವೇಗದಲ್ಲಿ ಕೆಲಸ ನಿಭಾಯಿಸಿ... |
| ಮಂತ್ರಿ | : | ತಮ್ಮ ಚಿತ್ತದಂತೆ ಆಗಲಿ ಪ್ರಭೂ...( ನಿರ್ಗಮನ) |

**ದೃಶ್ಯ ೨**

| | | |
|---|---|---|
| ಸಿದ್ಧಾರ್ಥ | : | (ಅರಮನೆಯ ಬಾಗಿಲಲ್ಲಿ ಚೆನ್ನನಿಗಾಗಿ ಕಾಯುತ್ತಾ) ಈ ದಿನ ಮನದಣಿಯೆ ಊರು ಸುತ್ತಬೇಕು, ಅದೇಕೋ ಅರಮನೆಯ ಆಟ, ನೋಟ, ಊಟ, ಉಪಚಾರ ಎಲ್ಲವೂ ಬೇಸರವೆನಿಸತೊಡಗಿದೆ. (ಕಾತರದಿಂದ) ಯಾಕೆ ,ಚೆನ್ನ ಇನ್ನೂ ಬಂದಿಲ್ಲವಲ್ಲಾ..... (ಚೆನ್ನನ ಆಗಮನ ) |
| ಚೆನ್ನ | : | (ತಲೆಬಾಗಿ ವಂದಿಸಿ) ರಾಜಕುಮಾರರಿಗೆ ಒಳಿತಾಗಲಿ. ರಥ ಸಿದ್ಧವಾಗಿದೆ. ಹೊರಡೋಣವೇ...ಕುಮಾರ ? |
| ಸಿದ್ಧಾರ್ಥ | : | (ಉತ್ಸಾಹದಿಂದ) ಓಹೋ...! ನಾನು ಸಿದ್ಧನಾಗಿಯೇ ಇದ್ದೇನೆ. ( ಇಬ್ಬರೂ ಹೊರಡುವರು) |
| ಸಿದ್ಧಾರ್ಥ | : | (ಸುತ್ತ ಗಮನಿಸುತ್ತಾ) ನಗರವೆಲ್ಲಾ ಮದುವಣಗಿತ್ತಿಯಂತೆ ಸಿಂಗಾರಗೊಂಡಿದೆಯಲ್ಲಾ? ಚೆನ್ನ, ಯಾವಾಗಲೂ ಹೀಗೆಯೇ ಇರುವುದೇನು? |
| ಚೆನ್ನ | : | ಇಲ್ಲ ಕುಮಾರ. ವಿಶೇಷ ಸಂದರ್ಭವೆಂದರೆ ಹೀಗೆಯೇ. ಜನರ ಉತ್ಸಾಹ ಮೇರೆ ಮೀರುತ್ತದೆ. |
| ಸಿದ್ಧಾರ್ಥ | : | ಈಗೇನು ವಿಶೇಷವಿದೆ ಚೆನ್ನ? ಏನಾದರೂ ಹಬ್ಬ ಇದೆಯೇನು? |
| ಚೆನ್ನ | : | ತಾವು ನಗರ ಸಂಚಾರಕ್ಕೆ ಹೊರಟಿದ್ದೀರಿ! ನಿಮ್ಮ ದರ್ಶನವೇ ಜನರಿಗೊಂದು ಹಬ್ಬ! |
| ಸಿದ್ಧಾರ್ಥ | : | ಓ...ಹಾಗೇನು? ಚೆನ್ನ, ಎಲ್ಲರೂ ನನ್ನನ್ನೇ ಏಕೆ ನೋಡುತ್ತಿದ್ದಾರೆ? ಅರಮನೆಯಲ್ಲಿ ಯಾರೂ ನನ್ನನ್ನು ಹೀಗೆ ದಿಟ್ಟಿಸಿ ನೋಡುವುದಿಲ್ಲ. |
| ಚೆನ್ನ | : | (ನಗುತ್ತಾ) ಅರಮನೆಯಲ್ಲಿ ನೀವು ದಿನವೂ ಇರುತ್ತೀರಿ. ಇಲ್ಲಿ ಹೀಗೆ ಅಪರೂಪಕ್ಕೆ ಬರುತ್ತಿದ್ದೀರಿ! ಜನರ ಕುತೂಹಲ ಸಹಜವಲ್ಲವೇ ಕುಮಾರ? |

ಸಿದ್ಧಾರ್ಥ : (ತಲೆದೂಗುತ್ತಾ) ನಿಜ... ನಿಜ...

ಚೆನ್ನ : ಕುಮಾರ, ನೀವು ಜನರತ್ತ ಕೈಬೀಸಿರಿ. ಮುಗುಳ್ನಗೆ ಬೀರಿ! ಮುಂದೆ ಮಹಾರಾಜ ಆಗುವವರು. ಜನರ ವಿಶ್ವಾಸ ಗಳಿಸಿಕೊಳ್ಳಬೇಕು.

ಸಿದ್ಧಾರ್ಥ : (ಜೋರಾಗಿ ನಗುತ್ತಾ) ಚೆನ್ನಾ... ಚೆನ್ನಾ! ಚೆನ್ನಾದ ಮಾತು ಹೇಳಿದೆ. ಕೈಬೀಸಿದ ಮಾತ್ರಕ್ಕೆ ಜನರ ವಿಶ್ವಾಸ ಗಳಿಸಿಬಿಡಬಹುದೇನು? ಅವರಿಗಾಗಿ ಒಳಿತೇನನ್ನಾದರೂ ಮಾಡಬೇಕು. ಆಗ ಬಂದೀತು ವಿಶ್ವಾಸ! ಅಷ್ಟಕ್ಕೂ ಮಹಾರಾಜರ ಮಗ ಮಹಾರಾಜನೇ ಆಗಬೇಕೆಂದೇನೂ ಇಲ್ಲವಲ್ಲಾ?

ಚೆನ್ನ : ಬಿಡ್ತು ಎನ್ನಿ ಕುಮಾರ. ಯಾರು ಆಗುವರೋ.... ಆಗಲೊಲ್ಲರೋ.... ನೀವಂತೂ ನಮ್ಮ ಮಹಾರಾಜ ಆಗಲೇಬೇಕು!

ಸಿದ್ಧಾರ್ಥ : ಚೆನ್ನ, ರಾಜ್ಯವನ್ನಾಳುವ ರಾಜನಿಗಿಂತಲೂ ಜನರ ಹೃದಯವನ್ನಾಳುವ ರಾಜನಾಗಬೇಕೆಂದು ನನ್ನಾಸೆ.

ಚೆನ್ನ : ನನಗೆ ತಿಳಿಯದೇ ಕುಮಾರ! ಚಿಕ್ಕಂದಿನಿಂದಲೂ ಅಷ್ಟೇ. ನಿಮ್ಮದೆಲ್ಲಾ ಇಂಥ ಸಾತ್ವಿಕ ಬಯಕೆಗಳೇ! ಆದರೆ ನನ್ನ ಸ್ವಾಮೀ... ನೀವು ಹೃದಯಗಳನ್ನೂ ಆಳಬೇಕು... ರಾಜ್ಯವನ್ನೂ ಆಳಬೇಕು!

ಸಿದ್ಧಾರ್ಥ : (ನಗುತ್ತಾ) ಚೆನ್ನ, ನೀನಂತೂ ನನ್ನ ಮೇಲಿನ ಪ್ರೀತಿಯಿಂದ ಕುರುಡನಾಗಿದ್ದೀ.... ಹೂಂ... ಮುಂದೆ ಏನಾಗುವುದೋ ನೋಡೋಣ. ಚೆನ್ನ...?

ಚೆನ್ನ : ಹೇಳಿ ಕುಮಾರ.

ಸಿದ್ಧಾರ್ಥ : (ಉತ್ಸಾಹದಿಂದ) ಅಲ್ಲಿ ನೋಡು! ಆ ಕಟ್ಟಡಗಳ ಹಿಂದೆ ಎಷ್ಟೊಂದು ಎತ್ತರದ ಮರಗಳು! ದೂರದಲ್ಲಿ ಗಿರಿಸಾಲು.... ಹಾರಿ ಹೋಗುತ್ತಿರುವ ಹಕ್ಕಿ ಹಿಂಡು.... ಆಹಾ.... ಎಂಥ ಸೊಗಸು ಎಂಥ ಸೊಗಸು! ಚೆನ್ನ, ಮರದಷ್ಟು ಎತ್ತರ ಮನುಷ್ಯನೇಕೆ ಇಲ್ಲ?

ಚೆನ್ನ : (ನಗುತ್ತ) ಇದೆಂಥ ವಿಚಿತ್ರ ಪ್ರಶ್ನೆ ಪ್ರಭು? (ಯೋಚನಾಮಗ್ನನಾಗಿ) ಬಹುಶಃ ಮನುಷ್ಯನಲ್ಲಿ ತುಂಬಿರುವ ಸ್ವಾರ್ಥ ಇದೆಯಲ್ಲಾ ಅದು ಎತ್ತರಕ್ಕೆ ಬೆಳೆಯಲು ಬಿಡುವುದೇ ಇಲ್ಲ!

ಸಿದ್ಧಾರ್ಥ : (ಮುಗ್ಧತೆಯಿಂದ) ಸ್ವಾರ್ಥವನ್ನು ತ್ಯಜಿಸಿದರೆ ?ಆಗ ?

ಚೆನ್ನ : (ನಗುತ್ತ) ಒಳ್ಳೇ ಹೇಳಿದಿರಿ! ಹುಲುಮಾನವನ ಕೈಯಿಂದ ಆಗುವ ಕಾರ್ಯವೇ ಅದು? (ಅಷ್ಟರಲ್ಲಿ ಒಬ್ಬ ಕುಷ್ಠರೋಗಿ ಕಾಣಸಿಗುವನು)

ಸಿದ್ಧಾರ್ಥ : (ಅಚ್ಚರಿಯಿಂದ) ಚೆನ್ನ ನೋಡು, ಅದೇನು?

ಚೆನ್ನ : ಅವನೂ ನಮ್ಮಂತೆಯೇ ಮನುಷ್ಯ ಪ್ರಭೂ....

ಸಿದ್ಧಾರ್ಥ : (ಅಚ್ಚರಿ) ಮನುಷ್ಯನೇ! ಮತ್ತೇಕೆ ಹಾಗೆ ಇದ್ದಾನೆ?

ಚೆನ್ನ : (ವಿಷಾದ) ಪಾಪ! ಯಾವ ಜನ್ಮದ ಕರ್ಮವೋ.... ಕುಷ್ಠರೋಗದಿಂದ ಬಳಲುತ್ತಿದ್ದಾನೆ.

ಸಿದ್ಧಾರ್ಥ : ಅವನೇಕೆ ಮುಖ ಹಿಂಡುತ್ತಿದ್ದಾನೆ?

ಚೆನ್ನ : ನೋವು! ಅನುಭವಿಸುತ್ತಿರುವ ಅಪಾರ ಯಾತನೆ ಮುಖದಲ್ಲಿ ವ್ಯಕ್ತವಾಗಿದೆ. ಬಿಡಿ, ನೀವು ಅವನನ್ನೇಕೆ ನೋಡುತ್ತೀರಿ? ಇತ್ತ ಮುಖ ಮಾಡಿ.

ಸಿದ್ಧಾರ್ಥ : ಆದರೆ ನಾನು ನೋಡದಿದ್ದ ಮಾತ್ರಕ್ಕೆ ಅವನ ನೋವು ಮಾಯವಾಗುವುದಿಲ್ಲ ಅಲ್ಲವೇ....

(ಅಷ್ಟರಲ್ಲಿ ಸೈನಿಕರು ಆ ರೋಗಿಯನ್ನು ಅಲ್ಲಿಂದ ಎಳೆದೊಯ್ಯುವರು)

ಸಿದ್ಧಾರ್ಥ : (ನೋವಿನಿಂದ ಮುಖ ಹಿಂಡಿ) ಚೆನ್ನ....

ಚೆನ್ನ : (ಸ್ವಲ್ಪ ಜೋರಾಗಿ) ನೀವು ಅತ್ತ ನೋಡಲೇ ಬೇಡಿರೀ! ಜೀವನವೆಂದ ಮೇಲೆ ಮನುಷ್ಯನಿಗೆ ನಾನಾ ಬವಣೆ ತಪ್ಪಿದ್ದಲ್ಲ ಬಿಡಿರಿ. ಇಲ್ಲಿ ನೋಡಿ. ಪುಟ್ಟ ಮಕ್ಕಳು ಆನಂದದಿಂದ ಹೇಗೆ ಕುಣಿದು ಕುಪ್ಪಳಿಸುತ್ತಿವೆ!

ಸಿದ್ಧಾರ್ಥ : (ನಿರುತ್ಸಾಹದಿಂದ) ಹೂಂ.....

(ಅಷ್ಟರಲ್ಲಿ ಹಣ್ಣು ಮುದುಕನೊಬ್ಬನು ಕೋಲೂರಿಕೊಂಡು ಬರುವನು. ಅವನನ್ನು ತಡೆಯಲು ಸೈನಿಕರು ಪ್ರಯತ್ನಿಸುವರು)

ಮುದುಕ : (ಹಠದಿಂದ) ನನ್ನ ಬಿಡಿ. ನಾನೂ ರಾಜಕುಮಾರನನ್ನು ನೋಡಬೇಕು. (ನಡುಗುವ ದನಿ. ಕಣ್ಣ ಮೇಲೆ ಕೈ ಅಡ್ಡ ಹಿಡಿದು) ಆಹಾ! ಎಂಥ ಮನಮೋಹಕ ಆಕೃತಿ! ಎಂಥ ತೇಜಸ್ಸು! ಇವನೇ ಏನು ರಾಜಕುಮಾರ? (ಜೋರಾಗಿ) ಎಲ್ಲರೂ ಬನ್ನಿ.... ಎಲ್ಲರೂ ಬನ್ನಿ...... ಕಪಿಲವಸ್ತುವಿನಲ್ಲಿ ಸೂರ್ಯೋದಯವಾಗಿದೆ. ಇನ್ನು ಕತ್ತಲೆಯಿಲ್ಲ! (ಪುಟ್ಟ ಮಕ್ಕಳು ಕುಣಿಯುತ್ತಾ ರಾಗವಾಗಿ ಹೇಳುವರು - ಇನ್ನು ಕತ್ತಲೆಯಿಲ್ಲ.... ಇನ್ನು ಕತ್ತಲೆಯಿಲ್ಲ.....)

ಸಿದ್ಧಾರ್ಥ : (ಕುತೂಹಲದಿಂದ) ಚೆನ್ನ, ಅವನು ಯಾರು? ಅವನ ಬೆನ್ನೇಕೆ ಹಾಗೆ ಬಾಗಿದೆ? ಮುಖವೇಕೆ ಸುಕ್ಕುಗಟ್ಟಿದೆ? ಬಾಯಲ್ಲಿ ಹಲ್ಲುಗಳೇ ಇಲ್ಲ?

ಚೆನ್ನ : (ಒಡೆಯನ ಮುಗ್ಧತೆಗೆ ಮರುಗುತ್ತಾ) ಒಡೆಯಾ! ಒಡೆಯಾ! ಅವನು ಮುದುಕನಾಗಿದ್ದಾನೆ. ಆದ್ದರಿಂದ ಅವನ ಬೆನ್ನು ಬಾಗಿದೆ.

ಮಕ್ಕಳು : (ಅಣಕದ ದನಿಯಲ್ಲಿ) ಅವನು ಮುದುಕನಾಗಿದ್ದಾನೆ. ಆದ್ದರಿಂದ ಅವನ ಬೆನ್ನು ಬಾಗಿದೆ. (ಅಭಿನಯಿಸುತ್ತಾ ನಗುವರು)

ಚೆನ್ನ : ಅವನು ಮುದುಕನಾಗಿದ್ದಾನೆ. ಆದ್ದರಿಂದ ಮುಖವು ಸುಕ್ಕುಗಟ್ಟಿದೆ.

ಮಕ್ಕಳು : (ಅಣಕದ ದನಿಯಲ್ಲಿ) ಅವನು ಮುದುಕನಾಗಿದ್ದಾನೆ. ಆದ್ದರಿಂದ ಮುಖವು ಸುಕ್ಕುಗಟ್ಟಿದೆ.

ಚೆನ್ನ : ಅವನು ಮುದುಕನಾಗಿದ್ದಾನೆ. ಆದ್ದರಿಂದ ಹಲ್ಲುಗಳು ಉದುರಿ ಹೋಗಿವೆ.

ಮಕ್ಕಳು : (ಅಣಕದ ದನಿಯಲ್ಲಿ) ಅವನು ಮುದುಕನಾಗಿದ್ದಾನೆ. ಆದ್ದರಿಂದ ಹಲ್ಲುಗಳು ಉದುರಿ ಹೋಗಿವೆ.

ಚೆನ್ನ : (ಕೋಪದಿಂದ) ನೀವೇನು ಮಕ್ಕಳೋ ಅಲ್ಲಾ ಪಿಶಾಚಿಗಳ ಒಕ್ಕಲೋ? ಒಂದು ದಿನ ನೀವೂ ಹಾಗೆಯೇ ಮುದುಕರಾಗುತ್ತೀರಿ.! ನಿಮ್ಮ ಬೆನ್ನು ಬಾಗುತ್ತದೆ. ಕೆನ್ನೆ ಸುಕ್ಕುಗಟ್ಟುತ್ತದೆ ಮತ್ತು ಹಲ್ಲುಗಳು ಉದುರಿಹೋಗುತ್ತವೆ! ಗೊತ್ತೇನು?

(ಮಕ್ಕಳು ಒಬ್ಬೊಬ್ಬರೂ ಒಂದೊಂದು ಮುಖಭಾವ ಮಾಡುವರು)

ಮಕ್ಕಳು : ಇಲ್ಲ.... ಇಲ್ಲ..... ನಾವು ಮುದುಕರಾಗುವುದಿಲ್ಲ. (ಸೈನಿಕರು ಬಂದು ಎಲ್ಲರನ್ನೂ ಚದುರಿಸುವರು)

ಸಿದ್ಧಾರ್ಥ : ಚೆನ್ನ....

ಚೆನ್ನ : ಹೇಳಿ ಒಡೆಯಾ....

ಸಿದ್ಧಾರ್ಥ : ಅವನು.... ಅವನೇಕೆ ಮುದುಕನಾಗಿದ್ದಾನೆ?



ಚೆನ್ನ : ವೃದ್ಧಾಪ್ಯದಿಂದಾಗಿ ಕುಮಾರ. ವಯಸ್ಸು ಆಗ್ತಾ... ಆಗ್ತಾ... ಎಲ್ಲರೂ ವೃದ್ಧರಾಗುತ್ತಾರೆ.

ಸಿದ್ಧಾರ್ಥ : (ಅಚ್ಚರಿಯಿಂದ ) ಎಲ್ಲರೂ....? ಅಂದರೆ ನೀನೂ ವೃದ್ಧನಾಗುತ್ತಿಯೇನು ಹಾಗೆಯೇ....?

ಚೆನ್ನ : ( ನಗುತ್ತಾ) ಹೂಂ..... ಕುಮಾರ.

ಸಿದ್ಧಾರ್ಥ : (ನಂಬಲಾಗದವನಂತೆ) ನಮ್ಮ ತಂದೆ? ಗೌತಮಿ ಚಿಕ್ಕಮ್ಮ? ನನ್ನ.... ನನ್ನ.... ಯಶೋಧರೇ....?

ಚೆನ್ನ : (ದೃಢತೆಯಿಂದ) ಹೌದು. ಅವರೆಲ್ಲರೂ ಒಂದಲ್ಲ ಒಂದು ದಿನ ವೃದ್ಧರಾಗಲೇಬೇಕು. ಆಯಸ್ಸು ಇದ್ದರೆ!.... ಅದು ಪ್ರಕೃತಿ ನಿಯಮ.

ಸಿದ್ಧಾರ್ಥ : (ಉದ್ವೇಗದಿಂದ) ನಾನು? ನಾನು ಚೆನ್ನ? ನಾನು ಹಾಗೆಯೇ ಆಗುವೆನೇನು?

ಚೆನ್ನ : (ಜೋರಾಗಿ ನಗುತ್ತಾ) ಒಡೆಯಾ! ಒಡೆಯಾ! ನೀವೂ ಮನುಷ್ಯರಲ್ಲವೇನು? (ಗಂಭೀರವಾಗಿ) ಆದರೆ ಆ ಕಾಲ ಬಹಳ ದೂರವಿದೆ. ನೀವು ಈಗಲೇ ತಲೆಕೆಡಿಸಿಕೊಳ್ಳುವುದು ಬೇಡ.

(ಸಿದ್ಧಾರ್ಥ ಯೋಚನಾಮಗ್ನನಾಗಿ ಮೌನ ತಾಳುವನು. ಅಷ್ಟರಲ್ಲಿ ಶವಯಾತ್ರೆ ಕಂಡುಬರುವುದು.)

ಸಿದ್ಧಾರ್ಥ : (ಕುತೂಹಲದಿಂದ) ಚೆನ್ನ ಅದೇನು? ಅವನೇಕೆ ನಾಲ್ಕು ಮಂದಿಯ ಹೆಗಲ ಮೇಲೆ ಮಲಗಿದ್ದಾನೆ? ಅವರೇಕೆ ಆತನನ್ನು ಹೊತ್ತೊಯ್ಯುತ್ತಿದ್ದಾರೆ? ಸುತ್ತಲಿರುವ ಜನರೆಲ್ಲ ಏಕೆ ಅಳುತ್ತಿದ್ದಾರೆ?

ಚೆನ್ನ : (ಸ್ವಗತ) ಅಯ್ಯೋ ದೇವರೆ.... ಇದೂ ಬೀಳಬೇಕಾಯ್ತೆ ಕುಮಾರನ ಕಣ್ಣಿಗೆ! (ಪ್ರಕಟವಾಗಿ ) ಒಡೆಯಾ..... ಅದು ಶವಯಾತ್ರೆ.

ಸಿದ್ಧಾರ್ಥ : (ಅರ್ಥವಾಗದವನಂತೆ) ಶವಯಾತ್ರೆ?

ಚೆನ್ನ : ಆ ವ್ಯಕ್ತಿ ಸತ್ತಿದ್ದಾನೆ. ಸ್ಮಶಾನಕ್ಕೆ ಒಯ್ಯುತ್ತಿದ್ದಾರೆ. ಮಣ್ಣು ಮಾಡುವುದಕ್ಕಾಗಿ.

ಸಿದ್ಧಾರ್ಥ : (ಆತಂಕದಿಂದ) ಮಣ್ಣಿನಲ್ಲಿ ಹಾಕಿದರೆ ಅವನಿಗೆ ಉಸಿರು ಕಟ್ಟುವುದಿಲ್ಲವೇನು?

ಚೆನ್ನ : ಈಗಾಗಲೇ ಅವನ ಉಸಿರು ನಿಂತುಹೋಗಿದೆ.

ಸಿದ್ಧಾರ್ಥ : ಉಸಿರು ಏಕೆ ನಿಂತುಹೋಯಿತು?

ಚೆನ್ನ : (ತುಸು ಅಸಮಾಧಾನದಿಂದ) ಬಿಡಿ ಕುಮಾರ, ಚಿಕ್ಕ ಮಗುವಿನಂತೆ ಪ್ರಶ್ನಿಸುತ್ತಿದ್ದೀರಿ. ನಿಮಗೆ ಅದೆಲ್ಲ ಈಗ ಅರ್ಥವಾಗದು. ಅದೋ... ಅಲ್ಲಿ ನೋಡಿ, ಜನ ಹೇಗೆ ನಿಮ್ಮತ್ತ ಕೈಬೀಸುತ್ತಿದ್ದಾರೆ, ಕೇಕೆ ಹಾಕಿ ಜಯಕಾರ ಕೂಗುತ್ತಿದ್ದಾರೆ!

ಸಿದ್ಧಾರ್ಥ : (ಮೊಂಡುತನದಿಂದ) ಅವನು ಏಕೆ ಸತ್ತ?

ಚೆನ್ನ : (ಸಿದ್ಧಾರ್ಥನ ಅಜ್ಞಾನಕ್ಕೆ ಮರುಗುತ್ತಾ) ಅಯ್ಯೋ.... ಒಡೆಯಾ, ಈ ಭೂಮಿ ಮೇಲೆ ಜೀವತಾಳಿ ಬಂದವರೆಲ್ಲಾ ಕೊನೆಗೊಂದು ದಿನ ಸಾಯಲೇಬೇಕು. ಅದು ಪ್ರಕೃತಿ ನಿಯಮ. ಬಾಲ್ಯ, ಯೌವನ, ವೃದ್ಧಾಪ್ಯ ಮತ್ತು ಸಾವು.... ಜೀವನದ ವಿವಿಧ ಹಂತಗಳು......

ಸಿದ್ಧಾರ್ಥ : ಚೆನ್ನ, ಸತ್ತ ಮೇಲೆ? ಸತ್ತ ಮೇಲೆ ಏನಾಗುತ್ತದೆ?

ಚೆನ್ನ : ಅದನ್ನು ಕಂಡವರು ಬಂದು ಹೇಳುವುದಿಲ್ಲವಲ್ಲಾ ಪ್ರಭೂ. ದೇಹ ವಿನಾಶಿ, ಆತ್ಮ ಅವಿನಾಶಿ ಎನ್ನುತ್ತಾರೆ, ಪ್ರಾಜ್ಞರು. ನಾನಂತೂ ಅಜ್ಞ, ನನಗೆ ತಿಳಿಯದು. ಜನರು ನೋವು ಸಂಕಟಗಳಿಂದ ನರಳುವುದನ್ನು ಕಂಡಿದ್ದೇನೆ. ಸಾಯುವುದನ್ನು ಕಂಡಿದ್ದೇನೆ. ಈ ಕಷ್ಟ ಪರಂಪರೆಗೆ ಬಡವ ಬಲ್ಲಿದನೆಂಬ ಭೇದವೂ ಇಲ್ಲ......

ಸಿದ್ಧಾರ್ಥ : (ದುಃಖದಿಂದ) ಸಾಕು.... ಸಾಕು ಚೆನ್ನ, ಇನ್ನೇನೂ ಹೇಳಬೇಡ. ರಥ ನಡೆಸು. ಅರಮನೆಗೆ ಹಿಂದಿರುಗೋಣ.

## ದೃಶ್ಯ ೩

(ಸಂದರ್ಭ : ಅಂತಃಪುರದಲ್ಲಿ ಬಾಣಂತಿ ಕೊಠಡಿ - ಮಗುವನ್ನು ಬಳಿಯಲ್ಲಿ ಮಲಗಿಸಿಕೊಂಡು ತಾಯ್ತನದಿಂದ ಬೀಗುತ್ತಿರುವ ಯಶೋಧರೆ. ಪಕ್ಕದಲ್ಲೇ ಉಪಚರಿಸುತ್ತಾ ನಿಂತಿರುವ ರಾಣಿ ಗೌತಮಿ ಮತ್ತು ಪರಿಚಾರಿಕೆಯರು. ನಿರ್ಭಾವುಕತೆಯಿಂದ ಮಗುವನ್ನು ನೋಡುತ್ತಾ ನಿಂತ ಸಿದ್ಧಾರ್ಥ.)

(ಹಿನ್ನೆಲೆಯಲ್ಲಿ ಡಂಗುರದ ದನಿ : ಮಹಾಜನಗಳೇ .....ಕೇಳ್ರಪ್ಪೋ ಕೇಳಿರಿ. ರಾಜಕುಮಾರ ಸಿದ್ಧಾರ್ಥರಿಗೆ ಪುತ್ರೋತ್ಸವವಾಗಿದೆ. ಆ ಪ್ರಯುಕ್ತ ರಾಜ್ಯಾದ್ಯಂತ ಉತ್ಸವವನ್ನು ಆಚರಿಸತಕ್ಕದ್ದು. ಸರ್ವಜನರೂ ಸಿಹಿ ತಿಂದು ಮಗುವನ್ನು ಆಶೀರ್ವದಿಸಬೇಕೆಂದು ಮಹಾರಾಜರ ಆಣತಿಯಾಗಿದೆ. ಕೇಳ್ರಪ್ಪೋ ಕೇಳಿರಿ.....)

ಗೌತಮಿ : ಮಗೂ ಸಿದ್ಧಾರ್ಥ, ಕಂದನನ್ನು ಎತ್ತಿಕೊಳ್ಳುವುದಿಲ್ಲವೇನು? ನೋಡು, ಎಷ್ಟು ಮುದ್ದಾಗಿದ್ದಾನೆ! ಎಲ್ಲಾ ನಿನ್ನಂತೆಯೇ ಹೀಗೆ ಬಾ, ಎತ್ತಿಕೋ.

ಸಿದ್ಧಾರ್ಥ : ಚಿಕ್ಕಮ್ಮ, ಎಳೆ ಮಗುವನ್ನು ಎತ್ತಿಕೊಂಡು ನನಗೆಲ್ಲಿ ಅಭ್ಯಾಸವಿದೆ? (ನಗುತ್ತಾ) ಆಮೇಲೆ ಏನಾದರೂ ಹೆಚ್ಚು ಕಡಿಮೆಯಾದರೆ ಯಶೋಧೆ ಬಿಟ್ಟಾಳೇನು ನನ್ನನ್ನು?

ಯಶೋಧರೆ : (ಮುನಿಸಿನಿಂದ) ಬಿಡಿ ಅತ್ತೇ, ಅವರಿಗೇಕೆ ಕಷ್ಟ? (ತಾನೇ ಮುದ್ದು ಮಾಡುತ್ತಾ ಓರೆ ನೋಟದಿಂದ ಗಂಡನನ್ನು ಗಮನಿಸುವಳು. ಅಷ್ಟರಲ್ಲಿ ಮಹಾರಾಜ ಶುದ್ಧೋದನನ ಆಗಮನವಾಗುವುದು.)

ಶುದ್ಧೋದನ : (ಆನಂದದಿಂದ) ಆಹಾ! ಇಂದೇ ಮಹಾ ಸುದಿನ! ಕಪಿಲವಸ್ತುವಿನ ಭಾಗ್ಯದ ಬಾಗಿಲು ತೆರೆಯಿತು! ಸಿದ್ದಾರ್ಥ, ಕುಮಾರ, ನನಗೆಷ್ಟು ಆನಂದವಾಗಿದೆ ಎಂಬುದನ್ನು ಮಾತಿನಲ್ಲಿ ವರ್ಣಿಸಲಾರೆ. (ನಗುತ್ತಾ) ನೀನು ಅಪ್ಪನಾದೆ! ಅಭಿನಂದನೆಗಳು! ಗೌತಮಿ, ನಾವಿಬ್ಬರೂ ಅಜ್ಜ – ಅಜ್ಜಿಯರಾದೆವು. ನೋಡು! ಯಶೋಧಾ..... ಮಗಳೇ. ಆರೋಗ್ಯವಾಗಿರುವೆಯೇನಮ್ಮ? ಸಿದ್ಧಾರ್ಥ, ಮಗೂ, ಅದೇಕೆ ದೂರ ನಿಂತಿರುವೆ? ಹೀಗೆ ಬಾ.... ಅಲೆ... ಲೆ... ಲೇ (ಶಿಶುವನ್ನು ಮುದ್ದುಗೆರೆಯುತ್ತಾ) ಏನೋ ಕಳ್ಳಾ ನನ್ ಹೃದಯ ಕದ್ದು ನಗುತ್ತಿರುವೆಯೇನೋ....?

ಸಿದ್ಧಾರ್ಥ : ಅಪ್ಪಾ!

ಶುದ್ಧೋದನ : ಹೇಳು. ಇಡೀ ರಾಜ್ಯಕ್ಕೆ ಸಿಹಿ ಹಂಚುವ ಏರ್ಪಾಡು ಮಾಡಿದ್ದೇವೆ. ಎಲ್ಲರೂ ಆನಂದದಿಂದ ಕುಣಿದು ಕುಪ್ಪಳಿಸಬೇಕೆಂದು ಆಜ್ಞೆ ಹೊರಡಿಸಿದ್ದೇವೆ! ಸರಿಯಷ್ಟೇ?

ಸಿದ್ಧಾರ್ಥ : (ಅಸಮಾಧಾನದಿಂದ) ಯಾಕೆ ಅಂತ? ಆನಂದ ಅಂತರಂಗದಿಂದ ಹೊಮ್ಮಬೇಕು. ಆಜ್ಞೆ ಮಾಡುವುದರಿಂದ ಬರುವುದೇನು? ಜನರಿಗೆ ನಾನಾ ವಿಧವಾದ ಸಂಕಷ್ಟಗಳು ಇರುತ್ತವೆ. ಮಹಾರಾಜರಿಗೆ ಮೊಮ್ಮಗ ಹುಟ್ಟಿದಾಕ್ಷಣ, ಅವರು ಸಂತಸ ಹಂಚಿಕೊಳ್ಳಲು ಆಗುವುದೇನು?



ಶುದ್ಧೋದನ : (ಅಚ್ಚರಿಯಿಂದ) ಇದೆಂಥ ಮಾತು? ರಾಜನ ಸಂತೋಷದಲ್ಲಿ ಪ್ರಜೆಗಳು ಭಾಗಿಯಾಗಬಾರದೇನು ಹಾಗಾದರೆ?

ಸಿದ್ಧಾರ್ಥ : ಇಲ್ಲವೆನ್ನಲಿಲ್ಲ ನಾನು. ಆದರೆ ಅದಕ್ಕಿಂತ ಮುಖ್ಯವಾದದ್ದು ಪ್ರಜೆಗಳ ದುಃಖದಲ್ಲಿ ರಾಜ ಭಾಗಿಯಾಗುವುದು ಎಂದೇ ನನಗನಿಸುತ್ತದೆ.

ಶುದ್ಧೋದನ : ಏನೋ ಅಪ್ಪಾ, ನಿನ್ನ ಮಾತಿನ ವರಸೆಯೇ ಈ ದಿನ ವಿಚಿತ್ರವಾಗಿದೆ. ನೋಡು ! ಎಷ್ಟು ಸೊಗಸಾಗಿ ನಗುತ್ತಿದ್ದಾನೆ, ನನ್ನ ಮೊಮ್ಮಗ!

ಸಿದ್ಧಾರ್ಥ : ಅಪ್ಪಾಜಿ, ಹಾಗಂತ? ಈ ನಗು ಶಾಶ್ವತವೇ ಹೇಳಿ?

ಶುದ್ಧೋದನ : (ಕೋಪದಿಂದ) ನಿದ್ರೆಕೆಟ್ಟು ,ನಿನ್ನ ತಲೆಯೂ ಕೆಟ್ಟಿದೆ ಎಂದು ತೋರುತ್ತದೆ.ಹೋಗು, ಮೊದಲು ವಿಶ್ರಮಿಸು, ಕಣ್ತುಂಬ ನಿದ್ರಿಸು.

ಸಿದ್ಧಾರ್ಥ : (ನಗುತ್ತಾ) ಕ್ಷಮಿಸಿ ಅಪ್ಪಾಜಿ. (ಮಗುವಿನತ್ತ ನೋಡುತ್ತಾ) ನಿಮ್ಮ ಮಾತು ನಿಜ. ನಿಮ್ಮ ಮೊಮ್ಮಗನ ನಗು ನಯನಮನೋಹರವಾಗಿದೆಯಷ್ಟೇ ಅಲ್ಲ ಹೃದಯವನ್ನೇ ಸೂರೆಗೊಳ್ಳುವಂತಿದೆ.

ಶುದ್ಧೋದನ : (ಗೆಲುವಿನ ನಗೆಯೊಂದಿಗೆ ) ಹಾಗೆ ಬಾ ದಾರಿಗೆ !

## ದೃಶ್ಯ ೪

(ಸಂದರ್ಭ: ಯಶೋಧರೆ ಮಗುವನ್ನು ಆಲಿಂಗಿಸಿಕೊಂಡು ಹಾಯಾಗಿ ನಿದ್ರಿಸುತ್ತಿರುವಳು. ಆದರೆ ಸಿದ್ಧಾರ್ಥನಿಗೆ ನಿದ್ರೆಯಿಲ್ಲ. ಅಶಾಂತ ಮನಸ್ಕನಾಗಿ ತಾಯಿ - ಮಗುವನ್ನು ತದೇಕ ದೃಷ್ಟಿಯಿಂದ ನೋಡುವನು.)

ಸಿದ್ಧಾರ್ಥ : (ಸ್ವಗತ) ಈ ಸುಖ ಶಾಶ್ವತವಲ್ಲ. ನನ್ನ ಯಶೋಧರೆ, ಈ ಮಗು ರಾಹುಲ, ಗೌತಮಿ ಚಿಕ್ಕಮ್ಮ. ಅಪ್ಪ ಮತ್ತು ಈ ಸಾಮ್ರಾಜ್ಯ..... ಯಾವುದೂ ಶಾಶ್ವತವಲ್ಲ! (ತಳಮಳಗೊಂಡು ಅತ್ತಿತ್ತ ಅಡ್ಡಾಡುವನು) ಜನ ಎಷ್ಟು ನೋವು ಸಂಕಟಗಳಿಂದ ನರಳುತ್ತಿದ್ದಾರೆ! ಹಾಗಿರುವಾಗ ನಾನು, ನನ್ನ ಸುಖದ ಭ್ರಮೆಯಲ್ಲಿ ಮುಳುಗಿರಲೇ? ಹೇಗೆ ಸಾಧ್ಯ? ಕುಳಿತಲ್ಲಿ, ನಿಂತಲ್ಲಿ, ಜನರ ನೋವು ತುಂಬಿದ ಮುಖಗಳೇ ಕಂಡು ಬರುತ್ತಿರುವಾಗ! ಏನು ಕಾರಣ, ಈ ದುಃಖಕ್ಕೆ..... ಈ ಅಪಾರ ದುಃಖಕ್ಕೆ ಏನು ಕಾರಣ? ಹೌದು ಜನರ ನೋವು ಸಂಕಟಗಳಿಗೆ ಕಾರಣ ಹುಡುಕಬೇಕು! ಪರಿಹಾರ ಕಾಣಬೇಕು!

ಹಿನ್ನೆಲೆ ದನಿ : ಇದೇ ಸುಸಮಯ ಸಿದ್ಧಾರ್ಥ, ಎದ್ದೇಳು. ಮೋಹದ ಬಲೆ ಇನ್ನೊಮ್ಮೆ ಬಂಧಿಸುವ ಮೊದಲು ಎದ್ದು ಬಿಡು! ಹೋಗು..... ಹೊರಟು ಹೋಗು...... ಸಮಷ್ಟಿ ಸುಖಕ್ಕಾಗಿ ವೈಯಕ್ತಿಕ ಸುಖವನ್ನು ತ್ಯಜಿಸು.....! ತ್ಯಜಿಸಿ ಬಿಡು ಸಿದ್ಧಾರ್ಥ.....

ಸಿದ್ಧಾರ್ಥ : (ಗೊಂದಲದಿಂದ) ಆದರೆ ನನಗೆ ಜನ್ಮನೀಡಿದ ತಂದೆಗೆ, ಮಮತೆ ತೋರಿದ ತಾಯಿಗೆ, ಪ್ರೇಮ ತೋರಿದ ಮಡದಿಗೆ, ಅಕ್ಕರೆಯ ಮಗುವಿಗೆ, ದ್ರೋಹ ಬಗೆದಂತಾಗುವುದಿಲ್ಲವೇ....

ಹಿನ್ನೆಲೆದನಿ : ಅದು ಅನಿವಾರ್ಯ. ಲೋಕವನ್ನು ಬೆಳಗುವ ದೀಪದಡಿ ಕತ್ತಲು ಅನಿವಾರ್ಯ. ಆದರೆ ಕ್ರಮೇಣ ಅಲ್ಲಿಯೂ ಬೆಳಕಾಗುವುದು. ಬಿಟ್ಟುಬಿಡು ಸಿದ್ಧಾರ್ಥ, ಕ್ಷಣಿಕ ಸುಖದ ಮೋಹವನ್ನು. ಅದೋ ಅಲ್ಲಿದೆ ಶಾಶ್ವತ ಬೆಳಕು. ನಡೆ ಮುಂದೆ. ಮತ್ತೆ ಮುನ್ನಡೆಸು ಜನರನ್ನು..... ಬೆಳಕಿನೆಡೆಗೆ...... ಬೆಳಕಿನೆಡೆಗೆ......... ಬೆಳಕಿನೆಡೆಗೆ........

(ಸಿದ್ಧಾರ್ಥನು ದೃಢ ಹೆಜ್ಜೆಯನ್ನು ಇಟ್ಟು ಮೆಲ್ಲಗೆ ಮುನ್ನಡೆಯುತ್ತಿದ್ದಂತೆಯೇ ತೆರೆ ಬೀಳುವುದು.)

## ಲೇಖಕರ ಪರಿಚಯ



ಲೀಲಾ ಮಣ್ಣಾಲ ಇವರು ೧೯೫೩ ಜೂನ್ ೨೦ ರಂದು ಪುತ್ತೂರಿನ ಮಣ್ಣಾಲದಲ್ಲಿ ಜನಿಸಿದರು. ತಂದೆ ಗಿಳಿಯಾಲ ಈಶ್ವರ ಭಟ್, ತಾಯಿ ಪಾರ್ವತಿ. ಹೊಣೆ ಮತ್ತು ಇತರ ಕತೆಗಳು, ತೆರೆ, ಮುಸ್ಸಂಜೆಯ ಹಕ್ಕಿಗಳು, ಮತ್ತೆ ಬಂದಿದೆ ಯುಗಾದಿ ಇವರ ಕಥಾ ಸಂಕಲನಗಳಾಗಿವೆ. ವಿಭಿನ್ನರು ಮತ್ತು ಅನಾವರಣ, ನಿಮ್ಮ ನಿನಾದ, ಕೆಂಪು ಚಿನ್ನ ಕಾದಂಬರಿಗಳಾಗಿವೆ. ನವರಸಾಭಿನಯ, ರಸವರ್ಷ, ಭಾವರಸಧಾರೆ ಇವರ ನಾಟಕ ಕೃತಿಗಳು. ಪಿಂಕಿಯ ಪ್ರಪಂಚ, ಬಾ ಕಂದ ಹಾಡೋಣ, ಪುಣ್ಯಕೋಟಿ, ಜೀಮೂತವಾಹನ ಮುಂತಾದವು ಬಾಲ ಸಾಹಿತ್ಯಗಳಾಗಿವೆ. ನಿರಂತರ ಸತ್ಯ - ಬಾಪೂ ಬದುಕಿನ ಸ್ವಾರಸ್ಯಗಳು, ಮಹರ್ಷಿ ದಯಾನಂದ ಸರಸ್ವತಿ - ಬದುಕು ಮತ್ತು ವಿಚಾರಧಾರೆ ಜೀವನ ಚಿತ್ರಣಗಳು. ಪಾಕಶಾಸ್ತ್ರಕ್ಕೆ ಸಂಬಂಧಿಸಿದಂತೆ 'ಸ್ವಾದಿಷ್ಟ ಉಪಾಹಾರ - ವರ್ಷವಿಡೀ ವೈವಿಧ್ಯ' ಕೃತಿಯನ್ನು ಪ್ರಕಟಿಸಿದ್ದಾರೆ. 'ನಿಮ್ಮ ನಿನಾದ' ಕಾದಂಬರಿಗೆ ರತ್ನಮ್ಮ ಹೆಗ್ಗಡೆ ಪ್ರಶಸ್ತಿ, 'ಕೆಂಪು ಚಿನ್ನ' ಕಾದಂಬರಿಗೆ ಎಂ.ಕೆ. ಇಂದಿರಾ ಪ್ರಶಸ್ತಿ ಲಭಿಸಿದೆ.

'ಮುನ್ನಡೆಸು ಬೆಳಕಿನೆಡೆಗೆ' ಎನ್ನುವ ನಾಟಕವನ್ನು ಇವರ 'ರಸವರ್ಷ' ಎಂಬ ನಾಟಕ ಸಂಕಲನದಿಂದ ಆರಿಸಲಾಗಿದೆ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಸಿದ್ಧಾರ್ಥನು ತನ್ನ ಯಾವ ಹಂಬಲವನ್ನು ಶುದ್ಧೋದನನಲ್ಲಿ ತಿಳಿಸಿದನು?
2. ಸಿದ್ಧಾರ್ಥನು ನಗರ ಪ್ರದಕ್ಷಿಣೆಗೆ ಬರುವಾಗ ನಗರವನ್ನು ಹೇಗೆ ಇರಿಸಬೇಕೆಂದು ಶುದ್ಧೋದನನು ಮಂತ್ರಿಗೆ ಆಜ್ಞಾಪಿಸಿದನು?
3. ಮರದಷ್ಟು ಎತ್ತರ ಮನುಷ್ಯನೇಕೆ ಇಲ್ಲ ಎಂಬ ಸಿದ್ಧಾರ್ಥನ ಪ್ರಶ್ನೆಗೆ ಚೆನ್ನ ಏನೆಂದು ಉತ್ತರಿಸಿದನು?
4. ವೃದ್ಧನನ್ನು ಕಂಡ ಸಿದ್ಧಾರ್ಥನು ಚೆನ್ನನಲ್ಲಿ ಏನೆಂದು ಪ್ರಶ್ನಿಸಿದನು?
5. ಪುತ್ರೋತ್ಸವದ ಅಂಗವಾಗಿ ಇಡೀ ರಾಜ್ಯಕ್ಕೆ ಸಿಹಿ ಹಂಚುವ ಏರ್ಪಾಡಿನ ಬಗ್ಗೆ ಸಿದ್ಧಾರ್ಥನ ಅಭಿಪ್ರಾಯ ಏನಾಗಿತ್ತು?

## ಅಭಿಪ್ರಾಯ ಬರೆಯಿರಿ

'ಮುನ್ನಡೆಸು ಬೆಳಕಿನೆಡೆಗೆ' ಎಂಬ ಶೀರ್ಷಿಕೆ ಈ ನಾಟಕಕ್ಕೆ ಒಪ್ಪುತ್ತದೆಯೇ? ನಿಮ್ಮ ಅಭಿಪ್ರಾಯವನ್ನು ಸಮರ್ಥಿಸಿ ಬರೆಯಿರಿ.

## ಪಾತ್ರಚಿತ್ರಣ ಮಾಡಿರಿ

ಈ ನಾಟಕದಲ್ಲಿ ಬಂದಿರುವ ಸಿದ್ಧಾರ್ಥನ ಪಾತ್ರ ಚಿತ್ರಣ ಮಾಡಿರಿ.

## ಕಥಾರೂಪಕ್ಕೆ ಪರಿವರ್ತಿಸಿರಿ

ಈ ನಾಟಕವನ್ನು ಕಥಾರೂಪಕ್ಕೆ ಪರಿವರ್ತಿಸಿ ಬರೆಯಿರಿ.

## ಭಿತ್ತಿ ಪತ್ರ ರಚಿಸಿರಿ

ನಿಮ್ಮ ಶಾಲೆಯಲ್ಲಿ ಪ್ರದರ್ಶನಗೊಳ್ಳಲಿರುವ 'ಮುನ್ನಡೆಸು ಬೆಳಕಿನೆಡೆಗೆ' ಎಂಬ ನಾಟಕದ ಪ್ರಚಾರಾರ್ಥವಾಗಿ ಒಂದು ಭಿತ್ತಿ ಪತ್ರವನ್ನು ರಚಿಸಿರಿ.

## ಸಂಭಾಷಣೆ ಬರೆಯಿರಿ

ನೀವು ಬಸ್ಸಿನಲ್ಲಿ ಪ್ರಯಾಣಿಸುವ ಸಂದರ್ಭದಲ್ಲಿ ನಿಮ್ಮ ಪಕ್ಕದಲ್ಲಿ ಕುಳಿತವರು ಕನ್ನಡದ ನಾಟಕ ಕೃತಿಯೊಂದನ್ನು ಓದುತ್ತಿದ್ದಾರೆ ಎಂದು ಭಾವಿಸಿಕೊಳ್ಳಿರಿ. ಆ ನಾಟಕದ ಹೆಸರು, ಕರ್ತೃ, ವಸ್ತು, ಅವರು ಮೆಚ್ಚಿದ ಕಥಾಪಾತ್ರ, ಕೃತಿಯ ಕುರಿತಾದ ಅಭಿಪ್ರಾಯ ಇತ್ಯಾದಿಗಳನ್ನು ತಿಳಿಯಲು ನಿಮಗೆ ಆಸಕ್ತಿಯಿದೆ ಎಂದು ಊಹಿಸಿಕೊಳ್ಳಿರಿ. ಅವರಲ್ಲಿ ನೀವು ಕೇಳಬಹುದಾದ ಪ್ರಶ್ನೆಗಳು ಮತ್ತು ಅದಕ್ಕೆ ಅವರು ನೀಡಬಹುದಾದ ಉತ್ತರಗಳನ್ನು ಕಲ್ಪಿಸಿಕೊಂಡು ಸಂಭಾಷಣೆಯನ್ನು ರಚಿಸಿರಿ. ತಲಾ ಐದೈದು ಮಾತುಗಳಿರಲಿ.

## ಅಭಿನಯಿಸಿರಿ

'ಮುನ್ನಡೆಸು ಬೆಳಕಿನೆಡೆಗೆ' ನಾಟಕದ ಪಾತ್ರಗಳನ್ನು ತರಗತಿಯಲ್ಲಿ ಹಂಚಿಕೊಂಡು ಅಭಿನಯಿಸಿರಿ.

# ಪದಕೋಶ

| | | |
|---|---|---|
| ಅಂಕ | - | ಯುದ್ಧ |
| ಅಂಗಜ | - | ಮನ್ಮಥ, ಬಾಹುಬಲಿ |
| ಅಂಡಲೆ | - | ಅಲೆದಾಡು, ಕಷ್ಟಕ್ಕೆ ಒಳಗಾಗು |
| ಅಂಜು | - | ಹೆದರು,ಭಯಪಡು |
| ಅಂತರ್ಮುಖಿ | - | ಮನಸ್ಸು ಒಳಮುಖಿಯಾಗಿರುವುದು |
| ಅಂತರಂಗ | - | ಮನಸ್ಸು |
| ಅಂತಃಪುರ | - | ರಾಣೀವಾಸ |
| ಅಗಲು | - | ಬೇರೆಯಾಗು |
| ಅಜಗಜಾಂತರ | - | ಆಡಿಗೂ ಆನೆಗೂ ಇರುವ ವ್ಯತ್ಯಾಸ, ಒಂದಕ್ಕೊಂದಕ್ಕೆ ಸಾಮಂಜಸ್ಯ ಇಲ್ಲದೆ ಇರುವುದು |
| ಅಜ್ಞಾತವಾಸ | - | ಯಾರಿಗೂ ತಿಳಿಯದಂತೆ ವಾಸ ಮಾಡುವುದು ತಲೆಮರೆಸಿಕೊಂಡಿರುವುದು |
| ಅರ್ತಿ | - | ಪ್ರೀತಿ |
| ಅದ್ರಿ | - | ಪರ್ವತ |
| ಅನನ್ಯ | - | ಅಸಾಧಾರಣ, ಎರಡಿಲ್ಲದ |
| ಅನಾವರಣ | - | ಆವರಣ ತೆಗೆದ; ಮರೆಯನ್ನು ಸರಿಸಿದ |
| ಅನುರಣಿಸು | - | ಪ್ರತಿಧ್ವನಿಸು |
| ಅನುಸಂಧಾನ | - | ಪರಿಶೀಲನೆ |
| ಅಭ್ಯುದಯ | - | ಅಭಿವೃದ್ಧಿ |
| ಅಬ್ಬಿ | - | ಜಲಪಾತ |
| ಅಮೂಲ್ಯ | - | ಬೆಲೆಬಾಳುವ, ಬೆಲೆ ಕಟ್ಟಲಾಗದ |
| ಅರಿಕೆ | - | ಬಿನ್ನಹ, ವಿಜ್ಞಾಪನೆ |
| ಅರಿದಂಗೆ | - | ತಿಳಿದವರಿಗೆ |
| ಅಸ್ಥಿರ | - | ನೆಲೆಯಿಲ್ಲದ, ಭದ್ರವಲ್ಲದ |
| ಅಸ್ಥಿರತೆ | - | ಸ್ಥಿರವಿಲ್ಲದಿರುವಿಕೆ |
| ಅಸು | - | ಪ್ರಾಣ |
| ಅಶ್ರುಜಲ | - | ಕಣ್ಣೀರು |
| ಅಳುಕು | - | ಅಂಜು , ಹೆದರು |

| | | |
|---|---|---|
| ಆಂತರ್ಯ | - | ಅಂತರಂಗದ ರಹಸ್ಯ, ಅಂತರಂಗ |
| ಆಂದೋಲನ | - | ಚಳವಳಿ; ಕ್ರಾಂತಿ |
| ಆಣತಿ | - | ಆಜ್ಞೆ , ಆದೇಶ |
| ಆರ್ದ್ರತೆ | - | ತೇವಾಂಶ |
| ಆನತ | - | ಬಾಗಿದ, ಶರಣಾದ, ನಮಸ್ಕರಿಸಿದ |
| ಆಯ | - | ಗುಟ್ಟು, ಆದಾಯ,ಉದ್ದೇಶ |
| ಆಯನ | - | ಜಾತ್ರೆ |
| ಆರಯ್ದು | - | ಆಲೋಚಿಸಿ, ವಿವೇಚಿಸಿ, ಸ್ಪಷ್ಟವಾಗಿ ತಿಳಿದು |
| ಆರು | - | ನೊಗ, ನೇಗಿಲು ಮತ್ತು ಎತ್ತುಗಳ ಜೋಡಿ, ಒಂದು ಸಂಖ್ಯಾವಾಚಕ |
| ಆಶ್ವಾಸನೆ | - | ಭರವಸೆ |
| ಆಸ್ಥೆ | - | ಶ್ರದ್ಧೆ, ಗಮನ |
| ಆಳಿ | - | ಸಮೂಹ |
| ಇಂಗಿತ | - | ಆಶಯ, ಮನೋಗತ |
| ಇಡಿದು | - | ತುಂಬಿದ, ನಿಬಿಡವಾದ |
| ಇದಿರು | - | ಅಭಿಮುಖ, ಸಮ್ಮುಖ |
| ಇಳುಕಲು | - | ಇಳಿಜಾರಾದ ಪ್ರದೇಶ |
| ಈಡು | - | ಗುರಿ, ಲಕ್ಷ್ಯ |
| ಉಂಬಳಿ | - | ವಂಶಪಾರಂಪರ್ಯವಾಗಿ ಅನುಭವಿಸುವುದಕ್ಕಾಗಿ ಬಳುವಳಿಯಾಗಿ ಬಂದ ಭೂಮಿ |
| ಉದಕ | – | ನೀರು, ಜಲ |
| ಉದರ | - | ಹೊಟ್ಟೆ |
| ಋಣ | - | ಸಾಲ, ಹಂಗು, ಉಪಕಾರ |
| ಎಣೆ | - | ಹೋಲಿಕೆ; ಒಂದೇ ರೀತಿಯ ಸ್ಥಿತಿ ,ಸಮಾನ |
| ಎಡೆ | - | ಪ್ರದೇಶ, ಜಾಗ, ಸಂದರ್ಭ |
| ಎರಗು | - | ಬಾಗು, ನಮಸ್ಕರಿಸು |
| ಎಸೆ | - | ಶೋಭಿಸು |
| ಏಕಪ್ರಕಾರ | - | ಒಂದೇ ಸಮನೆ |
| ಐದು (ಎಯ್ದು) | - | ಬರು, ಸೇರು |
| ಒಗೆಯು | - | ಬಿಸಾಡು, ಎಸೆಯು |
| ಒಡವೆ | - | ಆಭರಣ, ಐಶ್ವರ್ಯ |
| ಒಡಲು | - | ಶರೀರ, ದೇಹ |

| | | |
|---|---|---|
| ಒಲುಮೆ | - | ಪ್ರೀತಿ, ಅನುಗ್ರಹ |
| ಒಲೆ | - | ತೊನೆ, ತೂಗಾಡು, ಶೋಭಿಸು, ಅಲ್ಲಾಡಿಸು |
| ಔದಾರ್ಯ | - | ಉದಾರಹೃದಯ; ಉದಾರ ಗುಣ |
| ಕಂತು | - | ಚುಚ್ಚು, ನಾಟು( ಕ್ರಿ) ಮನ್ಮಥ, ಬಾಹುಬಲಿ (ನಾ) |
| ಕಂಪನ್ನ | - | ಪರಿಮಳಭರಿತ ಅಕ್ಕಿ |
| ಕಂಪು | - | ಸುಗಂಧ, ಪರಿಮಳ |
| ಕಜ್ಜ | - | ಕಾರ್ಯ |
| ಕಟಕ | - | ಸೈನ್ಯ |
| ಕಠಿಣ | - | ಕಷ್ಟ |
| ಕಣಿವೆ | - | ಎರಡು ಬೆಟ್ಟಗಳ ನಡುವಿನ ಇಕ್ಕಟ್ಟಾದ ಮತ್ತು ಆಳವಾದ ಪ್ರದೇಶ, ಕಂದರ |
| ಕಯ್ಪೆರಸ | - | ಕಹಿಯಾದ ರಸ |
| ಕರತಲಾಮಲಕ | - | ಬಹಳ ಸುಲಭವಾಗಿ ಸಾಧ್ಯವಾಗುವಂಥದ್ದು, ಅಂಗೈನೆಲ್ಲಿಕಾಯಿ |
| ಕರುಬು | - | ಹೊಟ್ಟೆಕಿಚ್ಚು ಪಡು, ಮತ್ಸರಿಸು |
| ಕಷ್ಟ | - | ನೀಚ, ಕಡೆ, ತೊಂದರೆ, ಕಠಿಣ |
| ಕಳವಳ | - | ಚಿಂತೆ, ಆತಂಕ, ತಲ್ಲಣ |
| ಕಾಂಬರು | - | ಕಾಣುವರು, ತಿಳಿಯುವರು |
| ಕಾಟಿ | - | ಕಾಡೆಮ್ಮೆ ಅಥವಾ ಕಾಡುಕೋಣ |
| ಕಾಜಾಣ | - | ಒಂದು ಬಗೆಯ ಪಕ್ಷಿ |
| ಕಾಮಳ್ಳಿ | - | ಒಂದು ಬಗೆಯ ಪಕ್ಷಿ |
| ಕಾರಣೀಭೂತ | - | ಕಾರಣವಾದ |
| ಕಾಳಗ | - | ಯುದ್ಧ, ಹೋರಾಟ |
| ಕಿವಿಹೆರೆ | - | ಕರ್ಣಪಟಲ |
| ಕುಜನಮಾರ್ಗ | - | ದುರ್ಜನರ ಹಾದಿ, ಕೆಟ್ಟದಾರಿ |
| ಕುಟಾಣಿ | - | ಕುಟ್ಟಣ; ಎಲೆ ಅಡಿಕೆ ಮುಂತಾದವನ್ನು ಕುಟ್ಟುವ ಹಿತ್ತಾಳೆ ಅಥವಾ ಕಬ್ಬಿಣದ ಸಾಧನ |
| ಕುತ್ತಿ | - | ಮರವನ್ನು ಕಡಿದಾದ ಮೇಲೆ ಬುಡದಲ್ಲಿ ಉಳಿಯುವ ತುಂಡು |
| ಕೆಂಪನಿಂಡಿ | - | ಕೆಂಪು ಮೆಣಸಿನ ಕಾಯಿ ಚಟ್ನಿ |
| ಕೊಟ್ಟಿಗೆ | - | ಹಟ್ಟಿ, ದೊಡ್ಡಿ |
| ಕೋಡಿಬೀಳು | - | ಕೆರೆ ತುಂಬಿ ಹರಿಯುವುದು |
| ಕೋದು | - | ಪೋಣಿಸಿ |

| | | |
|---|---|---|
| ಕೋಲ | - | ಭೂತಗಳಿಗೆ ಸಲ್ಲಿಸುವ ಸೇವೆ, ಹರಕೆ, ಭೂತನರ್ತನ |
| ಖಚರ | - | ಗಂಧರ್ವ, ಆಕಾಶದಲ್ಲಿ ಸಂಚರಿಸುವ |
| ಖಚರಪತಿ | - | ಯಕ್ಷರಾಜ |
| ಖೋಡಿ | - | ತಪ್ಪು,ಕುಂದು |
| ಗಗನಚುಂಬಿ | - | ಅತಿ ಎತ್ತರದ, ಆಗಸಕ್ಕೆ ಮುತ್ತಿಡುವ |
| ಗಜ | - | ಒಂದು ಅಳತೆ, ಎರಡು ಮೊಳ; ಮೂರು ಅಡಿ ಉದ್ದ, ಆನೆ |
| ಗಜಬಜಿಸು | - | ಗದ್ದಲಮಾಡು , ಆತಂಕ ಪಡು |
| ಗಡಿಬಿಡಿ | - | ಗೊಂದಲ |
| ಗಣ | - | ಸಮೂಹ, ಗುಂಪು |
| ಗಬ್ಬರಿಸು | - | ವ್ಯಾಪಿಸು, ಹರಡು |
| ಗಾಡಿ | - | ಗಾಂಭೀರ್ಯ, ಸೌಂದರ್ಯ |
| ಗುಪ್ತಗಾಮಿನಿ | - | ಕಣ್ಣಿಗೆ ಕಾಣದೆ ಹರಿಯುವ |
| ಘಟಿತ | - | ಕೂಡಿದ, ಸೇರಿದ |
| ಘನತೆ | - | ಹಿರಿಮೆ, ಶ್ರೇಷ್ಠತೆ |
| ಚರಣ | - | ಪದ್ಯಗಳ ಸಾಲು,ಪಂಕ್ತಿ |
| ಚಾಮರ | - | ಚಮರೀ ಮೃಗದ ಕೂದಲಿನಿಂದ ಮಾಡಿದ ಬೀಸಣಿಗೆ |
| ಚಿತ್ತ | - | ಮನಸ್ಸು |
| ಜಂಬರ | - | ಕೆಲಸ, ಉದ್ಯೋಗ |
| ಜರ್ಜರ | - | ಶಕ್ತಿ ಕುಂದಿದ, ಛಿದ್ರ,ಛಿದ್ರವಾದುದು, ಮಾಸಿದ, ಒಡೆದ |
| ಜಬರದಸ್ತು ಮಾಡು | - | ಬಲ ಪ್ರಯೋಗ ಮಾಡು, ಜೋರು ಮಾಡು |
| ಜಾಡು | - | ಸುಳಿವು, ಗುರುತು |
| ಜಿಹ್ವೆ | - | ನಾಲಿಗೆ |
| ಜುಗುಪ್ಸೆ | - | ಅಸಹ್ಯ, ತಿರಸ್ಕಾರ |
| ಜೋಡು | - | ಜೊತೆ |
| ತಂಡಿ | - | ಚಳಿ, ತಂಪು, ಒದ್ದೆ |
| ತಣಸು | - | ತಂಪು |
| ತನುಜ | – | ಮಗ, ಸುತ |
| ತರಂಗಿತ | - | ಅಲೆ ಅಲೆಯಾದ, ದಟ್ಟೈಸಿದ |
| ತಾವು | - | ಎಡೆ, ಸ್ಥಳ |
| ತಾಲೀಮು | - | ಪೂರ್ವಾಭ್ಯಾಸ |

| | | |
|---|---|---|
| ತಿಳಿವು | - | ಅರಿವು |
| ತೇನೆ | - | ಒಂದು ಬಗೆಯ ಹಕ್ಕಿ |
| ತೊಡಕು | - | ಮುಲಾಜು |
| ತೊಯ್ದು | - | ಒದ್ದೆಯಾಗಿ |
| ದಾಯಾದ್ಯರು | - | ರಕ್ತ ಸಂಬಂಧಿಕರು,  ಅಣ್ಣತಮ್ಮಂದಿರ ಮಕ್ಕಳು. |
| ದಾಕ್ಷಿಣ್ಯ | - | ಋಣ, ಮತ್ತೊಬ್ಬರಿಗೆ ನೋವು ನೀಡದ ಮನೋಭಾವ |
| ದಿಗಿಲು | - | ಭಯ, ಆತಂಕ |
| ದಿಙ್ಮೂಢ | - | ದಿಕ್ಕು ತೋಚದ |
| ದಿನಪತಿ | - | ಸೂರ್ಯ |
| ದೀಕ್ಷೆ | - | ವ್ರತ |
| ದೀನ | - | ದರಿದ್ರ, ಬಡವ |
| ದುಗುಡ | - | ದುಃಖ, ಬೇಸರ |
| ದುರ್ಗ | - | ಕೋಟೆ |
| ದುಷ್ಕೃತ | - | ಕೆಟ್ಟ ಕೆಲಸ, ಪಾಪ ಕಾರ್ಯ |
| ದೇವಪ್ರತತಿ | - | ದೇವತೆಗಳ ಸಮೂಹ |
| ದ್ಯೋತಕ | - | ಹೇಳುವಂತಹ,ಸೂಚಕ |
| ಧನಪತಿ | - | ಶ್ರೀಮಂತ, ಕುಬೇರ, ಸಂಪತ್ತಿನ ಒಡೆಯ |
| ಧರ್ಮಸುತ | – | ಯಮಧರ್ಮರಾಯನ ಮಗ, ಯುಧಿಷ್ಠಿರ |
| ಧೂರ್ತರು | - | ದುಷ್ಟರು , ವಂಚಕರು |
| ನನ್ನಿ | - | ನಿಜ, ಸಮಂಜಸ |
| ನಲುಗು | - | ಮುದುರು, ಕೊರಗು, ಅಲ್ಲಾಡು |
| ನಾಟಿ | - | ದೇಶೀಯವಾದ, ಸ್ವದೇಶಿ |
| ನಾಜೂಕು | - | ಕೋಮಲ; ಅಚ್ಚುಕಟ್ಟು, ಓರಣ |
| ನಿರ್ದೇಶಕ | - | ಆಡಳಿತಗಾರ , ಮೇಲ್ವಿಚಾರಕ, ಮಾರ್ಗದರ್ಶಕ |
| ನಿರಾಹಾರ | - | ಆಹಾರವಿಲ್ಲದ |
| ನಿಶಿತ | - | ಹರಿತವಾದ, ಚೂಪಾದ |
| ನುಗ್ಗುನುರಿ | - | ಚೂರುಚೂರು, ಪುಡಿಪುಡಿ |
| ನುಣ್ಣಗೆ | - | ನಯವಾಗಿ, ಅಂದವಾಗಿ |
| ನೇಗಿಲೋಳಿ | - | ನೇಗಿಲಿನಿಂದ ಉಳುವಾಗ ಉಂಟಾದ ಸಾಲು |
| ನೇಮ | - | ವ್ರತ, ಕರಾವಳಿಯಲ್ಲಿ ವರ್ಷಕೊಮ್ಮೆ ನಡೆಸುವ ದೈವದ ಕೋಲ |

| | | |
|---|---|---|
| ನೈಜ | - | ಸ್ವಾಭಾವಿಕ |
| ನೃಪತಿ | - | ಭೂಮಿಯ ಒಡೆಯ, ರಾಜ |
| ಪಟು | - | ಶೂರ, ಸಮರ್ಥ |
| ಪಡೆದಳು | - | ಹಡೆದವಳು , ತಾಯಿ |
| ಪರಸು | - | ಹರಸು |
| ಪರಿವೀಕ್ಷಿಸು | - | ಪರಿಶೀಲನೆ ಮಾಡು; ಸಮೀಕ್ಷೆ ಮಾಡು, |
| ಪರಾಕಾಷ್ಠೆ | - | ತುತ್ತತುದಿ |
| ಪವನ | - | ವಾಯು, ಗಾಳಿ, ಉಸಿರು |
| ಪಾಟಿ | - | ಸಮಾನ |
| ಪಾಯ | - | ಬುನಾದಿ, ಅಡಿಪಾಯ |
| ಪಾವನ | - | ಪರಿಶುದ್ಧವಾದ |
| ಪಿತ್ರಾರ್ಜಿತ | - | ಹಿರಿಯರಿಂದ ಗಳಿಸಲ್ಪಟ್ಟ |
| ಪುಷ್ಪಬಾಣ | - | ಮನ್ಮಥ, ಬಾಹುಬಲಿ. |
| ಪುಳಕ | - | ರೋಮಾಂಚನ ,ಮೈ,ನವಿರೇಳುವಿಕೆ |
| ಪೋಷಾಕು | - | ಉಡುಪು |
| ಪ್ರವರ್ಧಮಾನ | - | ಪ್ರಗತಿ ಹೊಂದುವ |
| ಪ್ರವೃತ್ತಿ | - | ಸ್ವಭಾವ, ಒಲವು , ಪ್ರವಣತೆ |
| ಪ್ರಾಜ್ಞ | - | ಬುದ್ಧಿವಂತ ವ್ಯಕ್ತಿ, ಕಲಿತ ವ್ಯಕ್ತಿ, ವಿದ್ವಾಂಸ |
| ಪ್ರಾಪ್ತರು | - | ಯೋಗ್ಯರು, ಸಮರ್ಥರು |
| ಬಕುಳ | - | ಒಂದು ಬಗೆಯ ಮರ ಮತ್ತು ಅದರ ಹೂವು, ನಾಗಕೇಸರ |
| ಬಣ್ಣಿಸು | - | ವಿವರಿಸು, ವರ್ಣಿಸು, ಹೊಗಳು |
| ಬಲಿಯು | - | ಪಕ್ವಗೊಳ್ಳು |
| ಬಳುವಳಿ | - | ಉಡುಗೊರೆ; ಕೊಡುಗೆ |
| ಬಿಕ್ಕಟ್ಟು | - | ಕಷ್ಟ, ತೊಂದರೆ |
| ಬಿಗಿಮಾಡು | - | ನಿಯಂತ್ರಣದಲ್ಲಿಟ್ಟುಕೊಳ್ಳು |
| ಬಿತ್ತರ | - | ವಿಸ್ತಾರ, ಹರಹು |
| ಬಿಸುಪು | - | ಶಾಖ |
| ಬೆಡಗು | - | ಅಂದಚಂದ, ಸೊಗಸುಗಾರಿಕೆ, ಸೊಬಗು |
| ಬೇಸ್ತ್ವಾರ | - | ಗುರುವಾರ |
| ಬೊಪ್ಪ | - | ತಂದೆ, ಜನಕ |

| | | |
|---|---|---|
| ಭಾನಗಡಿ | - | ಗೊಂದಲ,ತೊಡಕು |
| ಭೂಪಾಲ | - | ಭೂಮಿಯನ್ನು ಕಾಪಾಡುವವನು, ರಾಜ |
| ಭ್ರಮನಿರಸನ | – | ನಿರಾಶೆ, ಆಶಾಭಂಗ, ಭ್ರಮೆ ದೂರವಾಗುವುದು |
| ಮರ್ಜಿ | - | ಆಡಂಬರದ ರೀತಿ , ತೇಜು |
| ಮಣ್ಣುಮಾಡು | - | ಶವಸಂಸ್ಕಾರ ಮಾಡು, ಸಮಾಧಿ ಮಾಡು. |
| ಮತ | - | ಅಭಿಪ್ರಾಯ, ಧರ್ಮ |
| ಮದ | - | ಅಹಂಕಾರ |
| ಮನ್ನಿಸು | - | ಗೌರವಿಸು, ಕ್ಷಮಿಸು, ದಯಪಾಲಿಸು, ಅಂಗೀಕರಿಸು |
| ಮರಣ ಶಯ್ಯೆ | - | ಬದುಕಿನ ಕೊನೆ, ಮರಣ ಕಾಲಕ್ಕೆ ಹಾಸಿಗೆ ಹಿಡಿಯುವ ಸ್ಥಿತಿ |
| ಮಲೆ | - | ಬೆಟ್ಟ, ಬೆಟ್ಟವನ್ನು ಆವರಿಸಿದ ಕಾಡು, ಬೆಟ್ಟಸೀಮೆಯ ಪ್ರದೇಶ |
| ಮಸಣ | - | ಸ್ಮಶಾನ |
| ಮಹೀಪತಿ | - | ಭೂಮಿಯ ಒಡೆಯ, ರಾಜ |
| ಮುಂಕೊಳು | - | ಆರಂಭಿಸು |
| ಮುಂಗಟ್ಟೆ | - | ಅಂಗಡಿ, ಮನೆ ಮುಂತಾದವುಗಳ ಮುಂಭಾಗದಲ್ಲಿ ಕಟ್ಟಿದ ಕಟ್ಟಡ |
| ಮುಂಜಿ | - | ಉಪನಯನ |
| ಮುಲಾಜು | - | ಹಂಗು, ಋಣ |
| ಮೃಡ | - | ಶಿವ |
| ಮೆಲ್ಲಡಿ | - | ಮೃದುವಾದ ಪಾದ |
| ಮೇಲುಗಾಣು | - | ಯೋಗ್ಯವಾದದನ್ನು ಅರಿತುಕೊಳ್ಳು |
| ಮೊಗ | - | ಮುಖ |
| ಮೊರೆ | - | ಕೂಗು |
| ಮೋಹನಾಂಗ | - | ಸುಂದರ ಶರೀರ ಇರುವವ . |
| ಯಜ್ಞ | - | ಹೋಮ |
| ಯಮತನುಜ | - | ಯಮನ ಮಗ, ಧರ್ಮರಾಜ |
| ಯಾತನೆ | - | ನೋವು |
| ರಕ್ತಗತ | - | ರಕ್ತದಲ್ಲಿ ಸೇರಿರುವ |
| ರುಂಡ | - | ಶಿರಸ್ಸು, ತಲೆ |
| ರೂಢಿ | - | ವಾಡಿಕೆ, ಬಳಕೆ, ಅಭ್ಯಾಸ |
| ಲದ್ದಿ | - | ಆನೆ, ಕುದುರೆ ಮುಂತಾದ ಪ್ರಾಣಿಗಳು ವಿಸರ್ಜಿಸಿದ ಮಲದ ಮುದ್ದೆ |
| ಲೀನವಾಗು | - | ಯಾವುದಾದರೊಂದು ವಿಷಯದಲ್ಲಿ ಮುಳುಗು, ಮಗ್ನವಾಗು, ಆಸಕ್ತವಾಗು |

| | | |
|---|---|---|
| ಲೇಸು | - | ಒಳ್ಳೆಯದು |
| ವರಸೆ | - | ಭಂಗಿ, ರೀತಿ, ಸಂಬಂಧ |
| ವಿನಾಶಿ | - | ನಾಶ ಹೊಂದುವ |
| ವಿಪ್ರ | – | ಬ್ರಾಹ್ಮಣ |
| ವಿಪಿನ | - | ಅಡವಿ, ಕಾಡು |
| ವಿಹಂಗಸ್ವನ | - | ಹಕ್ಕಿಯ ಧ್ವನಿ |
| ವೇದ ಪ್ರಯುತ | - | ಎಲ್ಲಾ ವೇದಗಳ ತಿಳಿದವ |
| ವ್ಯಸನ | - | ಚಟ, ವ್ಯಥೆ |
| ವ್ಯಾಸ | - | ಹರವು; ವಿಸ್ತಾರ |
| ವೈರ | - | ದ್ವೇಷ, ಹಗೆತನ |
| ಸಂಗ | - | ಒಡನಾಟ, ಸಾಮರಸ್ಯ |
| ಸಂದು | - | ಮೂಲೆ, ಬಿರುಕು, ಸೀಳು |
| ಸಗ್ಗ | - | ನಾಕ, ಸ್ವರ್ಗ |
| ಸತಾಯಿಸು | - | ರೇಗಿಸು, ತಮಾಷೆ ಮಾಡು |
| ಸತ್ಪುರುಷ | - | ಸದಾಚಾರಿ , ಸಜ್ಜನ |
| ಸರಣಿ | - | ದಾರಿ, ಕ್ರಮ, ಶೈಲಿ, ನೇರವಾದ ಸಾಲು |
| ಸಲ್ಲದು | - | ಕೂಡದು, ಆಗದು |
| ಸಾತ್ವಿಕ | - | ಸಾಧು ಸ್ವಭಾವವುಳ್ಳ |
| ಸಾಮುದಾಯಿಕ | - | ಸಮುದಾಯಕ್ಕೆ ಸಂಬಂಧಿಸಿದ |
| ಸಹಾನುಭೂತಿ | - | ಅನುಕಂಪ, ದಯೆ |
| ಸಾರಥಿ | - | ರಥವನ್ನು ನಡೆಸುವವ, ಮುಂದಾಳು. |
| ಸ್ಥಾವರ | - | ಚಲನಶಕ್ತಿಯಿಲ್ಲದೆ ಇದ್ದಲ್ಲಿಯೇ ಇರುವ ಬೆಟ್ಟ, ಭೂಮಿ, ಮರ ಮುಂತಾದವು |
| ಸ್ವಾರ್ಜಿತ | - | ಸ್ವಯಂ ಗಳಿಸಿದ |
| ಸ್ವಾರ್ಥ | - | ಸ್ವಹಿತ , ಸ್ವ ಪ್ರಯೋಜನ |
| ಸಿರಿ | - | ಸಂಪತ್ತು, ಚೆಲುವು, ಅಭ್ಯುದಯ, |
| ಸೀತಾಳಿ | - | ಒಂದು ಬಗೆಯ ಸಸ್ಯ ಮತ್ತು ಅದರ ಹೂವು |
| ಸುಜನ | - | ಸಜ್ಜನ |
| ಸುಧೀಮ | - | ಸುಜ್ಞಾನಿ, ಬುದ್ಧಿವಂತ, ಒಳ್ಳೆಯ ಜ್ಞಾನಿ |
| ಸುಪ್ಪತ್ತಿಗೆ | - | ಮೃದುವಾದ ಹಾಸಿಗೆ , ಗಾದಿ, ತಲ್ಪ. |

| | | |
|---|---|---|
| ಸುಳಿವು | - | ಗುರುತು; ಕುರುಹು |
| ಸೂಜಿಗಲ್ಲು | - | ಅಯಸ್ಕಾಂತ |
| ಸೂಪರ್ ಡಿಲಕ್ಸ್ | - | ಸುವಿಹಾರಿ, ಸುಖಾಸೀನ |
| ಸೆರಗು | - | ಅಂಚು, ತುದಿ,ಭಾಗ |
| ಸೊಂಪು | - | ಸೊಗಸು, ಚೆಲುವು,ಕಾಂತಿ |
| ಸೊಲ್ಲಿಸು | - | ಮಾತನಾಡಿಸು, ಹೇಳಿಸು. |
| ಸೋಂಕು | - | ಮುಟ್ಟು, ಸ್ಪರ್ಶಿಸು |
| ಸೌಜನ್ಯ | - | ಒಳ್ಳೆಯತನ, ಸಜ್ಜನಿಕೆ |
| ಶಕ್ಯ | - | ಸಾಧ್ಯವಾದುದು,ಮಾಡಬಹುದಾದುದು |
| ಶಪಥ | – | ಪ್ರತಿಜ್ಞೆ |
| ಶಿಷ್ಟಾಚಾರ | - | ಯೋಗ್ಯವಾದ ನಡತೆ |
| ಶ್ರೀರಕ್ಷೆ | - | ಭದ್ರವಾದ ರಕ್ಷಣೆ |
| ಶುಶ್ರೂಷೆ | - | ಉಪಚಾರ, ಆರೈಕೆ |
| ಶೈಲ | - | ಬೆಟ್ಟ, ಪರ್ವತ, ಶಿಲೆಯಿಂದ ನಿರ್ಮಿತವಾದ |
| ಶೃಂಗ | - | ಬೆಟ್ಟದ ತುದಿ, ಶಿಖರ |
| ಶ್ರೋತ್ರಿ | - | ವೇದಾಧ್ಯಯನ ಮಾಡಿದ ಬ್ರಾಹ್ಮಣ |
| ಹಂಗು | - | ಋಣ, ಅವಲಂಬನೆ , ಸಂಬಂಧ |
| ಹಬೆ | - | ಆವಿ, ಉಗಿ,ಕಾಂತಿ |
| ಹರಣ | – | ಪ್ರಾಣ |
| ಹಸೆ | - | ಮದುವೆ ಮೊದಲಾದ ಶುಭಕಾರ್ಯಗಳಲ್ಲಿ ಹಾಕುವ ಆಸನ, ರಂಗವಲ್ಲಿಯಿಂದ ಮಾಡುವ ಚಿತ್ರ |
| ಹಳು | - | ಕಾಡು, ಅರಣ್ಯ |
| ಹಿತಕರವಾದ | - | ಸುಖಕರವಾದ |
| ಹುಗ್ಗಿ | - | ಒಂದು ಬಗೆಯ ಖಾದ್ಯ, ಪಾಯಸ |
| ಹುಟ್ಟು | - | ಜೇನುಗೂಡು |
| ಹೈನುಗಾರಿಕೆ | - | ಜಾನುವಾರು ಸಾಕಣೆ |
| ಹೊನಲು | - | ಪ್ರವಾಹ, ಹೊಳೆ |
| ಹೋರು | - | ಕಾದಾಡು, ಹೋರಾಡು |
| ಹೋರಟೆ | - | ಹೋರಾಟ, ಕದನ |
| ಹಂಸತೂಲಿಕಾತಲ್ಪ | - | ಹಂಸದ ನವಿರಾದ ಗರಿಗಳಿಂದ ಮಾಡಿದ ಹಾಸಿಗೆ |

# ರಾಷ್ಟ್ರಕವಿಗಳು



ಮಂಜೇಶ್ವರ ಗೋವಿಂದ ಪೈ



ಕುವೆಂಪು



ಡಾ. ಜಿ. ಎಸ್. ಶಿವರುದ್ರಪ್ಪ

# ಟಿಪ್ಪಣಿಗಳು

# ಟಿಪ್ಪಣಿಗಳು

# ಟಿಪ್ಪಣಿಗಳು

# ಭಾರತದ ಸಂವಿಧಾನ

ಭಾಗ IV ಕ

## ಕರ್ತವ್ಯಗಳು

51ಕ. **ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಘೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು.

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ? ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಹಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಾಚರಿಸುತ್ತಿದೆ. 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳು ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

## ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.


**ಸಂಪರ್ಕಿಸಬೇಕಾದ ವಿಳಾಸ**

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

'ಶ್ರೀ ಗಣೇಶ್', ಟಿ.ಸಿ. 14/2036, ವಾನ್ ರೋಸ್ ಜಂಕ್ಷನ್, ತಿರುವನಂತಪುರ-34

ಫೋನ್ : 0471-2326603

E-mail : childrightscpcr@kerala.gov.in, rtecpcr@kerala.gov.in

Website : www.kescpcr.kerala.gov.in.


**ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400**

ಕೇರಳ ಪೋಲೀಸ್ ಸಹಾಯವಾಣಿ : 0471-3243000/44000/45000

Online R.T.E Monitoring : www.nireekshana.org.in